ಸಂಪುಟ: 13 Volume ಸಂಚಿಕೆ: 310 Issue ಪುಟಗಳು 08 Pages ಗುರುವಾರ 29 ಜನವರಿ 2026 ₹6 PRGINO.120927 (RNINO: KARKAN/2011/48371) BDR/054/2026-2027 www.mallammanudi.in mallammanudi@gmail.com 9448604450

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ

**ಬೆಳಗು**

ಶರೀರ ಕೃಷಿ ಭೂಮಿಯಾಗಿದೆ. ಮನಸ್ಸು ಕೃಷಿಯಾಗಿದೆ. ಪಾಪ ಪುಣ್ಯಗಳು ಬೀಜಗಳಾಗಿವೆ. ಯಾವ ಬೀಜವನ್ನು ಬಿತ್ತುತ್ತಾನೋ ಅದನ್ನು ಕೊಯ್ಯುತ್ತಾನೆ.

–ತುಳಸೀದಾಸರು

ಮೆಕ್ಕೆಜೋಳ: ರೈತರಿಂದ ಮುತ್ತಿಗೆ 6

ಮಕ್ಕಳಿಗೆ ಶಿಕ್ಷಣದ ಜತೆಗೆ ಸಂಸ್ಕಾರ ಬಹಳ ಮುಖ್ಯ 7

ಜಗದ್ಗುರು ಪತ್ತಿನ ಸಹಕಾರ ಸೌಹಾರ್ದ ಬ್ಯಾಂಕ್ ಅಲ್ಲ 8



ಕರ್ನಾಟಕ ಸರ್ಕಾರದ ಮಾಜಿ ಮುಖ್ಯಮಂತ್ರಿಗಳು ಹಾಗೂ ಹಾವೇರಿ – ಗದಗ ಲೋಕಸಭಾ ಕ್ಷೇತ್ರದ ಸಂಸದರಾದ ಶ್ರೀ ಬಸವರಾಜ ಬೊಮ್ಮಾಯಿರವರು ತಮ್ಮ 66 ನೇಯ ಜನ್ಮದಿನದ ಅಂಗವಾಗಿ ಇಂದು ಹುಬ್ಬಳ್ಳಿಯ ನವನಗರದಲ್ಲಿರುವ ಕರ್ನಾಟಕ ಸರ್ಕಾರದ ಮಾಜಿ ಮುಖ್ಯಮಂತ್ರಿಗಳು ಹಾಗೂ ಕೇಂದ್ರದ ಮಾಜಿ ಸಚಿವರಾದ ದಿವಂಗತ ಶ್ರೀ ಎಸ್ ಆರ್ ಬೊಮ್ಮಾಯಿರವರು ಹಾಗೂ ಮಾತೋಶ್ರೀ ಗಂಗಮ್ಮ ಸೋಮಪ್ಪ ಬೊಮ್ಮಾಯಿರವರ ಸಮಾಧಿ ಸ್ಥಳಕ್ಕೆ ಭೇಟಿ ನೀಡಿ ಗೌರವ ಸಲ್ಲಿಸಿ, ಆಶೀರ್ವಾದ ಪಡೆದುಕೊಂಡರು.

## ಸಾಮಾಜಿಕ ಬದ್ಧತೆಯ ಸರ್ಕಾರ



• ಮಲ್ಲಮ್ಮ ನುಡಿ ವಾರ್ತೆ ನವದೆಹಲಿ

ನನ್ನ ಸರ್ಕಾರ ನಿಜವಾದ ಸಾಮಾಜಿಕ ನ್ಯಾಯಕ್ಕೆ ಬದ್ಧವಾಗಿದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಬುಧವಾರ ಹೇಳಿದ್ದಾರೆ. ಲೋಕಸಭೆ ಮತ್ತು ರಾಜ್ಯಸಭೆಯ ಜಂಟಿ ಅಧಿವೇಶನವನ್ನುದ್ದೇಶಿಸಿ ಮಾತನಾಡಿದ ಮುರ್ಮು, ಪ್ರಸ್ತುತ ಸರ್ಕಾರವು ದೇಶದ ಅಭಿವೃದ್ಧಿಯನ್ನು ತ್ವರಿತಗೊಳಿಸಿದೆ. ಮಹಿಳೆಯರು ಮತ್ತು ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದ ದೇಶದ 95 ಕೋಟಿ ನಾಗರಿಕರಿಗೆ ಸಾಮಾಜಿಕ ಭದ್ರತಾ ಸೌಲಭ್ಯಗಳು ಈಗ ಲಭ್ಯವಾಗಿವೆ. 10 ವರ್ಷಗಳಲ್ಲಿ 25 ಕೋಟಿ ಭಾರತೀಯರು ಬಡತನದಿಂದ ಮುಕ್ತರಾಗಿದ್ದಾರೆ ಎಂದು ವಿವರಿಸಿದ್ದಾರೆ.

## 50ನೇ ಯಶಸ್ವೀ ಪ್ರದರ್ಶನ ಅಕ್ಕ

• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ಮರಾಠಿ, ತೆಲುಗು, ಉರ್ದು ಭಾಷೆಗಳ ಪ್ರಭಾವ ವಿರುವ ಗಡಿ ಭಾಗದಲ್ಲಿ ಜಗನ್ಮಾತೆ ಅಕ್ಕಮಹಾದೇವಿ ಕನ್ನಡ ಚಲನ ಚಿತ್ರವು ಯಶಸ್ವಿ ಪ್ರದರ್ಶನಗೊಳ್ಳುತ್ತಾ 50ನೇ ದಿನದತ್ತ ದಾಪುಗಾಲು ಹಾಕುತ್ತಿರುವುದು ಚಿತ್ರತಂಡಕ್ಕೆ ಸಂತಸ ನೀಡಿದೆ ಎಂದು ಚಲನಚಿತ್ರ ನಟ, ನಿರ್ದೇಶಕ ವಿಷ್ಣುಕಾಂತ ಬಿ.ಜೆ ಅಭಿಪ್ರಾಯಪಟ್ಟಿದ್ದಾರೆ. ಪಟ್ಟಣದ ಚನ್ನಬಸವಾಶ್ರಮ ಪರಿಸರದಲ್ಲಿ ವಚನ ಸಮೂಹ ಸಂಸ್ಥೆ ಆಯೋಜಿಸಿದ್ದ ನೂತನ ಕಚೇರಿ ಉದ್ಘಾಟನೆ ಮತ್ತು ವಿವಿಧ ಯೋಜನೆಗಳ ಮಾಹಿತಿ ಕಾರ್ಯಕ್ರಮದಲ್ಲಿ ಜಗನ್ಮಾತೆ ಅಕ್ಕಮಹಾದೇವಿ ಚಲನ ಚಿತ್ರದ 50ನೇ ದಿನದತ್ತ ಯಶಸ್ವಿ ಪ್ರದರ್ಶನ ಭಿತ್ತಿ ಪತ್ರ ಬಿಡುಗಡೆ ಮಾಡಿ ಅವರು ಮಾತನಾಡಿದ್ದಾರೆ. ಬಸವಕಲ್ಯಾಣ ಅನುಭವ ಮಂಟಪ ಸಂಚಾಲಕ ಶ್ರೀ ಶಿವಾನಂದ ಮಹಾಸ್ವಾಮಿಗಳು ಸಾನಿಧ್ಯವಹಿಸಿದ್ದರು. ವಚನ ಸಮೂಹ ಸಂಸ್ಥೆಯ ಅಧ್ಯಕ್ಷ ಅಲ್ಲಮಪ್ರಭು ನಾವದಗೆರೆ ಅಧ್ಯಕ್ಷತೆ ವಹಿಸಿ ಮಾತನಾಡಿದರು. ವಚನ ಸಮೂಹ ಸಂಸ್ಥೆಯ ನಿರ್ದೇಶಕ ಚಂದ್ರಕಾಂತ ಬಿರಾದಾರ ಪ್ರಾಸ್ತಾವಿಕವಾಗಿ ಮಾತನಾಡಿದ್ದಾರೆ.





ಶ್ರೀಲಂಕಾದ ಸಂಸತ್ ಸದಸ್ಯರಾದ ನಮಲ್ ರಾಜಪಕ್ಷ ಮತ್ತು ಗೀತಾನಾಥ್ ಕಾಸಿಲಿಂಗಮ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಕಾವೇರಿ ನಿವಾಸದಲ್ಲಿ ಸೌಜನ್ಯದ ಭೇಟಿಯಾಗಿ ಕುಶಲೋಪರಿ ವಿಚಾರಿಸಿದರು. ಮುಖ್ಯಮಂತ್ರಿಗಳು ಇವರನ್ನು ಸನ್ಮಾನಿಸಿ ಶುಭ ಕೋರಿದರು.

# ಫೋನ್ ಕದ್ದಾಲಿಕೆಯ ಸದ್ದು

### ಜಂಟಿ ಅಧಿವೇಶನದಲ್ಲಿ ಗಂಭೀರ ವಿಷಯ ಚರ್ಚೆ | ಕಾನೂನು ಸಚಿವರಿಗೂ ಪ್ರತಿ ಪಕ್ಷಗಳಿಗೂ ಚಕಮಕಿ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಜಂಟಿ ಅಧಿವೇಶನದಲ್ಲಿ ರಾಜ್ಯಪಾಲರು ಸದನವನ್ನು ಉದ್ದೇಶಿಸಿ ಮಾತನಾಡಬಾರದು ಎಂದು ದೆಹಲಿಯಿಂದ ಫೋನ್ ಕರೆ ಬಂದಿತ್ತು ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಖಾತೆ ಸಚಿವ ಎಚ್ ಕೆ ಪಾಟೀಲ್ ಮಾಡಿರುವ ಆರೋಪ ಸದನದಲ್ಲಿ ಗದ್ದಲ ಕೋಲಾಹಲಕ್ಕೆ ಕಾರಣವಾಯಿತು.

**ಪಾಟೀಲ್ ಸವಾಲ್:** ರಾಜ್ಯಪಾಲರು ಯಾವ ಅಧೀನದಲ್ಲಿ ಕೆಲಸ ಮಾಡ್ತಾರೆ. ರಾಜ್ಯಪಾಲರಿಗೆ ದೆಹಲಿಯಿಂದ ಫೋನ್ ಕರೆ ಬರುತ್ತದೆ ಎಂದು ನಾವು ಆರೋಪ ಮಾಡಿದ್ದೇವೆ. ಜವಾಬ್ದಾರಿಯುತ ಸ್ಥಾನದಲ್ಲಿದ್ದು ಈ ಆರೋಪ ಮಾಡಿದ್ದೇನೆ. ಹಾಗಾದರೆ ಕೇಂದ್ರ ಗೃಹ ಇಲಾಖೆ ಈ ಬಗ್ಗೆ ಸ್ಪಷ್ಟನೆ ನೀಡಬೇಕಿತ್ತಲ್ಲವೇ? ಎಂದು ಎಚ್ ಕೆ ಪಾಟೀಲ್ ಸವಾಲು ಹಾಕಿದ್ದಾರೆ.

**ಆಕ್ರೋಶಕ್ಕೆ ಕಾರಣ:** ಕೇಂದ್ರ ಸರ್ಕಾರದ ಕೈಗೊಂಬೆ ಆಗಿದ್ದಾರೆ ರಾಜ್ಯಪಾಲರು. ಗವರ್ನರ್ ಗೆ ಖಖಖ ಕಚೇರಿ ಕೇಶವ ಕೃಪಾದಿಂದಲೇ ಫೋನ್ ಬರುತ್ತದೆ" ಎಂದ ಸಚಿವ ಪ್ರಿಯಾಂಕ್ ಖರ್ಗೆ ಆರೋಪಿಸಿದರು. ಇದು ಬಿಜೆಪಿ ಸದಸ್ಯರ ಆಕ್ರೋಶಕ್ಕೆ ಕಾರಣವಾಯಿತು.



ಫೋನ್ ಟ್ಯಾಪ್ ಅಂದರೆ ಗಂಭೀರ ವಿಷಯ. ಈ ಬಗ್ಗೆ ಯಾರೇ ಮಾತನಾಡುವಾಗ ಜವಾಬ್ದಾರಿಯುತ ಸ್ಥಾನದಲ್ಲಿ ಕುಳಿತವರು ಹೀಗೆ ಮಾತನಾಡಬಾರದು. ಆರೋಪಕ್ಕೆ ಉತ್ತರ ಕೊಡಬೇಕು. ವಿನಾ ಕಾರಣ ಆರೋಪ ಮಾಡಿದರೆ ಅದಕ್ಕೆ ಸೂಕ್ತ ದಾಖಲೆಯನ್ನೂ ಕೊಡಬೇಕಲ್ಲ..?

–ಅಶ್ವತ್ಥ ನಾರಾಯಣ
ಬಿಜೆಪಿ ಸದಸ್ಯ

### ಯಾರೇನೆಂದು ಪ್ರಶ್ನಿಸಿದರು?

ಆರೋಪದ ಬಗ್ಗೆ ಸದನದಲ್ಲಿ ವಿವರಣೆ ನೀಡಲಿ. ಎಂದು ಸುನೀಲ್ ಕುಮಾರ್ ಆಗ್ರಹಿಸಿದರು. ಹಾಗಾದರೆ ರಾಜಭವನದ ಫೋನ್ ಕರೆ ಟ್ಯಾಪ್ ಮಾಡಲಾಗ್ತಿದ್ಯಾ? ಸುರೇಶ್ ಕುಮಾರ್ ಪ್ರಶ್ನಿಸಿದ್ದಾರೆ. ರಾಜ್ಯಪಾಲರಿಗೆ ದೆಹಲಿಯಿಂದ ಫೋನ್ ಬಂದಿದ್ದು ಎಚ್ ಕೆ ಪಾಟೀಲ್ ಗೆ ಹೇಗೆ ಗೊತ್ತಾಯಿತು? ಆರಸ್ಸೆಸ್ ಕಚೇರಿ, ರಾಜಭವನದ ಫೋನ್ ಟ್ಯಾಪ್ ಆಗಿದೆಯಾ ಎಂದು ಆರ್ ಅಶೋಕ್ ಪ್ರಶ್ನಿಸಿದ್ದಾರೆ.

### ತನಿಖೆಗೆ ಆಗ್ರಹಿಸಿದರೆ ಸಿದ್ಧ

ರಾಜ್ಯಪಾಲರು ಯಾವ ಅಧೀನದಲ್ಲಿ ಕೆಲಸ ಮಾಡ್ತಾರೆ. ರಾಜ್ಯಪಾಲರಿಗೆ ದೆಹಲಿಯಿಂದ ಫೋನ್ ಕರೆ ಬರುತ್ತದೆ ಎಂದು ನಾವು ಆರೋಪ ಮಾಡಿದ್ದೇವೆ. ತನಿಖೆ ಮಾಡಬೇಕು ಎಂದು ಕೇಳಿ, ಅವಾಗ ನಾವು ತನಿಖೆಗೆ ನೀಡತ್ತೇವೆ. ನಾನು ಆರೋಪ ಮಾಡಿದ್ದೇನೆ. ಫೋನ್ ಬಾರದೆ ಇದ್ದರೆ ಈ ಬಗ್ಗೆ ಸ್ಪಷ್ಟನೆ ನೀಡಬೇಕಾಗಿತ್ತು ಎಂದು ಎಚ್ ಕೆ ಪಾಟೀಲ್ ಸವಾಲು ಹಾಕಿದ್ದಾರೆ.

### ತುಳು ಭಾಷೆ: ಸ್ವಾರಸ್ಯ ಚರ್ಚೆ

ತುಳು ಭಾಷೆಯನ್ನು ರಾಜ್ಯದ ಎರಡನೇ ಹೆಚ್ಚುವರಿ ಅಧಿಕೃತ ಭಾಷೆಯನ್ನಾಗಿ ಘೋಷಣೆ ಮಾಡುವ ವಿಚಾರ ಸದನದಲ್ಲಿ ಸ್ವಾರಸ್ಯಕರ ಚರ್ಚೆಗೆ ಗ್ರಾಸವಾಯಿತು. ಈ ಭಾಷೆಯನ್ನಾಗಿ ಘೋಷಣೆ ಮಾಡುವ ಪ್ರಸ್ತಾವನೆ ಯಾವ ಹಂತದಲ್ಲಿದೆ? ಕಾಲ ಮಿತಿಯಲ್ಲಿ ಘೋಷಣೆ ಮಾಡಲಾಗುತ್ತಾ?" ಎಂದು ಅಶೋಕ್ ರೈ ಪ್ರಶ್ನೆ ಕೇಳಿದ್ದರು. ಈ ವೇಳೆ ಶಾಸಕರ ನಡುವೆ ತುಳು ಭಾಷೆಯಲ್ಲೇ ಮಾತಿನ ವಿನಿಮಯ ಆಯಿತು.

## ಪವಾರ್ ದುರ್ಮರಣ ಆಘಾತಕಾರಿ



**ಬೆಂಗಳೂರು:** ಮಹಾರಾಷ್ಟದ ಹಿರಿಯ ರಾಜಕಾರಣಿ, ಅಲ್ಲಿನ ಉಪ ಮುಖ್ಯಮಂತ್ರಿಗಳಾದ ಅಜಿತ್ ಪವಾರ್ ಅವರು ವಿಮಾನ ದುರಂತದಲ್ಲಿ ದುರ್ಮರಣ ಹೊಂದಿರುವುದು ಬಹಳ ಆಘಾತಕಾರಿ ಸುದ್ದಿ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ.ವಿಜಯೇಂದ್ರ ಅವರು ತಿಳಿಸಿದ್ದಾರೆ.

ಮಾಧ್ಯಮಗಳ ಜೊತೆ ಇಂದು ಮಾತನಾಡಿದ ಅವರು, 8 ಬಾರಿ ಶಾಸಕರಾಗಿ, ಆ ರಾಜ್ಯದ ಉಪ ಮುಖ್ಯಮಂತ್ರಿಗಳಾಗಿದ್ದು, ಬೇರೆ ಬೇರೆ ಇಲಾಖೆಗಳನ್ನೂ ನಿರ್ವಹಿಸಿದ್ದ ಒಬ್ಬ ಹಿರಿಯ ರಾಜಕಾರಣಿ ವಿಮಾನ ದುರಂತದಲ್ಲಿ ಇನ್ನಿಲ್ಲವಾದುದು ಬಹಳ ನೋವು ತರುವ ಸಂಗತಿ ಎಂದು ತಿಳಿಸಿದರು. ಆ ನೋವನ್ನು ತಡೆಯುವ ಶಕ್ತಿಯನ್ನು ಭಗವಂತನು ಅವರ ಬೆಂಬಲಿಗರಿಗೆ ನೀಡಲಿ; ಅವರ ಕುಟುಂಬ ಸದಸ್ಯರಿಗೂ ನೋವು ತಡೆಯುವ ಶಕ್ತಿಯನ್ನು ಭಗವಂತನು ದಯಪಾಲಿಸಲಿ ಎಂದು ಅವರು ಪ್ರಾರ್ಥಿಸಿದರು.

## ಗ್ರಾಪಂಗಳಿಗೆ ಮಹಾತ್ಮಾ ಗಾಂಧೀಜಿ ಹೆಸರು

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ರಾಜ್ಯದ ಆರು ಸಾವಿರ ಗ್ರಾಮ ಪಂಚಾಯತಿಗಳಿಗೆ ರಾಷ್ಟ್ರಪಿತ ಮಹಾತ್ಮಾ ಗಾಂಧಿ ಹೆಸರು ಇಡಲು ತೀರ್ಮಾನ ಮಾಡಲಾಗಿದೆ. ಈ ಕುರಿತಾಗಿ ನಗರದ ಫ್ರೀಡಂ ಪಾರ್ಕ್ ನಲ್ಲಿ ನಡೆದ ರಾಜಭವನ ಚಲೋದಲ್ಲಿ ಪ್ರತಿಭಟನೆಯಲ್ಲಿ ಸಿಎಂ ಸಿದ್ದರಾಮಯ್ಯ ಘೋಷಣೆ ಮಾಡಿದರು.

ಪ್ರತಿಭಟನೆ ಯಲ್ಲಿ ಮಾತನಾಡಿದ ಸಿದ್ದರಾಮಯ್ಯ, ಪ್ರತಿ ಗ್ರಾಮ ಪಂಚಾಯತಿಗೆ ಮಹಾತ್ಮಾ ಗಾಂಧಿ ಹೆಸರು. ಮುಂದಿನ ಬಜೆಟ್ ನಲ್ಲಿ ಘೋಷಣೆ ಮಾಡುತ್ತೇವೆ. 6000 ಗ್ರಾಮ ಪಂಚಾಯತಿಗಳು ಇವೆ. ಅವುಗಳಿಗೆ ಮಹಾತ್ಮಾ ಗಾಂಧಿ ಹೆಸರು ಇಡುತ್ತೇವೆ" ಎಂದು ತಿಳಿಸಿದ್ದಾರೆ. ಮನರೇಗಾ ರದ್ದು ಮಾಡಿ ವಿಬಿ ಜಿ ರಾಮ್ ಜಿ ಕಾಯ್ದೆ ತಂದಿದ್ದಾರೆ. ಯುಪಿಎ ಸರ್ಕಾರದ ಅವಧಿಯಲ್ಲಿ ಅನೇಕ ಕಾಯ್ದೆ ಜಾರಿಗೊಂಡಿತ್ತು. ಬಡವರು, ದಲಿತರು, ಅಲ್ಪಸಂಖ್ಯಾತರು, ರೈತರ ಬಗ್ಗೆ ಕಾಂಗ್ರೆಸ್ ಮಾತ್ರ ಚಿಂತನೆ ಮಾಡುತ್ತದೆ. ಎಲ್ಲಾ ಕಾರ್ಯಕ್ರಮ ನಾಶ ಮಾಡಿ ಉದ್ಯೋಗ ಸಿಗದಂತೆ ಮಾಡಿದ್ದಾರೆ ಎಂದು ಆರೋಪಿಸಿದ್ದಾರೆ.

## ನಿಗಮ ಮಂಡಳಿ: ಮಹತ್ವದ ಸೂಚನೆ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಕರ್ನಾಟಕದ 25 ನಿಗಮ ಮಂಡಳಿಗಳ ಅಧ್ಯಕ್ಷ ಸ್ಥಾನ ಮುಕ್ತಾಯವಾದ ಹಿನ್ನೆಲೆ ಹಾಲಿ ಅಧ್ಯಕ್ಷರನ್ನು ಮುಂದಿನ ಆದೇಶದವರೆಗೂ ಮುಂದುವರೆಸಿ ರಾಜ್ಯ ಸರ್ಕಾರ ಮಹತ್ವದ ಅಧಿಸೂಚನೆ ಹೊರಡಿಸಿದೆ.

ಸರ್ಕಾರವು 2024 ಜನವರಿ 26 ರಂದು ರಾಜ್ಯದ ನಿಗಮ ಮಂಡಳಿಗಳಿಗೆ ಅಧ್ಯಕ್ಷರನ್ನಾಗಿ ಶಾಸಕರುಗಳನ್ನು ನೇಮಕ ಮಾಡಲಾಗಿತ್ತು. ಅವರಿಗೆ ಸಚಿವ ಸಂಪುಟ ದರ್ಜೆಯ ಸ್ಥಾನಮಾನ ನೀಡಲಾಗಿತ್ತು. 2026 ಜನವರಿ 26 ಕ್ಕೆ ಎರಡು ವರ್ಷಗಳ ಅವಧಿ ಮುಗಿದ ಹಿನ್ನೆಲೆ ಅಧ್ಯಕ್ಷರನ್ನು ಬದಲಾವಣೆ ಮಾಡಲಾಗುತ್ತೆದೆಯೋ ಅಥವಾ ಮುಂದುವರೆಸುತ್ತಾರೋ ಎಂಬ ಕುತೂಹಲ ಹಲವರಲ್ಲಿತ್ತು.

## ಮಕ್ಕಳಿಗೆ ಶಿಕ್ಷಣ ಜತೆ ಸಂಸ್ಕಾರ ಬೇಕು



• ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ್

ಮಕ್ಕಳು ಸಂಸ್ಕಾರದಿಂದ ಬೆಳೆಯಬೇಕು; ಆಗಲೇ ದೇಶ ಉನ್ನತಿಯಾಗಲು ಸಾಧ್ಯ ಎಂದು ಬೀದರ್ ಸಂಸ್ಕೃತಿಕ ಸಂಘ ಬೆಂಗಳೂರಿನ ಅಧ್ಯಕ್ಷರಾದರಾಜಶೇಖರ ಕಮ್ಮಾ ಹೇಳಿದ್ದಾರೆ. ಬುಧುವಾರ ನಗರದ ಭವಾನಿ ಬಡಾವಣೆಯ ಕು. ಸಾನ್ವಿ ರಮೇಶರೆಡ್ಡೆ ರವರ 12 ಹುಟ್ಟು ಹಬ್ಬದಲ್ಲಿ ಭಾಗವಹಿಸಿ ಮಾತನಾಡುತ್ತಿದ್ದರು.ಮಕ್ಕಳಲ್ಲಿ ನೈತಿಕ ಮೌಲ್ಯಗಳು, ಶಿಸ್ತು, ಸಂಸ್ಕಾರ ಬೆಳೆಸಿದರೆ ಅವರು ಉತ್ತಮ ನಾಗರಿಕರಾಗುತ್ತಾರೆ. ಉತ್ತಮ ನಾಗರಿಕರೇ ರಾಷ್ಟ್ರದ ಭವಿಷ್ಯವನ್ನು ರೂಪಿಸುತ್ತಾರೆ. ಆದ್ದರಿಂದ ಕುಟುಂಬ, ಸಮಾಜ ಮತ್ತು ಶಿಕ್ಷಣ ವ್ಯವಸ್ಥೆ ಮಕ್ಕಳ ಸಂಸ್ಕಾರಕ್ಕೆ ಆದ್ಯತೆ ನೀಡಬೇಕಾಗಿದೆ.ಎಂದರು. ಈ ಸಂದರ್ಬದಲ್ಲಿ ಮಹೋನರೆಡ್ಡೆ, ಗೋಪಾಲಕೃಷ್ಣ ಕಮ್ಮಾ, ವೆಂಕಟಸ್ವಾಮಿ ನಾಯ್ಡು, ರಮೇಶರಡ್ಡಿ, ಶ್ವೇತಾ, ಸಂಗೀತಾ, ಬಸವರಾಜ ದಿಗಡೆ, ಆರಾಧ್ಯ ರೆಡ್ಡೆ, ಲಲಿತಾ ಕಮ್ಮಾ, ಸೇರಿದಂತೆ ಇತರರಿದ್ದರು.

## ಸಿಎಂ ಕುಟುಂಬಕ್ಕೆ ರಿಲೀಫ್

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಮುಡಾ ಹಗರಣದಲ್ಲಿ ಸಿಎಂ ಸಿದ್ದರಾಮಯ್ಯ ಸೇರಿದಂತೆ ಅವರ ಕುಟುಂಬಕ್ಕೆ ಬಿಗ್ ರಿಲೀಫ್ ಸಿಕ್ಕಿದ್ದು ಲೋಕಾಯುಕ್ತ ಸಲ್ಲಿಸಿದ ಬಿ ರಿಪೋರ್ಟ್ ಅನ್ನು ಜನಪ್ರತಿನಿಧಿಗಳ ವಿಶೇಷ ಕೋರ್ಟ್ ಪುರಸ್ಕರಿಸಿದೆ. ಅದರಂತೆ ಸಿದ್ದರಾಮಯ್ಯ, ಪತ್ನಿ ಪಾರ್ವತಿ, ಬಾಮೈದ ಮಲ್ಲಿಕಾರ್ಜುನ ಸ್ವಾಮಿ ಹಾಗೂ ಜಮೀನು ಮಾಲೀಕ ದೇವರಾಜುಗೆ ಬಿಗ್ ರಿಲೀಫ್ ಸಿಕ್ಕಿದೆ. ಈ ನಾಲ್ವರ ಕುರಿತಂತೆ ಲೋಕಾಯುಕ್ತ ಸಲ್ಲಿಸಿದ್ದ ಬಿ ರಿಪೋರ್ಟ್ ಅನ್ನು ಕೋರ್ಟ್ ಪುರಸ್ಕರಿಸಿದೆ. ಇನ್ನು ಉಳಿದವರ ವಿರುದ್ಧ ತನಿಖೆ ನಡೆಸಲು ಕೋರ್ಟ್ ಆದೇಶಿಸಿದೆ. ಮುಡಾ ಹಗರಣದಲ್ಲಿ ಸಿಎಂ ಸಿದ್ದರಾಮಯ್ಯ, ಪತ್ನಿ ಪಾರ್ವತಿ ಸೇರಿ ನಾಲ್ವರ ವಿರುದ್ಧ ಲೋಕಾಯುಕ್ತ ನೀಡಿದ್ದ ಕ್ಲೀನ್ಚಿಟ್ ಪ್ರಶ್ನಿಸಿ ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಸಲ್ಲಿಸಿದ್ದ ಅರ್ಜಿಯನ್ನು ಕೋರ್ಟ್ ವಜಾ ಮಾಡಿದೆ. ಲೋಕಾಯುಕ್ತ ಪೊಲೀಸರ ಬಿ–ರಿಪೋರ್ಟ್ ಪ್ರಶ್ನಿಸಿ ಸ್ನೇಹಮಯಿ ಕೃಷ್ಣ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ಮೆಟ್ಟಿಲೇರಿದ್ದರು. ಈ ಪ್ರಕರಣ ವಾದ ಪ್ರತಿವಾದ ಆಲಿಸಿದ ಕೋರ್ಟ್ ಅರ್ಜಿಯನ್ನು ವಜಾ ಮಾಡಿ, ಲೋಕಾಯುಕ್ತ ಬಿ ರಿಪೋರ್ಟ್ ಪುರಸ್ಕರಿಸಿದೆ.




## ವಿಮಾನ ಪತನ: ಪವಾರ್ ಸಾವು



• ಮಲ್ಲಮ್ಮ ನುಡಿ ವಾರ್ತೆ ಮುಂಬೈ

ಬುಧವಾರ ಬೆಳಗ್ಗೆ ಸಂಭವಿಸಿದ ವಿಮಾನ ಅಪಘಾತದಲ್ಲಿ ಮಹಾರಾಷ್ಟ್ರ ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಅವರು ಮೃತಪಟ್ಟಿದ್ದಾರೆ. ಅವರ ಈ ದುರಂತ ಮತ್ತು ಅಕಾಲಿಕ ಮರಣವು ರಾಜ್ಯದ ಬಿಜೆಪಿ ನೇತೃತ್ವದ ಸಮ್ಮಿಶ್ರ ಸರ್ಕಾರದಲ್ಲಿ ನಿರ್ವಾತವನ್ನು ಉಂಟುಮಾಡಿರುವುದರ ಜೊತೆಗೆ ಎನ್ಸಿಪಿಯ ಭವಿಷ್ಯದ ಮೇಲೆಯೂ ಕರಿನೆರಳು ಬೀರಿದೆ. ಅಜಿತ್ ಪವಾರ್ ನಿಧನದ ನಂತರ ರಾಷ್ಟ್ರೀಯವಾದಿ ಕಾಂಗ್ರೆಸ್ ಪಕ್ಷ (ಎನ್ಸಿಪಿ) ನಾಯಕತ್ವದ ಬಿಕ್ಕಟ್ಟನ್ನು ಎದುರಿಸುವ ಸಾಧ್ಯತೆಯಿದೆ. ಏಕೆಂದರೆ, ಪಕ್ಷಕ್ಕೆ ಎರಡನೇ ನಾಯಕ ಇಲ್ಲ ಎಂದು ರಾಜಕೀಯ ವೀಕ್ಷಕರು ಹೇಳುತ್ತಾರೆ. 'ಗಡಿಯಾರ'ದ ಚಿಹ್ನೆಯನ್ನು ಹೊಂದಿರುವ ಪಕ್ಷವು ತನ್ನ ನಿರ್ವಿವಾದ ನಾಯಕನನ್ನು ಕಳೆದುಕೊಂಡಿರುವುದರಿಂದ, ಪಕ್ಷದ ಉಳಿವು ಮತ್ತು ಏಪ್ರಿಲ್ನಲ್ಲಿ ರಾಜ್ಯಸಭಾ ಸದಸ್ಯತ್ವ ಕೊನೆಗೊಳ್ಳಲಿರುವ ಅದರ ಸಂಸ್ಥಾಪಕ ಶರದ್ ಪವಾರ್ ಅವರೊಂದಿಗೆ ಭವಿಷ್ಯದ ಸಮೀಕರಣದ ಬಗ್ಗೆ ಪ್ರಶ್ನೆಗಳು ಉದ್ಭವಿಸಿವೆ.

## ಜೀವನದ ಕೊನೆವರೆಗೂ ಪ್ರಾಮಾಣಿಕವಾಗಿ ಶಿಗ್ಗಾವಿ ಸವಣೂರು ಕ್ಷೇತ್ರದ ಜನರ ಸೇವೆ ಮಾಡುತ್ತೇನೆ:ಬಸವರಾಜ ಬೊಮ್ಮಾಯಿ

# ತೃಪ್ತಿಯ ಮನೋಭಾವನೆ ಬೆಳೆಸಿಕೊಂಡರೆ ನೆಮ್ಮದಿಯ ಜೀವನ ನಡೆಸಲು ಸಾಧ್ಯ: ಮರುಳಾರಾಧ್ಯ ಶಿವಾಚಾರ್ಯರು

• **ಮಲ್ಲಮ್ಮ ನುಡಿ ವಾರ್ತೆ.ಚಿಟಗುಪ್ಪ:**




ಪ್ರತಿಯೊಬ್ಬರೂ ಇರುವುದರಲ್ಲಿ ತೃಪ್ತಿಯ ಮನೋಭಾವನೆಯನ್ನು ಬೆಳೆಸಿಕೊಂಡರೆ ನೆಮ್ಮದಿಯ ಜೀವನ ನಡೆಸಲು ಸಾಧ್ಯ ಎಂದು ಚಿಟಗುಪ್ಪ ಮತ್ತು ಚಾಂಗಲೇರಾ ಹಿರೇಮಠದ ಪೂಜ್ಯ ಮರುಳಾರಾಧ್ಯ ಶಿವಾಚಾರ್ಯರು ಹೇಳಿದರು. ಪಟ್ಟಣದ ಸಂತ ಶಿರೋಮಣಿ ಶ್ರೀ ಮಡಿವಾಳೇಶ್ವರ ಕಲ್ಯಾಣ ಮಂಟಪದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವತಿಯಿಂದ ಹಮ್ಮಿಕೊಂಡಿದ್ದ ಸಾಮೂಹಿಕ ವರಮಹಾಲಕ್ಷ್ಮಿ ಪೂಜಾ ಹಾಗೂ ಧಾರ್ಮಿಕ ಸಭೆ ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿದ ಅವರು, ಕಾಯಕದಿಂದ ಜೀವನ ಹಸನವಾಗುತ್ತದೆ. ಜೀವನದಲ್ಲಿ ಇರುವುದರಲ್ಲೇ ತೃಪ್ತಿ ಪಡೆದುಕೊಂಡರೆ ಸಂತೃಪ್ತಿಯ ಜೀವನ ಸಾಗಿಸಬಹುದು. ಆದರೆ ಇಂದಿನ ಜನರಲ್ಲಿ ತೃಪ್ತಿಗೆ ಕೊನೆಯೇ ಇಲ್ಲ, ಡಾ. ವೀರೆಂದ್ರ ಹೆಗ್ಗಡೆಯವರು ಮಹಿಳಾ ಸಬಲೀಕರಣ, ಸುಭೀಕ್ಷ ಸಮಾಜ ಚಿಂತನೆಯಲ್ಲಿ ಸ್ಥಾಪಿಸಿದ ಗ್ರಾಮಾಭಿವೃದ್ದಿ ಯೋಜನೆ ಮೂಲಕ ಇಂದು ಸಮಾಜ ಸುಭೀಕ್ಷೆಯಿಂದ ಸಾಗುತ್ತಿದೆ. ಸಂತೃಪ್ತಿ ಜೀವನಕ್ಕಾಗಿ ಸಂಸ್ಥೆಯಿಂದ ಹಮ್ಮಿಕೊಳ್ಳುತ್ತಿರುವ ಧಾರ್ಮಿಕ ಪೂಜಾ ಕಾರ್ಯದಿಂದ ನೆಮ್ಮದಿ ಜೀವನ ನಡೆಸಲು ಸಹಕಾರಿಯಾಗುತ್ತಿದೆ ಎಂದು ಶ್ಲಾಘಿಸಿದ ಶ್ರೀಗಳು ಆಧುನಿಕತೆಯು ಸಮಾಜಕ್ಕೆ ಮಾರಕವಾಗುತ್ತಿರುವ ಇಂದಿನ ದಿನದಲ್ಲಿ ಧಾರ್ಮಿಕ ಕಾರ್ಯಕ್ರಮಗಳ ಅಗತ್ಯ ಇದೆ ಎಂದರು. ಜಿಲ್ಲಾ ಜನಜಾಗೃತಿ ವೇದಿಕೆ ಉಪಾಧ್ಯಕ್ಷ ಮಲ್ಲಿಕಾರ್ಜುನ ಪಾಟೀಲ್ ಮಾತನಾಡಿ, ಸಮಾಜದಲ್ಲಿ ಒಳ್ಳೆಯದು ಕೆಟ್ಟದ್ದು ಇರುತ್ತದೆ. ಸ್ವಚ್ಛ ಮನಸು ಇದ್ದಲ್ಲಿ ಸಮಾಜವನ್ನೂ ಸ್ವಚ್ಛಗೊಳಿಸಲು ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಮಾನಸಿಕ ಮತ್ತು ದೈಹಿಕ ಆರೋಗ್ಯವನ್ನು ಸ್ವಚ್ಛ ಮಾಡಿಕೊಂಡರೆ ತನ್ನ ಸಂಸಾರದಲ್ಲಿ ಮತ್ತು ಸಮಾಜದಲ್ಲಿ ಸ್ವಚ್ಛವಾದ ಬದುಕು ಸಾಗಿಸಬಹುದು ಎಂದರು. ಹಣ, ಆಸ್ತಿಗಳಿಸುವುದೆ ತನ್ನ ಗುರಿ ಎಂದೇ ಜೀವನ ನಡೆಸುತ್ತಿರುವರಲ್ಲಿ ದೈಹಿಕ ಮತ್ತು ಮಾನಸಿಕ ಆರೋಗ್ಯ ಸರಿ ಇರುವುದಿಲ್ಲ. ಈ ನಿಟ್ಟಿನಲ್ಲಿ ಧಾರ್ಮಿಕ ಕಾರ್ಯದಲ್ಲಿ ಪಾಲ್ಗೊಳ್ಳುವುದರಿಂದ ನೆಮ್ಮದಿಯ ಜೀವನ ನಡೆಸುವ ಅನುಭವವನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತದೆ ಎಂದರು. ಜಿಲ್ಲಾ ಜನಜಾಗೃತಿ ವೇದಿಕೆ ಸದಸ್ಯರು ಹಾಗೂ ಪತ್ರಕರ್ತ ರಾಜಕುಮಾರ ಆರ್. ಹಡಪದ ಮಾತನಾಡಿ, ನಿಸ್ವಾರ್ಥ ಸೇವೆಯಿಂದ ವ್ಯಕ್ತಿ ಪರಿಪೂರ್ಣನಾಗುತ್ತಾನೆ. ಪರಮ ಪೂಜ್ಯ ಹೆಗ್ಗಡೆಯವರ ಸಮಾಜಮುಖಿ ಕಾರ್ಯಕ್ರಮಗಳು ದೇಶಕ್ಕೆ ಮಾದರಿಯಾಗಿವೆ. ಶ್ರೀ ಕ್ಷೇತ್ರ ಧರ್ಮಸ್ಥಳ ಸಂಸ್ಥೆಯ ಮೂಲಕ ಆರ್ಥಿಕ ಸ್ವಾವಲಂಬನೆಯ ಜೊತೆಗೆ ಧಾರ್ಮಿಕ ಜಾಗೃತಿಯನ್ನು ಮೂಡಿಸುವ ಕೆಲಸ ರಾಜ್ಯಾದ್ಯಂತ ಪೂಜ್ಯ ಹೆಗ್ಗಡೆಯವರು ಮಾಡುತ್ತಿದ್ದಾರೆ. ಎಲ್ಲಿ ದೇವರ ಸ್ಮರಣೆ ಭಜನೆ ಇದೆಯೋ ಅಲ್ಲಿ ವಿಭಜನೆ ಇಲ್ಲ. ಭಜನೆಯಿಂದ ಭಗವಂತನೆಡೆಗೆ ಸಾಗಲು ಇಂತಹ ಧಾರ್ಮಿಕ ಕಾರ್ಯಕ್ರಮಗಳು ನಡೆಯಬೇಕು. ಪ್ರತಿನಿತ್ಯ ದೇವರ ಸ್ಮರಣೆಗೆ ಸ್ವಲ್ಪ ಸಮಯ ಮೀಸಲಿಡಬೇಕಾದ ಅನಿವಾರ್ಯತೆ ನಮಗಿದೆ ಎಂದರು. ಜನಜಾಗೃತಿ ಸದಸ್ಯರು ಹಾಗೂ ಕನ್ನಡ ಸಾಹಿತ್ಯ ತಾಲೂಕಾಧ್ಯಕ್ಷ ಅನೀಲಕುಮಾರ್ ಸಿಂಧೆ ಮಾತನಾಡಿ, ಸಂಸಾರ ನಿರ್ವಹಣೆಯಲ್ಲಿ ಹಾಗೂ ಮಕ್ಕಳಿಗೆ ಸಂಸ್ಕಾರ ನೀಡುವಲ್ಲಿ ಮಹಿಳೆಯರ ಪಾತ್ರ ಅತ್ಯಂತ ಪ್ರಮುಖವಾದದ್ದು. ಇವತ್ತು ಮಕ್ಕಳಲ್ಲಿ ಧಾರ್ಮಿಕ ಪ್ರಜ್ಞೆ ಕಡಿಮೆಯಾಗುತ್ತಿದ್ದು ಮೊಬೈಲ್ ಇನ್ನಿತರ ವಿಚಾರದಲ್ಲಿ ಆಸಕ್ತಿ ಹೆಚ್ಚುತ್ತಿರುವುದು ವಿಷಾದನೀಯ ಎಂದರು. ಮಹಮ್ಮದ್ ಅಸ್ಲಾಂಮಿಯಾ ಮಾತನಾಡಿ, ಮಹಿಳೆರು ಸಮಾಜದ ಮುಖ್ಯವಾಹಿನಿಯಲ್ಲಿ ತೆಣಟಿಜಜಜಿಟಿಜಜಡಗಿಸಿಕೆಂಡು ಪುರುಷರಂತೆ ಎಲ್ಲ ರಂಗಳಲ್ಲೂ ಪ್ರಾಬಲ್ಯ ಸಾಧಿಸಬಲರು ಎಂದು ಸಾಬೀತು ಪಡಿಸುವ ಅವಕಾಶಗಳಿದ್ದರೂ ಕೆಲವರು ಸದ್ಬಳಕೆ ಮಾಡಿ ಕೊಳ್ಳುತ್ತಿಲ್ಲ. ಆದ್ದರಿಂದ ಮಹಿಳೆಯರನ್ನು ಒಟ್ಟುಗೂಡಿಸಿ ಅವರನ್ನು ಸಬಲರನ್ನಾಗಿ ಮಾಡುವ ಉದ್ದೇಶದಿಂದ ಇಂತಹ ಕಾರ್ಯಕ್ರಮಗಳನ್ನು ಮಾಡುತ್ತಿರುವುದು ಶ್ಲಾಘನೀಯ ಎಂದರು. ಗ್ರಾಮೀಣ ಬ್ಯಾಂಕ ವ್ಯವಸ್ಥಾಪಕಿ ವನಿತಾ ಮಾತನಾಡಿ, ಬ್ಯಾಂಕಗಳಿಂದ ಸಿಗುವ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಿದರು. ಜನಜಾಗೃತಿ ವೇದಿಕೆ ಸದಸ್ಯರು ಹಾಗೂ ಸಾಹಿತಿ ಸಂಗಮೇಶ ಜವಾದಿ ಮಾತನಾಡಿದರು. ಯೋಜನಾಧಿಕಾರಿ ವೀರೇಶಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು. ಒಕ್ಕೂಟದ ಉಪಾಧ್ಯಕ್ಷೆ ಪದ್ಮಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಜನಜಾಗೃತಿ ವೇದಿಕೆ ಸದಸ್ಯರಾದ ಶಾಮರಾವ ಭುತ್ತಾಳೆ, ನರಸಪ್ಪ ನರನಾಳ ಸೇರಿದಂತೆ ಮೇಲ್ವಿಚಾರಕರು, ಸೇವಾ ಪ್ರತಿನಿಧಿಗಳು, ಒಕ್ಕೂಟದ ಪದಾಧಿಕಾರಿಗಳು ಹಾಗೂ ಸ್ವ ಸಹಾಯ ಸಂಘದ ಸದಸ್ಯರು ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಶೋಭಾ ಹೋಳಿ ನಿರೂಪಿಸಿದರು. ನಾಗೇಶ ಸ್ವಾಗತಿಸಿದರು. ಸಿದ್ದು ಪೂಜಾರಿ ವಂದಿಸಿದರು. ನಂತರ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

## 77ನೇ ಗಣರಾಜ್ಯೋತ್ಸವ ಆಚರಣೆ



• **ಮಲ್ಲಮ್ಮ ನುಡಿ ವಾರ್ತೆ,ಚಿಟಗುಪ್ಪ:**

ತಾಲೂಕ ಉಡಬಾಳ ಗ್ರಾಮದ ಗ್ರಂಥಾಲಯ ಕೇಂದ್ರದಲ್ಲಿ 77ನೇ ಗಣರಾಜ್ಯೋತ್ಸವದ ಅಂಗವಾಗಿ ಗ್ರಂಥಾಲಯದ ಮೇಲ್ವಿಚಾರಕಿ ಚಂದಮ್ಮ ಕಾಂಬಳೆ ಅವರು ಸಲಹಾ ಸಮಿತಿಯ ಪದಾಧಿಕಾರಿಗಳೊಂದಿಗೆ ಧ್ವಜಾರೋಹಣ ನೆರವೇರಿಸಿದರು. ಈ ಸಂದರ್ಭದಲ್ಲಿ ಗ್ರಾಮ ಪಂಚಾಯತ್ ಸದಸ್ಯರಾದ ರಾಜರೆಡ್ಡಿ, ಭೀಮಶೆಟ್ಟಿ, ಮಾಣಿಕ, ರಾಘವೇಂದ್ರ, ಪೆಂಟರೆಡ್ಡಿ, ಲಕ್ಷ್ಮಣ, ರೇಣುಕಾ, ಸತ್ಯಮ್ಮ, ರೇಣುಕಾ, ಚಿತ್ರಮ್ಮ,ಚಂದ್ರಕಲಾ ಸೇರಿದಂತೆ ಗ್ರಾಮದ ಪ್ರಮುಖರು ಉಪಸ್ಥಿತರಿದ್ದರು.



ಚಿಟಗುಪ್ಪ: ಪಟ್ಟಣದ ಪುರಸಭೆಯ ಮುಖ್ಯಾಧಿಕಾರಿ ಸತೀಶ ಗುಡ್ಡೆ ರವರು ಮುಂಬಡ್ತಿ ಹೊಂದಿದ ಪ್ರಯುಕ್ತ ಬುಧವಾರ ಸಮಾಜ ಕಾರ್ಯಕರ್ತ ಮಹಮ್ಮದ್ ಅಸ್ಲಾಂಮಿಯಾ ಅವರು ಸನ್ಮಾನಿಸಿ, ನೋಟ್ ಬುಕ್ ಪೆನ್ ನೀಡಿ ಶುಭಾಶಯ ಕೋರಿದರು. ಈ ಸಂದರ್ಭದಲ್ಲಿ ಪುರಸಭೆ ಮಾಜಿ ಉಪಾಧ್ಯಕ್ಷ ಮುಜಾಫರ್ ಪಟೇಲ್, ಗುತ್ತಿಗೆದಾರ ಮಹಮ್ಮದ್ ಶಕೀಲ್, ರಾಜಕುಮಾರ್ ಆರ್. ಹಡಪದ ಉಪಸ್ಥಿತರಿದ್ದರು. (ಮಲ್ಲಮ್ಮ ನುಡಿ ಚಿತ್ರ)

# ಚನ್ನಬಸವಾಶ್ರಮದಲ್ಲಿ ಸಾರ್ವಜನಿಕ ಕಾರ್ಯಕ್ರಮ ಫೆ.4ಕ್ಕೆ ವಿರಾಟ ಹಿಂದೂ ಸಮ್ಮೇಳನ




• **ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ:**

ಪಟ್ಟಣದಲ್ಲಿ ಫೆ.4ಕ್ಕೆ ವಿರಾಟ ಹಿಂದೂ ಸಮ್ಮೇಳನ ಆಯೋಜಿಸಲಾಗಿದೆ ಎಂದು ಸಾಮಾಜಿಕ ಸಾಮರಸ್ಯ ಕರ್ನಾಟಕ ಉತ್ತರ ಪ್ರಾಂತ ಸಂಯೋಜಕ ಶಿವಲಿಂಗ ಕುಂಬಾರ ತಿಳಿಸಿದರು.

ಪಟ್ಟಣದಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು. ಅಂದು ಮಧ್ಯಾಹ್ನ 2 ಗಂಟೆಗೆ ಭಾಲ್ಕೇಶ್ವರ ಮಂದಿರ ಆವರಣದಿಂದ ಬೃಹತ್ ಶೋಭಾಯಾತ್ರೆ ಹೊರಡಲಿದೆ. ಬೊಮಗೊಂಡೇಶ್ವರ ವೃತ್ತ, ಬಸ್ ನಿಲ್ದಾಣ, ಜ್ಯೋತಿಬಾ ಫುಲೆ ವೃತ್ತ, ಸರಾಫ್ ಬಜಾರ್, ಮಹಾತ್ಮ ಗಾಂಧಿ ವೃತ್ತ ಮತ್ತು ಅಂಬೇಡ್ಕರ್ ವೃತ್ತದ ಮೂಲಕ ಚನ್ನಬಸವಾಶ್ರಮ ಪರಿಸರದಲ್ಲಿ ಶೋಭಾ ಯಾತ್ರೆ ಸಮಾವೇಶಗೊಳ್ಳಲಿದೆ.

ನಂತರ ಸಂಜೆ 5ಕ್ಕೆ ಚನ್ನಬಸವಾಶ್ರಮ ಪರಿಸರದಲ್ಲಿ ಸಾರ್ವಜನಿಕ ಕಾರ್ಯಕ್ರಮ ನಡೆಯಲಿದ್ದು ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು, ರಾಜೇಶ್ವರ ಶಿವಾಚಾರ್ಯ, ಶಂಕರರಾನಂದ ಸ್ವಾಮೀಜಿ, ಭಂತೇ ಸಂಗರಕೀತ, ಗೋವಿಂದ ಮಹಾರಾಜ, ಹಾವಗಿಲಿಂಗೇಶ್ವರ ಶಿವಾಚಾರ್ಯ ಸಾನ್ನಿಧ್ಯದಲ್ಲಿ ಆರ್‌ಎಸ್‌ಎಸ್‌ನ ಸಹ ಸರಕಾರ್ಯವಾಹ್ ಮುಕುಂದ ಜೀ ದಿಕ್ಸೂಚಿ ಭಾಷಣ ಮಾಡಲಿದ್ದಾರೆ ಎಂದರು.

ಇದು ಯಾವುದೇ ಒಂದು ಜಾತಿಗೆ ಸಿಮೀತವಾಗಿಲ್ಲ, ದೇಶದಲ್ಲಿನ ಎಲ್ಲ ಸಮುದಾಯಗಳನ್ನು ಒಗ್ಗೂಡಿಸಿ, ಜಾಗೃತಿ ಮೂಡಿಸುವುದು ಈ ಹಿಂದೂ ಸಮ್ಮೇಳನದ ಆಶಯವಾಗಿದೆ.

ಪಟ್ಟಣದಲ್ಲಿನ ಸುಮಾರು 19 ವಿವಿಧ ಸಮಾಜದ ಮುಖಂಡರು ತಮ್ಮ ಸಮುದಾಯದ ಜನರೊಂದಿಗೆ ಭಾಗಿಯಾಗಲಿದ್ದಾರೆ. ಶೋಭಾ ಯಾತ್ರೆಯಲ್ಲಿ ವಿವಿಧ ಸಮುದಾಯದ ನೃತ್ಯ, ಶಾಲಾ ಕಾಲೇಜು ವಿದ್ಯಾರ್ಥಿಗಳ ಕೋಲಾಟ, ನೃತ್ಯ, ಮಹಾತ್ಮರ ಛದ್ಮವೇಷ ಸೇರಿ ಮುಂತಾದ ಪ್ರದರ್ಶನ ಗಮನ ಸೆಳೆಯಲಿವೆ.

ಹೆಚ್ಚಿನ ಸಂಖ್ಯೆಯಲ್ಲಿ ಜನರು ಭಾಗವಹಿಸಿ ಈ ಸಮ್ಮೇಳನ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ವಿರಾಟ ಹಿಂದೂ ಸಮ್ಮೇಳನ ಸಮಿತಿ ಅಧ್ಯಕ್ಷ ರಾಚಪ್ಪ ಪಾಟೀಲ್, ಪ್ರಮುಖರಾದ ಸೋಮನಾಥಪ್ಪ ಅಷ್ಟೂರೆ, ಹಿರಿಯ ಮುಖಂಡ ಪ್ರಭುರಾವ ಧೂಪೆ, ಯುವ ಮುಖಂಡರಾದ ಶಿವು ಲೋಖಂಡೆ, ಪ್ರಸನ್ನ ಖಂಡ್ರೆ, ಜಯಕಿಶನ ಬಿಯಾನಿ, ವಿಲಾಸ ಬಕ್ಕಾ, ಅಶೋಕ ವಾಲೆ, ಮಹಾಂತೇಶ ಇದ್ದರು.



ಬಸವಕಲ್ಯಾಣ:– ತಾಲೂಕಿನ ಸುಕ್ಷೇತ್ರ ಹಾರಕೂಡ ಶ್ರೀಮಠದಲ್ಲಿ "ರಾಜ್ಯ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಮಡಿವಾಳಯ್ಯ ಸಾಲಿ ಅವರನ್ನು ಶ್ರೀಮಠದ ಪೀಠಾಧಿಪತಿಗಳಾದ ಪೂಜ್ಯಶ್ರೀ ಡಾ. ಚನ್ನವೀರ ಶಿವಾಚಾರ್ಯರು ಸತ್ಕರಿಸಿ ಆಶೀರ್ವದಿಸಿದರು. ಈ ಸಂದರ್ಭದಲ್ಲಿ ಸಂತೋಷ ಗಂಡತಿ, ಚನ್ನಬಸಪ್ಪ ಏದಲ, ರುದ್ರೇಶ ಕಲಶೆಟ್ಟಿ, ಮಹಾರಾಜಪ್ಪ ಮೂಳೆ ಮುಂತಾದವರು ಉಪಸ್ಥಿತರಿದ್ದರು. (ಮಲ್ಲಮ್ಮ ನುಡಿ ಚಿತ್ರ).

# ಬರಹಗಾರ್ತಿಯನ್ನು ಹುರಿದುಂಬಿಸಿದ ಎಸ್. ಪಿ

• **ಮಲ್ಲಮ್ಮ ನುಡಿ ವಾರ್ತೆ, ಬೀದರ್:**



ಭಾಲ್ಕಿಯ ಹಿರೇಮಠ ಸಂಸ್ಥಾನ ಹಾಗೂ ಕಸಾಪ ವೀರಲೋಕ ಅರ್ಪಿಸಿರುವ ಬೀದರ್ ನ ಮೊಟ್ಟ ಮೊದಲ ಪುಸ್ತಕ ಸಂತೆಯ ಮೂರನೇ ದಿನದಂದು ಜಿಲ್ಲೆಯ ಪೊಲೀಸ್ ವರಿಷ್ಠ ಅಧಿಕಾರಿಗಳಾದ ಪ್ರದೀಪ್ ಗುಂಟೆ ಹಾಗೂ ಅವರ ಪತ್ನಿ ಶೈನೀ ಗುಂಟೆ ಕನ್ನಡ ಸಾಹಿತ್ಯ ಪರಿಷತ್ತಿನ ಮಹಿಳಾ ಘಟಕದ ಅಧ್ಯಕ್ಷರಾದ ರೂಪಾ ಪಾಟೀಲ್ ಅವರ ಪುಸ್ತಕಗಳನ್ನು ಖರೀದಿಸಿದರು.

ಅಷ್ಟು ದೊಡ್ಡ ಅಧಿಕಾರಿಯಾದರೂ ಗಡಿಬಿಡಿ ಮಾಡದೆ ಪ್ರತಿಯೊಬ್ಬರ ಮಾತುಗಳು ಕೇಳಿ ಪುಸ್ತಕದ ಬಗ್ಗೆ ಮಾಹಿತಿ ತಿಳಿದುಕೊಂಡು ಸಮಾಧಾನವಾಗಿ ಎಲ್ಲರೊಂದಿಗೆ ಭಾವಚಿತ್ರಗಳನ್ನು ತೆಗೆದುಕೊಂಡು ನಗುಮುಖದೊಂದಿಗೆ ನೀವೆಲ್ಲಾ ಹೀಗೆ ಬರೀತಾ ಇರಿ ಅಂತ ಹುರಿದುಂಬಿಸಿ ನಮಸ್ಕರಿಸಿ ಹೋಗಿದ್ದು ನಾನೆಂದು ಮರೆಯಲಾರೆ ಇಂತಹ ಒಂದು ವಿಶಿಷ್ಟ ಕ್ಷಣ ಒದಗಿಸುಕೊಟ್ಟ ವೀರಲೋಕ ವೀರಕಪುತ್ರ ಶ್ರೀನಿವಾಸ ಅವರಿಗೆ

ಹಾಗೂ ಈ ಪುಸ್ತಕ ಸಂತೆ–ಯ ನೇತೃತ್ವವನ್ನು ವಹಿಸಿದ ಗುರುನಾಥ್ ರಾಜಗಿರ ಅವರಿಗೂ ಚಿರಋಣಿ ಎಂದರು.

# ರಸ್ತೆ ಅಪಘಾತ,ವ್ಯಕ್ತಿ ಸಾವು

**ಮಲ್ಲಮ್ಮ ನುಡಿ ವಾರ್ತೆ ಕಮಲನಗರ:**



ತಾಲೂಕಿನ ಸಾವಳಿ ಗ್ರಾಮದ ರಾಷ್ಟ್ರೀಯ ಹೆದ್ದಾರಿ–50ರ ಹತ್ತಿರ ದ್ವಿಚಕ್ರ ವಾಹನಕ್ಕೆ ಹಿಂಬದಿಯಿಂದ ಕಾರು ಡಿಕ್ಕಿ ಹೊಡೆದು ಸಂಭವಿಸಿದ ಅಪಘಾತದಲ್ಲಿ ಗಂಭೀರ ಗಾಯಗೊಂಡ ಬಸವನಾಳ ಗ್ರಾಮದ ಭಾನುದಾಸ ಮನ್ಮಥಪ್ಪಾ ಕಾರಬಾರಿ (68) ಚಿಕಿತ್ಸೆ ಫಲಕಾರಿಯಾಗದೆ ಸಾವನಪ್ಪಿರುತ್ತಾರೆ.

ಸದರಿ ಅಪಘಾತವು ದಿನಾಂಕ:24/01/26 ರಂದು ಸಂಜೆ 7ಗಂಟೆ ಸುಮಾರಿಗೆ ಬಸವನಾಳ ಗ್ರಾಮದ ರಾಜಕುಮಾರ ಸಂಗಶೆಟ್ಟಿ ಎಂಬುವವರ ದ್ವಿಚಕ್ರ ವಾಹನ ಮೇಲೆ ಹಿಂದುಗಡೆ ಕುಳಿತು ಹೊಳಸಮುದ್ರ ಆಸ್ಪತ್ರೆಗೆ ತೆರಳುತ್ತಿದ್ದ ವೇಳೆ ಹಿಂಬದಿಯಿಂದ ವೇಗವಾಗಿ ಬಂದ ಕಾರು ಡಿಕ್ಕಿ ಹೊಡೆದಿದೆ.

ಗಂಭೀರ ಗಾಯಗೊಂಡ ಭಾನುದಾಸ ಅವರನ್ನು ಭಾಲ್ಕಿ ಆಸ್ಪತ್ರೆಗೆ ದಾಖಲಿಸಿ ಬಳಿಕ ಬ್ರಿಮ್ಸ್‌ಗೆ ದಾಖಲಿಸಲಾಗಿತ್ತು. ಬಳಿಕ ಖಾಸಗಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಿದರೂ ಸ್ಪಂದಿಸದೆ ಮಂಗಳವಾರ ಸಂಜೆ ಮೃತಪಟ್ಟಿದ್ದಾರೆ. ಈ ಸಂಬಂಧ ಕಮಲನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿ ತನಿಖೆ ಮುಂದುವರೆದಿದೆ.

# ಫೆಬ್ರವರಿ 2ರಂದು ಜಿಲ್ಲಾ ಮಟ್ಟದ ಸಾವಿತ್ರಿಬಾಯಿ ಫುಲೇ ಜಯಂತಿ

• **ಮಲ್ಲಮ್ಮ ನುಡಿ ವಾರ್ತೆ,ಚಿಟಗುಪ್ಪ:**



**ರಕ್ತದಾನ ಶಿಬಿರ, ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ 50 ಸಾಧಕರಿಗೆ ಜಿಲ್ಲಾ ಮಟ್ಟದ ಪ್ರಶಸ್ತಿ ಪ್ರದಾನ, ಪುಸ್ತಕ ಬಿಡುಗಡೆ, ದಿನದರ್ಶಿಕೆ ಲೋಕಾರ್ಪಣೆ ಹಾಗೂ ಶೈಕ್ಷಣಿಕ ಸಮ್ಮೇಳನ ಸೇರಿದಂತೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ.**

ಅಕ್ಷರದ ಅವ್ವ ಸಾವಿತ್ರಿಬಾಯಿ ಫುಲೆಯವರ ಜಿಲ್ಲಾ ಮಟ್ಟದ ಜಯಂತಿ ಮಹೋತ್ಸವನ್ನು ಫೆಬ್ರವರಿ 2ರಂದು ಬೆಳಿಗ್ಗೆ 8:30 ಘಂಟೆಗೆ ಸಾವಿತ್ರಿಬಾಯಿ ಫುಲೇ ಭಾವಚಿತ್ರದ ಭವ್ಯ ಮೆರವಣಿಗೆಗೆ ಹುಮನಾಬಾದ ಸಮುದಾಯ ಸಂಘಟನಾ ಅಧಿಕಾರಿ ಮೀನಾಕುಮಾರಿ ಬೋರಾಳಕರ್ ಚಾಲನೆ ನೀಡಲಿದ್ದಾರೆ. ಮೆರವಣಿಗೆ ಸರ್ಕಾರಿ ಕನ್ಯಾ ಪ್ರೌಢ ಶಾಲೆಯಿಂದ ಪ್ರಾರಂಭಗೊಂಡು ಶಿವಾಜಿ ವೃತ್ತ, ಬಸವರಾಜ ವೃತ್ತ, ಗಾಂಧಿ ವೃತ್ತ, ಮಾರ್ಗವಾಗಿ ಜೈ ಭವಾನಿ ಕಲ್ಯಾಣ ಮಂಟಪದ ವರೆಗೆ ಜರುಗಲಿದೆ. ನಂತರ 10:30 ಗಂಟೆಗೆ ವೇದಿಕೆ ಕಾರ್ಯಕ್ರಮ ಜರುಗಲಿದೆ ಎಂದು ಸಾವಿತ್ರಿಬಾಯಿ ಫುಲೇ ಶಿಕ್ಷಕಿಯರ ಸಂಘದ ತಾಲೂಕಾಧ್ಯಕ್ಷೆ ಪ್ರೇಮಿಳಾ ರೆಡ್ಡಿ ತಿಳಿಸಿದ್ದಾರೆ. ಚಾಂಗಲೇರಾ ಮತ್ತು ಚಿಟಗುಪ್ಪ ಹಿರೇಮಠದ ಗುರುಲಿಂಗ ಶಿವಾಚಾರ್ಯರು ದಿವ್ಯ ಸಾನಿಧ್ಯ ವಹಿಸಲಿದ್ದಾರೆ. ಹುಮನಾಬಾದ ಹಿರೇಮಠ ಸಂಸ್ಥಾನದ ರೇಣುಕಾ ಗಂಗಾಧರ ಶಿವಾಚಾರ್ಯರು ದಿವ್ಯ ನೇತೃತ್ವ ವಹಿಸಲಿದ್ದಾರೆ. ಶಾಸಕ ಡಾ. ಸಿದ್ದು ಪಾಟೀಲ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಶಾಸಕ ಡಾ. ಶೈಲೇಂದ್ರ ಬೆಲ್ದಾಳೆ, ಡಾ. ಸಾರಿಕಾ ಎಸ್.ಗಂಗಾ ಅವರ ಮಾತು–ಮಾತಿನ ರೂಪಗಳ ಪುಸ್ತಕ ಬಿಡುಗಡೆ ಮಾಡಲಿದ್ದಾರೆ. ವಿಧಾನ ಪರಿಷತ್ ಸದಸ್ಯ ಡಾ. ಚಂದ್ರಶೇಖರ್ ಪಾಟೀಲ್ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ವಿಧಾನ ಪರಿಷತ್ ಸದಸ್ಯ ಭೀಮರಾವ ಪಾಟೀಲ್ ಸಾವಿತ್ರಿಬಾಯಿ ಫುಲೇ ರವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಿದ್ದಾರೆ. ಯುವ ಸಾಹಿತಿ ಕೆ.ವೀರಾರೆಡ್ಡಿ ವಿಶೇಷ ಉಪನ್ಯಾಸ ನೀಡಲಿದ್ದಾರೆ. ಸಾವಿತ್ರಿಬಾಯಿ ಫುಲೇ ಸಂಘದ ಜಿಲ್ಲಾಧ್ಯಕ್ಷೆ ಸಾರಿಕಾ ಎಸ್. ಗಂಗಾ ಅಧ್ಯಕ್ಷತೆ ವಹಿಸಲಿದ್ದಾರೆ. ಡಾ. ಶಾಂತಾಬಾಯಿ ಬಿರಾದಾರ್, ತಹಶೀಲ್ದಾರ್ ಮಂಜುನಾಥ್ ಪಂಚಾಳ ಸೇರಿದಂತೆ ಅನೇಕ ಗಣ್ಯರು ಭಾಗವಹಿಸಲಿದ್ದಾರೆ. ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# 77ನೇ ಗಣರಾಜ್ಯೋತ್ಸವ ಪ್ರಯುಕ್ತ ರೈತರಿಗೆ ಸನ್ಮಾನ



• **ಮಲ್ಲಮ್ಮ ನುಡಿ ವಾರ್ತೆ,ಕಮಲನಗರ :**

ಪಟ್ಟಣದ ರೈತ ಸಂಪರ್ಕ ಕೇಂದ್ರದಲ್ಲಿ 77ನೇ ಗಣರಾಜ್ಯೋತ್ಸವ ಪ್ರಯುಕ್ತ ಪ್ರಗತಿಪರ ರೈತ ಬಾಬುರಾವ ಸೋಮುರೆ ಅವರಿಗೆ ಸನ್ಮಾನ ಮಾಡಲಾಯಿತು.

ಈ ವೇಳೆ ಕೃಷಿ ಅಧಿಕಾರಿ ಶತ್ರುಘ್ನ ಎಸ್ ಮಾತನಾಡಿ, ಪ್ರಜಾ ಪ್ರಭುತ್ವ ಮತ್ತು ಸಂವಿಧಾನ ವಿಶ್ವಕ್ಕೆ ಮಾದರಿಯಾಗಿದ್ದು, ಕೊಟ್ಯಾಂತರ ಜನರನ್ನು ಒಂದು ವ್ಯವಸ್ಥೆಯಲ್ಲಿ ತರುವ ಮೂಲಕ ಸಂವಿಧಾನ ಶಿಲ್ಪಿ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅತ್ಯುತ್ತಮ ಪ್ರಜಾತಂತ್ರ ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸಿ ವಿಶ್ವಕ್ಕೆ ಮಾದರಿಯಾಗಿದ್ದಾರೆ ಎಂದು ಕೃಷಿ ಅಧಿಕಾರಿ ಶತ್ರುಘ್ನ ಎಸ್ ಹೇಳಿದರು.

ಭಾರತ ದೇಶದ ಪ್ರತಿಯೊಬ್ಬ ನಾಗರಿಕರು ಸಂವಿಧಾನದ ಆಶಯಗಳನ್ನು ತಿಳಿದುಕೊಂಡು ಆದರಂತೆ ನಡೆಯಬೇಕು. ಸಂವಿಧಾನ ದೇಶದ ಪ್ರತಿ ಪ್ರಜೆಗೂ ಸಮಾನ ಹಕ್ಕು ನೀಡಿದೆ. ದೇಶದ ಸಾರ್ವಭೌಮತೆ ಹಾಗೂ ಪ್ರಜೆಗಳ ಹಕ್ಕುಗಳ ರಕ್ಷಣೆ ಮಾಡುವ ಸಂವಿಧಾನವನ್ನು ಗೌರವಿಸಬೇಕು ಎಂದರು.

ಪ್ರವೀಣ ಕುಲಕರ್ಣಿ ತಾಲೂಕು ರೈತ ಸಂಘದ ಅಧ್ಯಕ್ಷ ಅವರು ಮಾತನಾಡಿ, ಸಂವಿಧಾನ ಬದ್ದ ರೈತರಿಗೆ ಇನ್ನು ಯಾವುದೇ ಸೌಲಭ್ಯಗಳನ್ನು ಸಮರ್ಪಕವಾಗಿ ಸಿಗುತ್ತಿಲ್ಲ. ಇದರಿಂದಾಗ ರೈತರು ಸಂಘಟೀತರಾಗಿ ಸರಕಾದ ಯೋಜನೆಗಳನ್ನು ಪಡೆಯಲು ಸದಾ ಸಿದ್ದ ರಾಗಿ ಎಂದು ರೈತರಿಗೆ ಕಿವಿ ಮಾತು ಹೇಳಿದರು. ಡೋಣಗಾಂವ ಗ್ರಾಮದ ಪ್ರಗತಿಪರ ರೈತ ಬಾಬುವಾರ ಸೋಮುರೆ ಅವರು ಮಾತನಾಡಿ, ರೈತರು ಸಮಗ್ರ ಕೃಷಿ ಪದ್ದತಿ ಅನುಸರಿಸಿದರೆ ಮಾತ್ರ ರೈತರು ಆರ್ಥಿಕ ಸಬಲರಾಗಲು ಸಾಧ್ಯ ನಮ್ಮ ಹೊಲದಲ್ಲಿ ಅನೇಕ ಬಗ್ಗೆಯ ಮಿಶ್ರ ಕೃಷಿ ಮಾಡಿದ್ದೇನೆ ಪ್ರಗತಿ ಬಯೇಸುವ ರೈತರು ಬಂದು ಭೇಟಿ ನೀಡಬಹುದು ಎಂದು ಹೇಳಿದರು. ಈ ಸಂದರ್ಭದಲ್ಲಿ ಸಾಮಾಜಿಕ ಹೋರಾಟಗಾರ ವೈಜಿನಾಥ ವಡ್ಡೆ, ಕಮಲನಗರ ತಾಲೂಕು ಭಾರತ ಕೃಷಿ ಸಮಾಜದ ಅಧ್ಯಕ್ಷ ಉಮಾಕಾಂತ ಮಲಕರೆ, ಸೂರ್ಯಕಾಂತ ಬಿರಾದಾರ ಮದನೂರ, ರೈತ ಮುಖಂಡ ವಿಠ್ಠಲರಾವ ಪಾಟೀಲ್, ರಾಜಕುಮಾರ ಪಾಟೀಲ್, ಬಾಲಾಜಿ ದೇಶಮುಖ, ಯುವರಾಜ ಬಿರಾದಾರ, ಅವಿನಾಶ ಸೋಮುರೆ, ಉತ್ತಮ ಸೋಮುರೆ, ಸಿಬ್ಬಂದಿ ಪಂಡರಿ ಮತ್ತು ಮಹಿಳೆಯರು ಇದ್ದರು.

# ಅಂಗನವಾಡಿ ಕಟ್ಟಡ ಉದ್ಘಾಟನೆ



• **ಮಲ್ಲಮ್ಮ ನುಡಿ ವಾರ್ತೆ,ಹುಣಸೂರು:**

ತಾಲೂಕಿನ ಧರ್ಮಪುರ ಗ್ರಾಮದಲ್ಲಿ 2024–25 ನೇ ಸಾಲಿನ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಂಯುಕ್ತ ಅನುದಾನ ಯೋಜನೆಯಡಿ 13,ಲಕ್ಷ. ರೂ ವೆಚ್ಚದಲ್ಲಿ ನಿರ್ಮಾಣ ಮಾಡಲಾದ ಅಂಗನವಾಡಿ ಕಟ್ಟಡವನ್ನು ಲೋಕಸಭಾ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಶಾಸಕರು ಜಿ.ಡಿ. ಹರೀಶ್ ಗೌಡ, ಗ್ರಾ.ಪಂ. ಅಧ್ಯಕ್ಷ ವಿ.ಮಹದೇವ್ ಜೊತೆಗೂಡಿ ಕಟ್ಟಡ ಉದ್ಘಾಟನೆ ನೆರವೇರಿಸಿದ್ದಾರೆ

ನಂತರ ಕಾರ್ಯಕ್ರಮದಲ್ಲಿ ಲೋಕಸಭೆಯ ಸಂಸದರಾದ ಯದವೀರ್ ಕೃಷ್ಣದತ್ತ ನರಸಿಂಹರಾಜ ಒಡೆಯರ್ ಮಾತನಾಡಿ

ಅಂಗನವಾಡಿಗಳಲ್ಲಿ ಉತ್ತಮವಾದ ಪೌಷ್ಟಿಕ ಆಹಾರ ನೀಡಿ ಅಂಗನವಾಡಿಗಳಿಗೆ ಸರ್ಕಾರಗಳು ಹೆಚ್ಚಾಗಿ ಪ್ರೋತ್ಸಾಹ ನೀಡುತ್ತಿರುವುದು, ಚಿಕ್ಕ ವಯಸ್ಸಿನಲ್ಲಿ ಮಕ್ಕಳಿಗೆ ಆರೋಗ್ಯ ಸಿಗಲಿ ಅನ್ನುವ ದೂರದೃಷ್ಟಿಯಿಂದ, ಪೌಷ್ಟಿಕ ಆಹಾರಗಳನ್ನು ನೀವುಗಳು ಸರಿಯಾದ ಪ್ರಮಾಣದಲ್ಲಿ ನೀಡಿ ಅವರನ್ನು ಸಮಾಜಕ್ಕೆ ಉತ್ತಮ ಪ್ರಜೆಗಳಾಗಿ ಆರೋಗ್ಯವಂತರನ್ನಾಗಿ ಸದೃಢ ವ್ಯಕ್ತಿಗಳನ್ನಾಗಿ ಮಾಡುವ ಜವಾಬ್ದಾರಿ ನಿಮ್ಮ ಮೇಲಿದೆ ಎಂದು ಕಿವಿಮಾತು ಹೇಳಿದರು.

ಶಾಸಕ ಜಿ.ಡಿ.ಹರೀಶ್ ಗೌಡ ಮಾತನಾಡಿ, ಧರ್ಮಪುರ ಗ್ರಾಮದಲ್ಲಿ ಆಗಲೇ ರಸ್ತೆ ಕಾಮಗಾರಿಗೆ 60 ಲಕ್ಷ ಅನುದಾನ ನೀಡಿದ್ದು, ಮಾರಮ್ಮ, ಹಾಗೂ ಈಶ್ವರ ದೇವಸ್ಥಾನದ ಬಸವ ಮತ್ತು ಗೋಪುರಕ್ಕೆ ಅನುದಾನ ನೀಡಿದ್ದೇನೆ, ಮೊರಾರ್ಜಿ ದೇಸಾಯಿ ರಸ್ತೆ ಅಭಿವೃದ್ಧಿ, ಕುಡಿಯುವ ನೀರಿನ ಘಟಕ ಸೇರಿದಂತೆ ಈಗಾಗಲೇ ಹಲವಾರು ಉತ್ತಮ ಕೆಲಸಗಳಾಗಿದ್ದು, ಇನ್ನೂ ಮುಂದೆ ಬರುವ ಅನುದಾನದಲ್ಲಿ 30 ಲಕ್ಷ.ರೂ ವೆಚ್ಚದ ಕಾಮಗಾರಿಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.

ಸರ್ಕಾರದ ಗ್ಯಾರಂಟಿ ಯೋಜನೆಗಳಾದ, ಮಹಿಳೆಯರಿಗೆ 2000, ಉಚಿತ ವಿದ್ಯುತ್ , ಉಚಿತ ಬಸ್ ಟಿಕೆಟ್, ಸೇರಿದಂತೆ 10 ಕೆ.ಜಿ ಅಕ್ಕಿ ನೀಡುತ್ತಿರುವುದು 224 ವಿಧಾನಸಭಾ ಕ್ಷೇತ್ರಕ್ಕೂ ಅನುದಾನಕ್ಕೆ ಸಮಸ್ಯೆಯಾಗಿದೆ, ಇದರಿಂದ ಅಭಿವೃದ್ಧಿ ಕಷ್ಟವಾಗುತ್ತಿದೆ, ಸಂಸದರ ಅನುದಾನ ಜೊತೆಗೂಡಿ ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ.

ಈಗಾಗಲೇ ಧರ್ಮಪುರ ಗ್ರಾಮಕ್ಕೆ ಹೆಚ್ಚಿನ ಅನುದಾನ ನೀಡಿದ್ದು, ಗ್ರಾಮದ ಅಂಬೇಡ್ಕರ್ ಭವನ, ವಾಲ್ಮೀಕಿ ಭವನ, ಕುಂಬಾರ ಜನಾಂಗಕ್ಕೂ ಕೂಡ ಅನುದಾನ ನೀಡಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ಗ್ರಾ.ಪಂ.ಅಧ್ಯಕ್ಷ ವಿ.ಮಹದೇ[illegible]ಪಾಧ್ಯಕ್ಷೆ ಜ್ಯೋತಿ, ತಾ.ಪಂ. ಮಾ.ಸದಸ್ಯ ಪ್ರಭಾಕರ್, ಗ್ರಾ.ಪಂ.ಮಾ.ಅಧ್ಯಕ್ಷ ವಿಶ್ವನಾಥ್, ಮುಖಂಡರಾದ ಸತೀಶ್ ಪಾಪಣ, ರಮೇಶ್, ಗವಿನಾಯಕ್, ಮಲ್ಲೇಶ್, ಕಾಳಯ್ಯ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಪುಟ್ಟನಾಗರಾಜು, ಶಿಶು ಅಭಿವೃದ್ಧಿ ಯೋಜನಾಧಿಕಾರಿ ಹರೀಶ್.ಎಸ್.ಜಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಎಂ.ಅರುಣ್, ಅಂಗನವಾಡಿ ಶಿಕ್ಷಕಿ ಲಕ್ಷ್ಮಿ ಸೇರಿದಂತೆ ಗ್ರಾ.ಪಂ.ಸದಸ್ಯರು, ಗ್ರಾಮದ ಯಾಜಮಾನರು, ಪ್ರಮುಖ ಮುಖಂಡರು ಹಾಜರಿದ್ದರು.

# ಫೆಬ್ರವರಿ 01 ರಂದು ಮಡಿವಾಳ ಮಾಚಿದೇವ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲು ನಿರ್ಧಾರ

• **ಮಲ್ಲಮ್ಮ ನುಡಿ ವಾರ್ತೆ,ಕಲಬುರಗಿ:**

ಪ್ರತಿ ವರ್ಷದಂತೆ ಈ ವರ್ಷವೂ ಕೂಡ ಶ್ರೀ ಮಡಿವಾಳ ಮಾಚಿದೇವ ಜಯಂತಿಯನ್ನು ಫೆಬ್ರವರಿ 01 ರಂದು ವಿಜೃಂಭಣೆಯಿಂದ ಆಚರಿಸಲು ಜಿಲ್ಲಾಧಿಕಾರಿ ಕಚೇರಿಯ ಸಹಾಯಕರಾದ ಶಿವಪ್ರಭು ಹಿರೇಮಠ ಅವರ ಅಧ್ಯಕ್ಷತೆಯ ಸಭೆಯಲ್ಲಿ ನಿರ್ಧರಿಸಲಾಯಿತು.

ಮಂಗಳವಾರದಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜರುಗಿದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿ, ಇದೇ ಫೆಬ್ರವರಿ 01 ರಂದು ರವಿವಾರ ಮಧ್ಯಾಹ್ನ 1.30 ಗಂಟೆಗೆ ಕಲಬುರಗಿ ನಗರದ ಡಾ. ಎಸ್.ಎಂ ಪಂಡಿತ ರಂಗಮಂದಿರದಲ್ಲಿ ಮಡಿವಾಳ ಮಾಚಿದೇವರ ಜಯಂತಿ ಕಾರ್ಯಕ್ರಮ ಜರುಗಲಿದ್ದು, ಈ ಕಾರ್ಯಕ್ರಮದಲ್ಲಿ ಅಧಿಕಾರಿಗಳು ಹಾಗೂ ಸಮಾಜದ ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಲು ಸೂಚಿಸಿದರು.




ಅಂದು ಬೆಳಿಗ್ಗೆ 9 ಗಂಟೆಗೆ ಕಡ್ಡಾಯವಾಗಿ ಎಲ್ಲಾ ಜಿಲ್ಲಾ ಹಾಗೂ ತಾಲೂಕು ಮಟ್ಟದ ಸರ್ಕಾರಿಕಚೇರಿಗಳಲ್ಲಿ,ಶಾಲಾ-ಕಾಲೇಜುಗಳಲ್ಲಿ ಕಡ್ಡಾಯವಾಗಿ ಜಯಂತಿ ಆಚರಿಸಬೇಕು. ಸಭೆಯಲ್ಲಿ ನುರಿತ ಉಪನ್ಯಾಸಕರನ್ನು ಸಹ ಆಹ್ವಾನಿಸಲು ತೀರ್ಮಾನಿಸಲಾಯಿತು. ಕಾರ್ಯಕ್ರಮ ನಡೆಯುವ ಸ್ಥಳದಲ್ಲಿ ಕುಡಿಯುವ ನೀರು ವ್ಯವಸ್ಥೆ ಮಾಡುವುದರ ಜೊತೆಗೆ ಸ್ವಚ್ಛತೆ ಮತ್ತು ನೈರ್ಮಲ್ಯ ಕಾಪಾಡಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ಜಯಂತಿ ಸಮಿತಿ ಅಧ್ಯಕ್ಷರಾಗಿ ರವಿಕುಮಾರ ಶಹಾಪೂರಕರ, ಪಿ.ಡಿ.ಎ. ಇಂಜಿನಿಯರಿಂಗ ಕಾಲೇಜಿನ ಪ್ರಾಧ್ಯಾಪಕರಾದ ಸಂಜಯ ಮಹಾಕಾಳ ಉಪನ್ಯಾಸಕರಾಗಿ ಹಾಗೂ ಕನ್ನಡ ಸಾಹಿತ್ಯ ಪರಿಷತ್ ಕಾರ್ಯದರ್ಶಿ ಶಿವರಾಜ ಅಂಡಿಗಿ ಕಾರ್ಯಕ್ರಮದ ನಿರೂಪಕರನ್ನಾಗಿ ಆಯ್ಕೆ ಮಾಡಲಾಯಿತು.

ಸಭೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉಪನಿರ್ದೇಶಕಿ ಜಗದೀಶ್ವರಿನಾಶಿ ಅವರು ಪ್ರೋಟೋಕಾಲ್ ಪ್ರಕಾರ ಕಾರ್ಯಕ್ರಮ ಪತ್ರಿಕಾ ಆಮಂತ್ರಣ ಮುದ್ರಿಸಲಾಗುವುದು. ನಾಡಗೀತೆ, ಸಂಗೀತ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುವುದು ಎಂದರು.

ಈ ಸಂದರ್ಭದಲ್ಲಿ ಸಮಾಜದ ಮುಖಂಡರುಗಳಾದ ಶಿವಪುತ್ರ ಮಲ್ಲಾಬಾದಕರ, ಸಿದ್ದು ಇಂಚಗೇರಿ, ಶಾಂತು ಕಣ್ಣೂರ, ಪುಂಡಲಿಕ, ಬಸವರಾಜ, ವಿಠ್ಠಲ, ನಾಗೇಶ ಇತರರು ಉಪಸ್ಥಿತರಿದ್ದರು.

# ಜನವರಿ 31 ರಂದು ನೇರ ಸಂದರ್ಶನ ಆಯೋಜನೆ

• **ಮಲ್ಲಮ್ಮ ನುಡಿ ವಾರ್ತೆ, ಕಲಬುರಗಿ:**

ಕಲಬುರಗಿ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ವತಿಯಿಂದ ಇದೇ ಜನವರಿ 31ರಂದು ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಕಲಬುರಗಿ ಸರ್ಕಾರಿ ಐ.ಟಿ.ಐ. ಕಾಲೇಜು ಹಿಂದುಗಡೆಯಿರುವ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ನೇರ ಸಂದರ್ಶನವನ್ನು ಹಮ್ಮಿಕೊಳ್ಳಲಾಗಿದೆ ಎಂದು ಕಲಬುರಗಿ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ. ಆದಿ ಟ್ರೇಡ್‌ಮಾರ್ಟ್ ಪ್ರೈ ಲಿಮಿಟೆಡ್‌ದಲ್ಲಿ ಟೆಲಿಕಾಲರ್ (ಬ್ಯಾಂಕಿಂಗ್ ಪ್ರೋಸೆಸ್) ಹುದ್ದೆಗೆ ಪಿ.ಯು.ಸಿ, ಪದವಿ ಪಾಸಾಗಿರಬೇಕು. ವಯೋಮಿತಿ 18 ರಿಂದ 24 ವರ್ಷದೊಳಗಿರಬೇಕು. ಸ್ಟ್ರೈಡ್ಸ್ ಫಾರ್ಮಾದಲ್ಲಿ ಆಪರೇಟರ್ (ಲರ್ನ್ ಆಂಡ್ ಅರ್ನ್) ಹುದ್ದೆಗೆ ಪಿ.ಯು.ಸಿ, ಐಟಿಐ, ಡಿಪ್ಲೋಮಾ ವಿದ್ಯಾರ್ಹತೆ ಹೊಂದಿರಬೇಕು. ವಯೋಮಿತಿ 18 ರಿಂದ 22 ವರ್ಷದೊಳಗಿರಬೇಕು.

ಆಸಕ್ತಿಯುಳ್ಳ ಅಭ್ಯರ್ಥಿಗಳು ತಮ್ಮ ಎಲ್ಲಾ ಅಂಕಪಟ್ಟಿಗಳ ಝೆರಾಕ್ಸ್, ರೆಸ್ಯೂಮ್ (ಬಯೋಡೆಟಾ) ಭಾವಚಿತ್ರಗಳು ಹಾಗೂ ಆಧಾರ್‌ಕಾರ್ಡ್‌ದೊಂದಿಗೆ ಮೇಲ್ಕಂಡ ದಿನದಂದು ನೇರ ಸಂದರ್ಶನದಲ್ಲಿ ಭಾಗವಹಿಸಬೇಕು. ನೇರ ಸಂದರ್ಶನದಲ್ಲಿ ಭಾಗವಹಿಸುವ ಅಭ್ಯರ್ಥಿಗಳಿಗೆ ಯಾವುದೇ ತರಹದ ಭತ್ಯೆಯನ್ನು ನೀಡಲಾಗುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ ಕಲಬುರಗಿ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯನ್ನು ಹಾಗೂ ಕಚೇರಿ ದೂರವಾಣಿ ಸಂಖ್ಯೆ 08472-274846ಗೆ ಸಂಪರ್ಕಿಸಲು ಕೋರಲಾಗಿದೆ.

# ಮಕ್ಕಳಿಗೆ ಪರೀಕ್ಷೆ ಪ್ಯಾಡ್ ವಿತರಣೆ 20 ಮಕ್ಕಳಿಗೆ ಉಚಿತ ಪಿಯುಸಿ ಶಿಕ್ಷಣ



• **ಮಲ್ಲಮ್ಮ ನುಡಿ ವಾರ್ತೆ,ಭಾಲ್ಕಿ:**

ಗ್ರಾಮೀಣ ಭಾಗದ ಬಡ ಪ್ರತಿಭಾವಂತ 20 ಮಕ್ಕಳಿಗೆ ಎರಡು ವರ್ಷ ಉಚಿತ ಪಿಯುಸಿ ಶಿಕ್ಷಣ ನೀಡಲು ನಿರ್ಧರಿಸಲಾಗಿದೆ ಎಂದು ಹಿರೇಮಠ ಸಂಸ್ಥಾನ ವಿದ್ಯಾಪೀಠ ಟ್ರಸ್ಟ್‌ನ ಅಧ್ಯಕ್ಷ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ಹೇಳಿದರು.

ಪಟ್ಟಣದ ಸಂಗಮೇಶ್ವರ ಪಿಯುಸಿ ಕಾಲೇಜಿನಲ್ಲಿ ಈಚೆಗೆ ಆಯೋಜಿಸಿದ್ದ ವಿದ್ಯಾರ್ಥಿಗಳ ಪರೀಕ್ಷಾ ಪ್ಯಾಡ್ ವಿತರಣೆ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.ಕಳೆದ ಎರಡ್ಮೂರು ವರ್ಷಗಳ ಹಿಂದೆ ಸಂಗಮೇಶ್ವರ ಕಾಲೇಜಿನಲ್ಲಿ ಪಿಯುಸಿ ವಿಜ್ಞಾನ ಶಿಕ್ಷಣ ಆರಂಭಿಸಿದ್ದು, ಪ್ರತಿವರ್ಷ ಉತ್ತಮ ಫಲಿತಾಂಶ ದೊರೆಯುತ್ತಿದೆ. ಇಲ್ಲಿಯು ಅತ್ಯಾಧುನಿಕ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಚನ್ನಬಸವೇಶ್ವರ ಗುರುಕುಲ ಮಾದರಿಯಲ್ಲಿ ಗುಣಾತ್ಮಕ ಮತ್ತು ಸಂಸ್ಕಾರಯುತ ಶಿಕ್ಷಣಕ್ಕೆ ಆದ್ಯತೆ ನೀಡಲಾಗುತ್ತಿದೆ. ನುರಿತ ಅನುಭವ ಉಪನ್ಯಾಸಕರು ತಂಡವಿದೆ. ಹಾಗಾಗಿ ಪಾಲಕರು, ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಳ್ಳಬೇಕು. 2026-27ನೇ ಸಾಲಿನಲ್ಲಿ ಪ್ರವೇಶ ಕಲ್ಪಿಸಲು ಎರಡು ಹಂತದಲ್ಲಿ ಸ್ಕಾಲರ್‌ಶಿಪ್ ಪ್ರವೇಶ ಏರ್ಪಡಿಸಲಾಗುತ್ತಿದ್ದು, ಮೊದಲ ಹಂತದ ಪರೀಕ್ಷೆ ಫೆ.1 ರಂದು ನಡೆಯಲಿದೆ.

ಮೊದಲ 20 ರ್‍ಯಾಂಕ್ ಪಡೆಯುವ ವಿದ್ಯಾರ್ಥಿಗಳಿಗೆ ಉಚಿತ ಎರಡು ವರ್ಷ ಪಿಯುಸಿ ವಿಜ್ಞಾನ ಶಿಕ್ಷಣ, ಕೋಚಿಂಗ್ ಮತ್ತು ಬಸ್ ಸೌಲಭ್ಯ ಸಿಗಲಿದೆ. ಪ್ರಸ್ತುತ ಎಸ್ಸೆಸ್ಸೆಲ್ಸಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಸ್ಕಾಲರ್‌ಶಿಪ್ ಪ್ರವೇಶ ಪರೀಕ್ಷೆ ಬರೆಯಬಹುದಾಗಿದೆ ಎಂದು ತಿಳಿಸಿದರು.ಹಿರೇಮಠ ಸಂಸ್ಥಾನದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ನೇತೃತ್ವ ವಹಿಸಿದ್ದರು.

ಈ ಸಂದರ್ಭದಲ್ಲಿ ಸಂಗಮೇಶ್ವರ ಶಿಕ್ಷಣ ಸಂಸ್ಥೆ ಸ್ಥಾನಿಕ ಕಮಿಟಿ ಅಧ್ಯಕ್ಷ ಧನರಾಜ ಬಂಬುಳಗೆ, ಪ್ರಾಚಾರ್ಯರಾದ ಬಸವರಾಜ ಮೊಳಕೀರೆ

ಪ್ರವೀಣ ಹಿರೇಮಠ, ದೇವರಾಜ್ ಪ್ರೌಢ ಶಾಲೆಯ ಮುಖ್ಯಗುರು ವಿಶ್ವನಾಥ ಪಕ್ಕಾ ಸೇರಿದಂತೆ ಸಿಬ್ಬಂದಿ ವರ್ಗದವರು, ವಿದ್ಯಾರ್ಥಿಗಳು ಹಾಜರಿದ್ದರು.

# ಬದುಕು-ಸಮಾಜದ ಸರಿಯಾದ ಗ್ರಹಿಕೆಗಾಗಿ ಸಾಹಿತ್ಯ: ಪ್ರೊ. ಶ್ಯಾಮಸುಂದರ ಬಿದರಕುಂದಿ.

ಮಲ್ಲಮ್ಮ ನುಡಿ ವಾರ್ತೆ.

ಬಸವಕಲ್ಯಾಣ:- ಬದುಕನ್ನು, ಸಮಾಜವನ್ನು,ಜನಸಮುದಾಯವನ್ನು ಸರಿಯಾದ ಕ್ರಮದಲ್ಲಿ ಗ್ರಹಿಸಲು ಸಾಹಿತ್ಯದ ಓದಿನಿಂದ ಸಾಧ್ಯ ಎಂದು ಧಾರವಾಡದ ಹಿರಿಯ ಚಿಂತಕ ಪ್ರೊ. ಶ್ಯಾಮಸುಂದರ ಬಿದರಕುಂದಿ ಹೇಳಿದರು.ನಗರದ ಥೇರ ಮೈದಾನ ಸಭಾಭವನದ ತಾಲೂಕು ಸಾರ್ವಜನಿಕ ಗ್ರಂಥಾಲಯದಲ್ಲಿ ಡಾ. ಜಯದೇವಿತಾಯಿ ಲಿಗಾಡೆ ಪ್ರತಿಷ್ಠಾನದ 97ನೇ ಉಪನ್ಯಾಸ ಮತ್ತು ಸಂವಾದ ಸಮಾರಂಭದಲ್ಲಿ' ಸಮಕಾಲೀನ ಸೈದ್ಧಾಂತಿಕ ಚಿಂತನೆಗಳು' ಕುರಿತು ಮಾತನಾಡಿದ ಅವರು, ಶ್ರೇಷ್ಠ ಸಾಹಿತ್ಯ ಓದುವುದರ ಮೂಲಕ ಬದುಕನ್ನು ವಿಶ್ಲೇಷಿಸಬೇಕು ಎಂದರು.

ಸಂಗೀತ, ನೃತ್ಯ ಸೇರಿ ಯಾವುದೇ ಕಲೆಗಳಲ್ಲಿ ಕಾಣದ ಎಡ-ಬಲ ಎಂಬ ಪರಿಕಲ್ಪನೆ ಸಾಹಿತ್ಯದಲ್ಲಿ ಹೆಚ್ಚಾಗಿದೆ. ಎಡ-ಬಲ ಎಂಬುದು ಮೂಲತಃ ರಾಜ್ಯಶಾಸ್ತ್ರದ ಪರಿಕಲ್ಪನೆಯಾಗಿದೆ. ಎಡ-ಬಲ ಪದಗಳಿಂದ ಎಲ್ಲವನ್ನೂ ವಿಶ್ಲೇಷಣೆ ಮಾಡಲು ಸಾಧ್ಯವಿಲ್ಲ ಎಂದರು. ಫ್ರಾನ್ಸ್ ಕ್ರಾಂತಿಯ ನಂತರ ವಿಚಾರವಾದಿಗಳು ಮನುಷ್ಯ ಸ್ವಾತಂತ್ರ್ಯ, ಸಮಾನತೆಯ ಬಗೆಗೆ ಮಾತನಾಡಿದ್ದಾರೆ. ನಮ್ಮಲ್ಲಿ ಹನ್ನೆರಡನೇ ಶತಮಾನದಲ್ಲಿಯೇ ಬಸವಣ್ಣನವರು ಸ್ವಾತಂತ್ರ್ಯ, ಸಮಾನತೆಯ ಕುರಿತು ಚಿಂತನೆ ಮಾಡಿದ್ದರು ಎಂದರು.

ಹಸಿದವರನ್ನು ಜೊತೆಗೆ ತೆ-ಗೆದುಕೊಂಡು ಮಹಾ ಮನೆಯಲ್ಲಿ ಉಣ್ಣುವ ಮೂಲಕ ಬಸವಣ್ಣನವರು ಮನುಷ್ಯ ಸಂಬಂಧಗಳನ್ನು ಗಟ್ಟಿಗೊಳಿಸಿದರು. ಎಲ್ಲ ಭೇದಗಳನ್ನು ಬಿಟ್ಟು ಸಾಮಾಜಿಕವಾಗಿ ಎಲ್ಲರನ್ನೂ ಒಳಗೊಳಿಸಿಕೊಂಡಿದ್ದು ವಚನ ಚಳುವಳಿ ಎಂದರು. ಬಸವಣ್ಣನವರಲ್ಲಿ ಆದೇಶಾತ್ಮಕ ವಿಚಾರಗಳಿರಲಿಲ್ಲ.

ಎಲ್ಲರೊಟ್ಟಿಗೆ ಬದುಕಲು ಹಂಬಲಿಸಿದ ಬಸವಣ್ಣ ಮತ್ತು ಗಾಂಧೀಜಿಯವರು ಆಪ್ತತೆಯ ವಿಚಾರಗಳು ಹೊಂದಿದ್ದರು. ಅವರ ಸಾಹಿತ್ಯದ ತಾತ್ವಿಕತೆ ಸಮಾಜವಾದಿಯಾಗಿದೆ. 'ಇವ ನಮ್ಮವ' ಎಂಬ ಆಪ್ತತೆಯ ಚಿಂತನೆಗಳಿಂದ ಬಸವಣ್ಣನವರ ಮತ್ತು ಎಲ್ಲಾ ಶರಣರ ವ್ಯಕ್ತಿತ್ವ ಶ್ರೇಷ್ಠವಾಗಿದೆ ಎಂದರು.

ಪ್ರತಿಷ್ಠಾನದ ಅಧ್ಯಕ್ಷ ಎಸ್. ಜಿ ಹುಡೇದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಗ್ರಂಥಾಲಯ ಸಹಾಯಕರಾದ ನಿಂಗಪ್ಪ ತುಂಬಗಿ,

ಚಂದ್ರಕಾಂತ ಅಕ್ಕಣ್ಣ, ಡಾ. ಶಿವಾಜಿ ಮೇತ್ರೆ, ಡಾ. ಶರಣಪ್ಪ ಗದಲೇಗಾಂವ , ಡಾ.ಸಂಗಪ್ಪ ತೌಡಿ, ನಾಗಪ್ಪ ನಿಣ್ಣೆ, ಶಿವಪುತ್ರ ಗಿರಗಂಟೆ, ಶಿವಪುತ್ರ ಸಂಗನಬಸವ, ಗಂಗಾಧರ ಸಾಲಿಮಠ, ವಿವೇಕಾನಂದ ಶಿಂದೆ, ನಿಂಗಪ್ಪ ಸಂವಾದದಲ್ಲಿ ಭಾಗವಹಿಸಿದ್ದರು. ನಾಗೇಂದ್ರ ಬಿರಾದಾರ ಭಾವಗೀತೆ ಹಾಡಿದರು.

ರಮೇಶ ಉಮಾಪುರೆ ಸ್ವಾಗತಿಸಿದರು. ಭೀಮಾಶಂಕರ ಬಿರಾದಾರ ಪ್ರಾಸ್ತಾವಿಕ ಮಾತನಾಡಿದರು. ಪ್ರತಿಷ್ಠಾನದ ಕಾರ್ಯದರ್ಶಿ ದೇವೇಂದ್ರ ಬರಗಾಲೆ ನಿರೂಪಿಸಿದರು. ಸಂಜುಕುಮಾರ ನಡುಕರ ವಂದಿಸಿದರು.



# ವಿವಿಧ ಕೋರ್ಸ್‌ಗಳಿಗೆ ಪ್ರವೇಶ ಪಡೆಯಲು ಮಾ. 31 ಕೊನೆಯ ದಿನ

**ಮಲ್ಲಮ್ಮ ನುಡಿ ವಾರ್ತೆ, ಕಲಬುರಗಿ:**

ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಲ್ಲಿ 2025-26ನೇ ಸಾಲಿನ (ಜನವರಿ ಆವೃತ್ತಿಯ) ಈ ಕೆಳಕಂಡ ವಿವಿಧ ಕೋರ್ಸ್‌ಗಳಿಗೆ ದಂಡ ಶುಲ್ಕವಿಲ್ಲದೇ ಪ್ರವೇಶ ಪಡೆಯಲು 2026ರ ಮಾರ್ಚ್ 31 ರಂದು ಕೊನೆಯ ದಿನವಾಗಿದೆ ಎಂದು ಕಲಬುರಗಿ ಪ್ರಾದೇಶಿಕ ಕೇಂದ್ರದ ನಿರ್ದೇಶಕರು ತಿಳಿಸಿದ್ದಾರೆ.

ಪ್ರಥಮ ಬಿ.ಎ./ಬಿ.ಕಾಂ., ಬಿ.ಎಲ್‌ಎಲ್‌ಐಬಿ.ಐ.ಎಸ್ಸಿ, ಬಿ.ಎಸ್ಸಿ, ಬಿ.ಬಿ.ಎ., ಬಿ.ಸಿ.ಎ. ಹಾಗೂ ಪ್ರಥಮ ಎಂ.ಎ.: (ಕನ್ನಡ, ಇಂಗ್ಲೀಷ, ಹಿಂದಿ, ಉರ್ದು, ಇತಿಹಾಸ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಸಾರ್ವಜನಿಕ ಆಡಳಿತ, ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ). ಎಂ.ಕಾಂ., ಎಂ.ಬಿ.ಎ., ಎಮ್.ಎಲ್‌ಐಬಿ.ಐ.ಎಸ್ಸಿ, ಎಂ.ಎಸ್.ಸಿ., ಎಂ.ಎಸ್.ಡಬ್ಲ್ಯೂ., ಬಿ.ಎಸ್.ಡಬ್ಲ್ಯೂ., ಎಂ.ಸಿ.ಎ. ಹಾಗೂ ಡಿಪ್ಲೋಮಾ ಕೋರ್ಸ್‌ಗಳ ವಿಷಯಗಳಿಗೆ ಪ್ರವೇಶ ಪಡೆಯಲು ಅರ್ಜಿ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಪ್ರಾದೇಶಿಕ ಕೇಂದ್ರದ ನಿರ್ದೇಶಕರಾದ ಹಣಮಂತ ಆರ್. ಕಾಳನೂರ ಇವರ ಮೊಬೈಲ್ ಸಂಖ್ಯೆ 9880061361 ಹಾಗೂ ವಿಶ್ವವಿದ್ಯಾಲಯದ www.ksoumysuru.ac.in ವೆಬ್‌ಸೈಟ್‌ನ್ನು ಸಂಪರ್ಕಿಸಲು ಕೋರಲಾಗಿದೆ.

# ಶ್ರೀವ್ಯಾಸರಾಜ ಮಠದಲ್ಲಿ ಶ್ರದ್ಧಾ ಭಕ್ತಿ ಯಿಂದ ಮದ್ವನವಮಿ ಆಚರಣೆ

• **ಮಲ್ಲಮ್ಮ ನುಡಿ ವಾರ್ತೆ,ಬಳ್ಳಾರಿ:**

ಮಗರದ ರೇಡಿಯೋ ಪಾಕ9 ಶ್ರೀವ್ಯಾಸರಾಜಮಠದಲ್ಲಿ ಶ್ರದ್ಧಾ ಭಕ್ತಿ ಯಿಂದ ಮಧ್ವನವಮಿ ಯನ್ನು ಆಚರಿಸಲಾಯಿತು. ಮಧ್ವನವಮಿ ಅಂಗವಾಗಿ ಪಂಡಿತ್ ಜಿತೇಂದ್ರಾಚಾಯ9 ಜೋಯಿಸ್‌ವರಿಂದ ಮೂರು ದಿನಗಳ ಶ್ರೀಮದ್ವವಿಜಯ ಅನುವಾದದ ಕುರಿತು ಪ್ರವಚನ ಜರುಗಿತು. ಬೆಳಿಗ್ಗೆ



ಸುಪ್ರಭಾತ, ವಾಯುಸ್ತುತಿ ಪಾರಾಯಣ ಹಾಗೂ ಪಂಚಾಮೃತ ಅಭಿಷೇಕ ನಡೆದವು. ನಂತರ ಶ್ರೀ ಮಧ್ವಾಚಾರ್ಯರ ಚಿತ್ರಪಟದ ಮೆರವಣಿಗೆ ಶ್ರೀಮಠದಿಂದ ರೇಡಿಯೋ ಪಾಕ9 ಅಭಯಾಂಜನೇಯ ದೇವಸ್ಥಾನ ವರೆಗೆ ಸಾಗಿತು. ದಾರಿ ಉದ್ದಕ್ಕೂ ಜಯಘೋಷ,. ಭಜನಾಮಂಡಳಿಗಳಿಂದ ದೇವರನಾಮಸಂಕೀತ9ನೆ ಕೋಲಾಟ ನಾನಾವಾದ್ಯ ಮೇಳಗಳು ನಡೆದವು. ಶ್ರೀಮಧ್ವಾಚಾಯ9ರ ಪಟವನ್ನು ರಜತ ರಥದಲ್ಲಿರಿಸಿಮಠದಪ್ರಾಕಾರದಲ್ಲಿ ರಥೋತ್ಸವ ಜರುಗಿಸಲಾಯಿತು. ಶ್ರೀ ಮಧ್ವ ವಿಜಯದ ಅನುವಾದದ ಪ್ರವಚನ ಮಂಗಳಮಹೋತ್ಸವ ನಡೆಯಿತು. ಮಧ್ಯಾಹ್ನ ಮಹಾಮಂಗಳಾರತಿ ಅಲಂಕಾರ ಬ್ರಾಹ್ಮಣ ಭೋಜನ, ಭಕ್ತಾದಿಗಳಿಗೆ ತೀರ್ಥಪ್ರಸಾದ ನಡೆಯಿತು. ಮಧ್ವನವಮಿ ಅಂಗವಾಗಿ ಪಂಚಬೃಂದಾವನಗಳಿಗೆ ವಿವಿಧ ಪುಷ್ಪ ಗಳಿಂದ ಅಲಂಕಾರ ಮಾಡಲಾಗಿತ್ತು. ಮಠದಪ್ರಧಾನ ಅಚ9ಕರಾದ ಶ್ರೀ.ಕೆ. ಪಾಂಡು ರಂಗಾಚಾಯ9 ಅವರು ಪೂಜಾ ಕಂಕಯ9 ಗಳನ್ನುನೇರವೇರಿಸಿದರು. ಸಾಯಂಕಾಲ ಶ್ರೀವ್ಯಾಸರಾಜ ಭಜನಾ ಮಂಡಳಿಯ ವರಿಂದ ಭಜನಾ ಕಾಯ9ಕ್ರಮ ನಡೆಯಿತು ನಂತರ ಸ್ವಸ್ತಿವಾಚನ. ಮಂಗಳಾರತಿ ಜರುಗಿತು. ಭಕ್ತಾಧಿಗಳಿಗೆ ತೀರ್ಥ, ಪ್ರಸಾದ ವಿತರಿಸಲಾಯಿತು. ಕಾಯ9ಕ್ರಮದಲ್ಲಿ ಮಠದ ಹಿತಷಿಗಳು ಹಾಗೂನೂರಾರುಭಕ್ತರು ಪಾಲ್ಗೊಂಡಿದ್ದರು.



• **ಮಲ್ಲಮ್ಮ ನುಡಿ ವಾರ್ತೆ ಕಮಲನಗರ:**

ಮಲ್ಲಮ್ಮ ನುಡಿ ದಿನ ಪತ್ರಿಕೆ ಹೊರ ತಂದ ವಿಶಿಷ್ಟ ಕ್ಯಾಲೆಂಡರರನ್ನು ಕಮಲನಗರ ತಾಲೂಕ ವೈದ್ಯಾಧಿಕಾರಿ ಡಾ. ಶ್ರೀಮಂತ ಮಡಿವಾಳ ಸರ್ ಅವರಿಗೆ ಕ್ಯಾಲೆಂಡರ್ ನೀಡಿ ಹೊಸ ವರ್ಷ 2026ರ ಅರೋಗ್ಯವಂತ ಸಮಾಜ ಕಟ್ಟುವಲ್ಲಿ ಸಹಕಾರ ಇರಲಿ ಎಂದು ಶುಭ ಕೋರಲಾಯಿತು.ಈ ಸಂದರ್ಭದಲ್ಲಿ ಕಮಲನಗರ ತಾಲೂಕ ಪತ್ರಕರ್ತ ಪರಮೇಶ ರಾಂಪುರೆ ಅವರು ಕ್ಯಾಲೆಂಡರ್ ನೀಡಿದರು.

# ಐಡಿಯಲ್ ಗ್ಲೋಬಲ್ ಶಾಲೆಯಲ್ಲಿ 77 ನೇಯ ಗಣರಾಜ್ಯೋತ್ಸವ ಆಚರಣೆ.

ಮಲ್ಲಮ್ಮ ನುಡಿ ವಾರ್ತೆ. ಬಸವಕಲ್ಯಾಣ :-

ನಗರದ ಐಡಿಯಲ್ ಗ್ಲೋಬಲ್ ಶಾಲೆಯಲ್ಲಿ 77 ನೇಯ ಗಣರಾಜ್ಯೋತ್ಸವ ಧ್ವಜಾರೋಹಣ ಸಂಸ್ಥೆಯ ಅಧ್ಯಕ್ಷರಾದ ಮುಜಾಹೀದ ಪಾಶಾ ಖುರೇಶಿ ನೆರವೇರಿಸಿ ಮಾತನಾಡಿ ಭಾರತವು ಸಿಂಧು ನಾಗರಿಕತೆ ಮತ್ತು ಗಂಗಾನದಿ ಹಿರಿಮೆಯಿಂದ ಭಾತೃತ್ವ ಭಾವದಿಂದ ವಿವಿದತೆಯಿಂದ ಎಕತೆ ಭಾರತದಲ್ಲಿದ್ದು ಹೀಗಾಗಿ ಜಗತ್ತು ನಮ್ಮ ದೇಶವನ್ನು ಪ್ರಶಂಸೆ ಮಾಡುತ್ತವೆ. ನಮ್ಮ ದೇಶದಲ್ಲಿ ಭಾವೈಕ್ಯತೆಯ ಜೋತೆಗೆ ಒಡಗುಡಿ ಎಲ್ಲರು ದೇಶದ ಪ್ರಗತಿ ಗಾಗಿ ಶ್ರಮಿಸೋಣ ಪ್ರತಿ ಒಬ್ಬರಲು ಜನ್ಮದಿಂದಲೆ ಪ್ರೀತಿ ಇರುತ್ತದೆ. ಮಕ್ಕಳನ್ನು ಬದುಕು ಸಾಧಿಸುವಲ್ಲಿ ಅತ್ಮವಿಶ್ವಾಸ ಒಳ್ಳೆಯ ಭಾವನೆ ತನ್ನ ಕಾಲಮೆಲೆ ತಾನುನಿಲ್ಲುವ ಆತ್ಮಬಲ ಬರಬೇಕು. ಮಕ್ಕಳಲ್ಲಿ ಏಕೆ ? ಎಂಬುದುನು ಪ್ರಶ್ನಿಸಿ ಉತ್ತರ ಹುಡುಕುವ. ಸಾಮರ್ಥ್ಯ ಬೆಳೆಯಬೇಕು. ಸಂವಿಧಾನದ




ಹಕ್ಕು ಕರ್ತವ್ಯಗಳು ಅರಿತು ಸಂಪೂರ್ಣ ಜ್ಞಾನ ಜೊತೆಗೆ ಜಗತ್ತಿನ ದೇಶಗಳ ಸಾಮಾನ್ಯ ಜ್ಞಾನ ಹೋಂದಿರಬೇಕು.

ದೇಶಅಭೀವೃದ್ಧಿಹೊಂದಬೇಕಾದರರೆ ನ್ಯಾಯ. ರಾಜಕೀಯ. ಸಂಶೋಧನೆ. ಸಂಸ್ಕೃತಿಯಾವುದೆ. ಅಡೆತಡೆಯಿಲ್ಲದೆ. ಎಲ್ಲರಿಗು ಸಮಾನವಾಗಿ ನಡೆಯಬೇಕು. ಈ ಸಂದರ್ಭದಲ್ಲಿ

ಐಡಿಯಲ್ ಪಿಯು ಕಾಲೇಜ ಐ-ಸ್ಯಾಟ ಪರೀಕ್ಷೆಯ ಬಹುಮಾನ ವಿತರಣೆ.

ಐಡಿಯಲ್ ಪಿಯು ಕಾಲೇಜ 2025-26 ನೇ ಸಾಲಿನ ಪ್ರಥಮ ಪಿಯುಸಿ ಪ್ರವೇಶಕ್ಕಾಗಿ ಐ-ಸ್ಯಾಟ ರೀಕ್ಷೆಯನ್ನು ನಡೆಸಿತ್ತು. ಈ ಪರೀಕ್ಷೆಯಲ್ಲಿ ಒಟ್ಟು 40. ಕ್ಕಿಂತ ಹೆಚ್ಚು ಶಾಲೆಗಳ 1200 ಕ್ಕಿಂತ ಹೆಚ್ಚು ಮಕ್ಕಳು ಪರೀಕ್ಷೆಗೆ ಹಾಜರಿದ್ದರು. ಇವರಲ್ಲಿ ಅತ್ಯುತ್ತಮ ಅಂಕಪಡೆದ ವಿದ್ಯಾರ್ಥಿಗಳೆಂದರೆ ಪ್ರಥಮ ಅಭಿಷೇಕ ಮಚ್ಚೆಂದ್ರ 10000 ಸಾವಿರ ರೂಪಾಯಿಗಳು. ದ್ವಿತಿಯ ಸ್ಥಾನ ಅಭಿನಯ ಚಂದ್ರಕಾಂತ 5000 ಸಾವಿರ ರೂಪಾಯಿಗಳು, ತೃತಿಯ ಸ್ಥಾನ ಚಂದು ರವೀಂದ್ರ 3000 ಸಾವಿರ ಬಹುಮಾನಗಳನು ಪಡೆದಿರುತ್ತಾರೆ. ಜೋತೆಗೆ ಹಲವಾರು ಮಕ್ಕಳು ಸಮಾಧಾನ ಕರ ಬಹುಮಾನ ಪಡೆದುಕೊಂಡಿರುತ್ತಾರೆ. ಪರೀಕ್ಷೆಗೆ ಹಾಜರಾದ ಎಲ್ಲಾ ಮಕ್ಕಳಿಗೆ ಕೊಡುಗೆಯನ್ನು ನೀಡಲಾಯಿತು.

ಈ ಸಂದರ್ಭದಲ್ಲಿ ಮಕದುಂಮ ಅಹಮ್ಮದ ಖುರೇಷಿ. ಶಕೀಲ ಅಹಮ್ಮದ ಖುರೇಷಿ. ಡಾ. ಕರಿಮ ಸಾಬ. ರಬ್ಬಾನಿ ಬಾಗ, ಅಮೀರ ಸೇಠ, ಚಾಂದ ಪಾಶಾ ಕಬಾಡಿ, ಶಾಂತಲಿಂಗ ಮಠಪತಿ. ವೆಂಕಟ. ಮುಜ್ತಹೀದ ಉಮರ ಖೂರೇಶಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಗ್ರಾಮಗಳ ಪ್ರವೇಶ ದ್ವಾರಕ್ಕೆ ತಂಬಾಕು ನಿಷೇಧ ಫಲಕ ಅಳವಡಿಸಲು ಸೂಚನೆ: ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ

**ಮಲ್ಲಮ್ಮ ನುಡಿ ವಾರ್ತೆ, ಕಲಬುರಗಿ:**

ಪ್ರತಿಯೊಂದು ಗ್ರಾಮಗಳ ಪ್ರವೇಶ ದ್ವಾರಕ್ಕೆ ತಂಬಾಕು ನಿಷೇಧ ಮತ್ತು ಶಾಲಾ ಕಾಲೇಜು ಆವರಣದಲ್ಲಿ ತಂಬಾಕು ನಿಷೇಧ ಫಲಕ ಅವಳವಡಿಸಿ ಎಂದು ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ನಗರದಲ್ಲಿ ಬುಧುವಾರ ಜಿಲ್ಲಾಡಳಿತ ಸಭಾಂಗಣದಲ್ಲಿ ಜಿಲ್ಲಾ ಮಟ್ಟದ ತಂಬಾಕು ನಿಯಂತ್ರಣ ಸಮನ್ವಯ ಸಮಿತಿ ಸಭೆಯನ್ನುದೇಶಿಸಿ ಮಾತನಾಡಿದ ಅವರು, ತಾಲ್ಲೂಕು ಮಟ್ಟದಲ್ಲಿ ತಹಶೀಲ್ದಾರರ ನೇತೃತ್ವದಲ್ಲಿ 3 ತಿಂಗಳಿಗೊಮ್ಮೆ ತ್ರೈಮಾಸಿಕ ಸಭೆಯನ್ನು ನಡೆಸಿ ಸಭಾ ನಡಾವಳಿಕ್ಕೆಯನ್ನು ಕಚೇರಿ ಸಲ್ಲಿಸಬೇಕು. ಎಂದರು.

ಎಲ್ಲಾ ಸರ್ಕಾರಿ ಮತ್ತು ಖಾಸಗಿ ಅನುದಾನಿತ ಶಾಲಾ ಕಾಲೇಜುಗಳಲ್ಲಿ ತಂಬಾಕು ನಿಯಂತ್ರಣ ಸಮಿತಿ ರಚಿಸಿ. ಸುತ್ತ-ಮುತ್ತ 100 ಮೀಟರ್ ಒಳಗೆ ತಂಬಾಕು ಉತ್ಪನ್ನಗಳ ಮಾರಾಟ ಅಂಗಡಿಗಳು ಕಂಡು ಬಂದಲ್ಲಿ ಪೋಲೀಸ್ ಇಲಾಖೆಗೆ ತಿಳಿಸಿ, ಪರವಾನಿಗೆ ಇಲ್ಲದ ಅಂಗಡಿಗಳ ಮೇಲೆ ದಾಳಿ ಕೈಗೊಂಡು ದಂಡ ವಿಧಿಸಿ. ತಂಬಾಕು ಮಾರಾಟ ಆಗದಂತೆ ಕಠಿಣ ಕ್ರಮ ವಹಿಸಬೇಕೆಂದು ಎಚ್ಚರಿಸಿದರು.

ತಂಬಾಕು ನಿಯಂತ್ರಣ ಸಲಹೆಗಾರ್ತಿ ಸುಜಾತಾ ಪಾಟೀಲ ಮಾತನಾಡಿ




ಜಿಲ್ಲೆಯಾದ್ಯಂತ ಕೋಟ್ಪಾ-2003 (ಅಔಖಿಕಂ) ಕಾಯ್ದೆಯಡಿ ಏಕಕಾಲಕ್ಕೆ ದಾಳಿ ನಡೆಸಲಾಗಿದ್ದು, ಒಟ್ಟು 519 ಪ್ರಕರಣಗಳನ್ನು ದಾಖಲಿಸಲಾಗಿದೆ. ಬರೋಬ್ಬರಿ ₹5,46,500 ದಂಡವನ್ನು ಸಂಗ್ರಹಿಸಿ ಸರ್ಕಾರಕ್ಕೆ ಜಮೆ ಮಾಡಲಾಗಿದೆ.

ಜಿಲ್ಲೆಯ ಸುಮಾರು 3,704 ಶಾಲೆಗಳಲ್ಲಿ ತಂಬಾಕು ವಿರೋಧಿ ಪ್ರತಿಜ್ಞಾ ವಿಧಿ ಸ್ವೀಕರಿಸುವ ಮೂಲಕ ಜಾಗೃತಿ ಮೂಡಿಸಲಾಗಿದೆ. ಅಲ್ಲದೆ ತಂಬಾಕು ಮುಕ್ತ ಶೈಕ್ಷಣಿಕ ಸಂಸ್ಥೆ ಅಭಿಯಾನದಡಿ ಜಿಲ್ಲೆಯ 641 ಶಾಲೆಗಳು ಈಗಾಗಲೇ ನೋಂದಾಯಿಸಿಕೊಂಡಿದ್ದು, ಉಳಿದ 3098 ಶಾಲೆಗಳ ನೋಂದಣಿ ಪ್ರಕ್ರಿಯೆ ಪ್ರಗತಿಯಲ್ಲಿದೆ ಎಂದರು.

ಪ್ರತಿ ಗ್ರಾಮ ಪಂಚಾಯಿತಿಯಿಂದ ಕನಿಷ್ಠ 2 ಗ್ರಾಮಗಳನ್ನು ತಂಬಾಕು ಮುಕ್ತ ಗ್ರಾಮಗಳೆಂದು ಘೋಷಿಸಲು ಕ್ರಮ ಕೈಗೊಳ್ಳಲಾಗಿದೆ. ಅಫಜಲಪುರ ತಾಲೂಕಿನ 14 ಗ್ರಾಮಗಳು ಈಗಾಗಲೇ ಈ ನಿಟ್ಟಿನಲ್ಲಿ ಸಮಿತಿಯನ್ನು ರಚಿಸಿ ವರದಿ ಸಲ್ಲಿಸಿವೆ ಎಂದರು.

ಗುಲ್ಬರ್ಗ ಮತ್ತು ಕೇಂದ್ರೀಯ ವಿಶ್ವವಿದ್ಯಾಲಯದ ಪತ್ರಿಕೋದ್ಯಮ ವಿದ್ಯಾರ್ಥಿಗಳಿಂದ ತಂಬಾಕು ಮುಕ್ತ ಯುವ ಅಭಿಯಾನ ಪ್ರಬಂಧ ಸ್ಪರ್ಧೆಯಲ್ಲಿ ಭಾಗಿಯಾದ ವಿದ್ಯಾರ್ಥಿಗಳಿಗೆ ಗೌರವಿಸಲಾಯಿತು.

ವಿಭಾಗೀಯ ಸಂಯೋಜಕರು ಹಾಗೂ ರಾಜ್ಯ ತಂಬಾಕು ನಿಯಂತ್ರಣ ಕೋಶ, ಬೆಂಗಳೂರು. ಮಹೇಶ್ ಉಳ್ಳಾಗಡ್ಡಿ ಅವರು ಮಾತನಾಡಿ ,ಜಿಲ್ಲೆಯನ್ನು ತಂಬಾಕು ಮುಕ್ತವನ್ನಾಗಿಸುವ ನಿಟ್ಟಿನಲ್ಲಿ ಜಿಲ್ಲಾಡಳಿತ ಹಾಗೂ ಜಿಲ್ಲಾ ತಂಬಾಕು ನಿಯಂತ್ರಣ ಕೋಶವು ಬಿಗಿ ಕ್ರಮಗಳನ್ನು ಕೈಗೊಂಡಿದೆ. ಇತ್ತೀಚೆಗೆ ನಡೆದ ಸಮನ್ವಯ ಸಮಿತಿ ಸಭೆಯಲ್ಲಿ ಹಮ್ಮಿಕೊಳ್ಳಲಾದ ಕಾರ್ಯಚಟುವಟಿಕೆಗಳ ಸಮಗ್ರ ವರದಿಯನ್ನು ಮಂಡಿಸಲಾಗಿದ್ದು, ನಿಯಮ ಉಲ್ಲಂಘಿಸಿದವರಿಂದ ಭಾರಿ ಪ್ರಮಾಣದ ದಂಡ ವಸೂಲಿ ಮಾಡಲಾಗಿದೆ ಎಂದರು. ಪೊಲೀಸ್ ಇಲಾಖೆ, ಶಿಕ್ಷಣ ಇಲಾಖೆ ಹಾಗೂ ಆರೋಗ್ಯ ಇಲಾಖೆಗಳು ಜಂಟಿ-ಯಾಗಿ ಕಾರ್ಯನಿರ್ವಹಿಸುತ್ತಿದ್ದು, ಬರುವ ದಿನಗಳಲ್ಲಿ ಕಲಬುರಗಿಯನ್ನು ಸಂಪೂರ್ಣ ತಂಬಾಕು ಮುಕ್ತ ಜಿಲ್ಲೆಯನ್ನಾಗಿ ಮಾಡುವ ಗುರಿ ಹೊಂದಲಾಗಿದೆ ಹೇಳಿದರು.

ಇದೇ ಸಂದರ್ಭದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಡಾ.ಶರಣಬಸಪ್ಪ ಖ್ಯಾತನಾಳ, ಜಿಲ್ಲಾ ಎನ್ ಫೋರ್ಸ್ ಮೆಂಟ್ ಅಧಿಕಾರಿ ಡಾ.ಶಿವಶರಣಪ್ಪ ಬಿ, ಜಿಲ್ಲಾ ಸಮೀಕ್ಷಣಾ ಅಧಿಕಾರಿಗಳು ಡಾ.ರಾಕೇಶ್ ಕಾಂಬಳೆ, ಜಿಲ್ಲಾ ಕುಷ್ಠರೋಗ ಅಧಿಕಾರಿಗಳು ಡಾ. ವಿವೇಕಾನಂದ ರೆಡ್ಡಿ, ಜಿಲ್ಲಾ ಬಾಯಿ ಆರೋಗ್ಯ ಕಾರ್ಯಕ್ರಮ ಅಧಿಕಾರಿಗಳು ಡಾ. ಸಂಧ್ಯಾ ಕಾನೇಕರ್ ವಿವಿಧ ಇಲಾಖೆಯ ಜಿಲ್ಲಾ ಮಟ್ಟದ ಹಾಗೂ ತಾಲೂಕಾ ಮಟ್ಟದ ಅಧಿಕಾರಿಗಳು, ಜಿಲ್ಲಾ ತಂಬಾಕು ನಿಯಂತ್ರಣ ಕೋಶ ತಂಡದವರು ಉಪಸ್ಥಿತರಿದ್ದರು.




ಯಾದಗಿರಿ.:ವಡಿಗೇರ ತಾಲೂಕಿನ ಕಾಡಂಗೇರಾ ಗ್ರಾಮದ ಖಾಸಗಿ ಶಿಕ್ಷಣ ಸಂಸ್ಥೆಯಾದ ಕೃಷ್ಣ ಪ್ರಾಥಮಿಕ ಶಾಲೆಯಲ್ಲಿ ಗಣರಾಜ್ಯೋತ್ಸವ ಸಂಭ್ರಮದಿಂದ ಆಚರಿಸಿದರು. ಈ ಸಂದರ್ಭದಲ್ಲಿ ಶಾಲೆಯ ಮುಖ್ಯಸ್ಥ ಮಾಳಪ್ಪ ಯಾದವ, ಶಾಲಾ ಮುಖ್ಯ ಗುರು ಸಿಂಧೂ ಪಾಟೀಲ್, ಮುಖ್ಯ ಅತಿಥಿ ಪಶು ವೈದ್ಯರಾದ ಡಾ.ವಿನೋದ್ ಇದ್ದರು ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನೋಡುಗರ ಗಮನ ಸೆಳೆಯಿತು.

# ಜ.30 ರಿಂದ ಸ್ಪರ್ಶ ಕುಷ್ಠರೋಗ ಅರಿವು ಆಂದೋಲನ



• **ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ:**

ತಾಲ್ಲೂಕಿನ ಎಲ್ಲಾ ಶಾಲೆಗಳಲ್ಲಿ ರಾಷ್ಟ್ರೀಯ ಕುಷ್ಠರೋಗ ನಿರ್ಮೂಲನೆ ಕಾರ್ಯಕ್ರಮದಡಿಯಲ್ಲಿ ಜ.30ರಿಂದ ಫೆ.13ರವರೆಗೆ ಜಾಥಾಗಳ ಮೂಲಕ ಸ್ಪರ್ಶ ಕುಷ್ಠರೋಗ ಅರಿವು ಆಂದೋಲನ ಜನ ಜಾಗೃತಿ ನಡೆಯಲಿದೆ ಎಂದು ತಾಲ್ಲೂಕು ಆರೋಗ್ಯಾಧಿಕಾರಿ ರವಿ ಜಿ.ಕಲ್ಲಶೆಟ್ಟಿ ಹೇಳಿದರು.ಪಟ್ಟಣದ ತಹಶೀಲ್ದಾರ್ ಕಚೇರಿಯಲ್ಲಿ ನಡೆದ ಸ್ಪರ್ಶ ಕುಷ್ಠರೋಗ ಅರಿವು ಆಂದೋಲನ ಜನಜಾಗೃತಿ ಕಾರ್ಯಕ್ರಮದ ಪೂರ್ವ ಸಿದ್ಧತಾ ಸಭೆಯಲ್ಲಿ ಅವರು ಮಾತನಾಡಿದರು.

ಸ್ಪರ್ಶ ಕುಷ್ಠರೋಗ ಅರಿವು ಆಂದೋಲನ ಕುರಿತು ಎಲ್ಲಾ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಗ್ರಾಮಗಳಲ್ಲಿ ಡಂಗೂರ ಸಾರಿ ಜನರಿಗೆ ಜಾಗೃತಿ ಮೂಡಿಸಬೇಕು.

ಜ.30ರಂದು ಗ್ರಾಮ ಪಂಚಾಯಿತಿಯಲ್ಲಿ ಪ್ರತಿಜ್ಞಾ ವಿಧಿ ಕೈಗೊಂಡು ಕುಷ್ಠರೋಗಕ್ಕೆ ಸಂಬಂಧಿಸಿದಂತೆ ಜಾಗೃತಿ ಮೂಡಿಸಬೇಕು ಎಂದು ತಿಳಿಸಿದರು. ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಚಂದ್ರಶೇಖರ ಇಜಾರೆ

ಸಭೆಯ ಅಧ್ಯಕ್ಷತೆ ವಹಿಸಿದ್ದ ಗೋಪಾಲ ಹಿಪ್ಪರಗಿ ಮಾತನಾಡಿ, ಎಲ್ಲಾ ಇಲಾಖೆಯವರುಆರೋಗ್ಯ ಇಲಾಖೆಗೆ ಅಗತ್ಯ ಸಹಾಯ, ಸಹಕಾರ ಒದಗಿಸಿ ರಾಷ್ಟ್ರೀಯ ಕುಷ್ಠರೋಗ ನಿರ್ಮೂಲನೆ ಕಾರ್ಯಕ್ರಮ ಯಶಸ್ವಿ ಮಾಡಬೇಕು ಎಂದು ಹೇಳಿದರು. ಪ್ರಮುಖರಾದ ರೋಹಿದಾಸ ಜಿ. ರಾಠೋಡ್, ಆಕಾಶ, ಗುಂಡಪ್ಪಾ, ಸಂತೋಷ ಸೇರಿದಂತೆ ಇತರರು ಇದ್ದರು.

# ನಗರ ಡಿವೈಎಸ್ಪಿಯಾಗಿ ಯಶ್ ಕುಮಾರ್ ಶರ್ಮಾ ನಿಯೋಜನೆ



• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ,:**

ನಗರದಡಿವೈಎಸ್ಪಿಯಾಗಿ ಐಪಿಎಸ್ ಅಧಿಕಾರಿ ಯಶ್ ಕುಮಾರ್ ಶರ್ಮಾ ಅವರನ್ನು ಸರ್ಕಾರನಿಯೋಜನೆ ಮಾಡಿ ನಿನ್ನೆ ಆದೇಶ ಹೊರಡಿಸಿದೆ. ನೆಜ್ಜೂರ್,ಐಜಿಪಿ ವ ರ್ತಿ ಕಾ ಕಟಿಯಾರ್ ಅವರವರ್ಗಾವಣೆ ಮಾಡಲಾಗಿತ್ತು. .ಇದೀಗರಾಜ್ಯ ಸರ್ಕಾರ,ನಗರ ಡಿವೈಎಸ್ ಪಿ ಚಂದ್ರಕಾಂತ್ ನಂದಾರೆಡ್ಡಿ

ನಗರದಲ್ಲಿ ಜ.1 ರಂದು ನಡೆದ ಬ್ಯಾನರ್, ಫೈರಿಂಗ್ ಗಲಾಟೆ ಪ್ರಕರಣಕ್ಕೆ ಸಂಬಂಧಿಸಿದಂತೆ ನಗರ ಡಿವೈಸ್ಪಿ ಚಂದ್ರಕಾಂತ್ ನಂದಾರೆಡ್ಡಿ ಅವರನ್ನು ಸ್ಥಳ ನಿಯುಕ್ತಿಗೊಳಿಸದೆ ವರ್ಗಾವಣೆ ಮಾಡಲಾಗಿದೆ.

ಬ್ಯಾನರ್ ಗಲಾಟೆಯಿಂದಾಗಿ ಎಸ್ಪಿಯಾಗಿ ಬಂದಿದ್ದ ಪವನ್ ಅವರನ್ನು ಸ್ಥಳ ತೋರಿಸದೆ ವರ್ಗಾವಣೆ ಮಾಡಿದ್ದು, ಅವರ ಸ್ಥಾನಕ್ಕೆ ನೂತನ ಐಪಿಎಸ್ ಅಧಿಕಾರಿ ಯಶ್ ಕುಮಾರ್ ಶರ್ಮಾ ಅವರನ್ನು ನಿಯೋಜಿಸುವ ಮೂಲಕ ಬ್ಯಾನರ್ ಗಲಾಟೆ ಸಂಬಂಧ ಮೂರನೇ ಅಧಿಕಾರಿಯನ್ನು ವರ್ಗ ಮಾಡಿದಂತೆ ಆಗಿದೆ.

# ಕನಸಿಗದ್ದೆಯಲ್ಲಿ ನಡೆದ ರಂಗೋಲಿ ಸ್ಪರ್ಧೆ








• **ಮಲ್ಲಮ್ಮ ನುಡಿ ವಾರ್ತೆ ಅಂಕೋಲಾ :**

ಪಟ್ಟಣದ ಕನಸಿಗದ್ದೆಯ ಶ್ರೀ ನರಸಿಂಹ ಭಜನಾ ಮಂಡಳಿಯ ಆಶ್ರಯದಲ್ಲಿ 7 ದಿನಗಳ ಕಾಲ ನಡೆದ ಭಜನಾ ಸಪ್ತಾಹವು ವಿವಿಧ ಧಾರ್ಮಿಕ,ಸಾಂಸ್ಕೃತಿಕ,ಸಾಮಾಜಿಕ ಕಾರ್ಯಕ್ರಮ ವಿಜೃಂಭಣೆಯಿಂದ ನಡೆಯಿತು.ಶ್ರೀ ನರಸಿಂಹ ದೇವರು ಹಾಗೂ ರಾಮನಾಥ ದೇವರ ರಥೋತ್ಸವ ಸಂಪನ್ನಗೊಂಡಿತ್ತು.

ಭಜನಾ ಸಪ್ತಾಹದಲ್ಲಿ ವಿಶೇಷವಾಗಿ ಹಲವು ರಂಗೋಲಿಗಳು ಜನಮನ ಸೆಳೆಯಿತು. ಈಶ್ವರ, ಬಾಲಕೃಷ್ಣ, ಗಿಲ್ಲಿನಟ, ವರಾಹರೂಪ, ಆಹಾರ ಧಾನ್ಯ, ಸಾಲುಮರದ ತಿಮ್ಮಕ್ಕ ಸೇರಿದಂತೆ ಹಲವು ರಂಗೋಲಿಗಳು ಒಂದಕ್ಕಿಂತ ಇನ್ನೊಂದು ನೋಡುಗರ ಮನ ಸೆಳೆದವು. ರಾತ್ರಿ 'ಪ್ರೇಯಸಿ ಅಲ್ಲ ರಾಕ್ಷಸಿ' ಎಂಬ ಸಾಮಾಜಿಕ ನಾಟಕ ಪ್ರದರ್ಶನಗೊಂಡವು.

# ಕಲಬುರಗಿ ಜಿಲ್ಲೆಗೆ 2351 ಸ್ಟೀಲ್ ವಾಟರ್ ಬಾಟಲ್ ಮತ್ತು ಊಟದ ಪ್ಲೇಟ್ ಉಚಿತ ವಿತರಣೆ

• **ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ:**

ನೋವೆಲ್ ಹೋಪ್ ಫೌಂಡೇಶನ್ ಬೆಂಗಳೂರು ವತಿಯಿಂದ ಕಲಬುರಗಿ ಜಿಲ್ಲೆಯ 10 ಸರ್ಕಾರಿ ಶಾಲೆಗಳಿಗೆ ಅಂದರೆ ಸರಕಾರಿ ಮಾದರಿ ಪ್ರಾಥಮಿಕ ಶಾಲೆಗಳಾದ ಹೊನ್ನಕಿರಣಗಿ, ಪಟ್ಟಣ, ಜೇವರ್ಗಿ ಕಾಲೋನಿ ಕಲ್ಬುರ್ಗಿ, ಸಿಂದಗಿ ಬಿ, ಬಂದರವಾಡ, ಗರೂರ್ ಬಿ, ಬೆಳಗುಂಪಾ ಅಲ್ಲದೆ ಪ್ರೌಢ ಶಾಲೆಗಳಾದ ಬಂದರವಾಡ ಮತ್ತು ಮಹಾಗಾಂವ ಶಾಲೆಗಳ ಎಲ್ಲಾ ವಿದ್ಯಾರ್ಥಿಗಳಿಗೆ ಸ್ವತಹ ಫೌಂಡೇಶನ್ ಸೀನಿಯರ್ ಸಿ ಎಸ್ ಆರ್ ಎಕ್ಸಿಕ್ಯೂಟಿವ್ ದೀಪಕ್ ಆರ್ ಅವರು ಪ್ರತಿ ಶಾಲೆಗೆ ಬಂದು ವಾಟರ್ ಬಾಟಲ್ ಮತ್ತು ಊಟದ ಪ್ಲೇಟಗಳನ್ನು ವಿತರಿಸಿದರು.

ವಿತರಣಾ ಸಮಯದಲ್ಲಿ ದೀಪಕ್ ಆರ್ ಮಾತನಾಡುತ್ತಾ ಸರಕಾರಿ ಶಾಲಾ ಮಕ್ಕಳ ಭೌತಿಕ ಪರಿಸರ ಮತ್ತು ಶಿಕ್ಷಣದ ಗುಣಮಟ್ಟ ಹೆಚ್ಚಾಗಬೇಕು ಹಾಗೂ ಹಾಜರಾತಿ ಹೆಚ್ಚಿಸಬೇಕೆಂಬ ಸದುದ್ದೇಶದಿಂದ ನಾವು ಇಂದು ಒಟ್ಟು 10 ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ 2351 ಸ್ಟೀಲ್ ವಾಟರ್ ಬಾಟಲ್ ಮತ್ತು ಊಟದ ಪ್ಲೇಟ್ ಗಳನ್ನು ನಮ್ಮ ಸಂಸ್ಥೆಯ ವತಿಯಿಂದ ನೀಡಿದ್ದೇವೆ ಅಲ್ಲದೆ ಫೌಂಡೇಶನ್ ವತಿಯಿಂದ ನಡೆಸಿಕೊಂಡು ಬರುತ್ತಿರುವ ಸಮಾಜಮುಖಿ ಕಾರ್ಯಗಳನ್ನು ಸಹ ವಿಸ್ತಾರವಾಗಿ ತಿಳಿಸಿದರು. ಹಾಗೂ ಮುಂದಿನ ದಿನಗಳಲ್ಲಿ ಫೌಂಡೇಶನ್ ವತಿಯಿಂದ ಟ್ರ್ಯಾಕ್ ಸೂಟ್, ಜಾಮೆಟ್ರಿ ಬಾಕ್ಸ್, ಬಡ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಕ್ಕಾಗಿ ಆರ್ಥಿಕ ಸಹಾಯ ಹಾಗೂ ವೈದ್ಯಕೀಯ ವೆಚ್ಚಗಳನ್ನು ನೀಡುವ ಹಾಗೂ ಅವಶ್ಯಕತೆ ಇರುವ ಕಡೆ ಶೌಚಾಲಯಗಳನ್ನು ನಿರ್ಮಿಸಿ ಕೊಡುತ್ತೇವೆ ಮತ್ತು ಶಿಕ್ಷಕರ ಕೊರತೆ ಇರುವಲ್ಲಿ ಅತಿಥಿ ಶಿಕ್ಷಕರ ನೇಮಿಸಿ ಅವರಿಗೆ ವೇತನವನ್ನು ಕೂಡ ನೀಡುತ್ತದೆ ಆದರೆ ನಿಮ್ಮಿಂದ ನಮ್ಮ ಸಂಸ್ಥೆ ಯಾವುದೇ ಫಲಾಪೇಕ್ಷೆ ಬಯಸುವುದಿಲ್ಲ. ಆದರೆ ಎಲ್ಲಾ ವಿದ್ಯಾರ್ಥಿಗಳು ಚೆನ್ನಾಗಿ ಓದಿ ಉತ್ತಮ ಪ್ರಜೆಯಾಗಿ ಸಮಾಜಕ್ಕೆ ಒಳ್ಳೆಯ ಕೊಡುಗೆ ನೀಡಬೇಕು ಹಾಗೆ ನಿಮ್ಮಿಂದ ಎಷ್ಟು ಸಾಧ್ಯ ವಾಗುತ್ತೋ ಅಷ್ಟು ಸಮಾಜದಲ್ಲಿ ಕಷ್ಟದಲ್ಲಿರುವ ವ್ಯಕ್ತಿಗೆ ಅಥವಾ ಸಮುದಾಯಕ್ಕೆ ಸಹಾಯ ಮಾಡಿ ಎಂದು ತಿಳಿಸುವುದರ ಜೊತೆಗೆ 2024–25 ಮತ್ತು 2025–26 ರ ಶೈಕ್ಷಣಿಕ ಅವಧಿಯಲ್ಲಿ ಕಲಬುರಗಿ ಜಿಲ್ಲೆಗೆ ಎನ್ ಎಚ್ ಎಫ್ ವತಿಯಿಂದ ಸುಮಾರು 70 ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ 8184 ಸ್ಕೂಲ್ ಬ್ಯಾಗುಗಳು ಹಾಗೂ 2651 ಸ್ಟೀಲ್ ವಾಟರ್ ಬಾಟಲ್ ಹಾಗೂ ಊಟದ ಪ್ಲೇಟ್‌ಗಳನ್ನು ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳಿಗೆ ನೀಡಿದ್ದೇವೆ.

ಈ ಸೇವಾ ಕಾರ್ಯವನ್ನು ನಿರ್ವಹಿಸಲು ನಮ್ಮ ಫೌಂಡೇಶನ್ ಗೆ ಸಂಪೂರ್ಣವಾಗಿ ಸಹಕರಿಸಿದ ಶ್ರೀಮತಿ ಸುನಂದ ಚೌಧರಿ ಸಹ ಶಿಕ್ಷಕಿ ಜಿಎಂಪಿಎಸ್ ಬಸನಾಳ ಹಾಗೂ ವಿಜಯಕುಮಾರ ಸೂರಪ್ಪನೂರ ಸಹ ಶಿಕ್ಷಕರು ಸರ್ಕಾರಿ ಪ್ರೌಢಶಾಲೆ ಬಂದರವಾಡ ಶಿಕ್ಷಕ ದಂಪತಿಗಳಿಗೆ ಅಭಿನಂದನೆಗಳನ್ನು ತಿಳಿಸಿದರು.

ಅಲ್ಲದೆ ಮುಂಬರುವ ದಿನಗಳಲ್ಲಿ ಕಲಬುರಗಿ ಜಿಲ್ಲೆಯ ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗೆ ಪೂರಕವಾಗಿರುವ ಸೌಕರ್ಯಗಳನ್ನು ನೀಡುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆಂದು ವಿಶ್ವಾಸ ವ್ಯಕ್ತಪಡಿಸಿದರು. ಫೌಂಡೇಶನ್ ಈ ನಿಸ್ವಾರ್ಥ ಕಾರ್ಯಕ್ಕೆ ಶಿಕ್ಷಣ ಇಲಾಖೆ ಅಧಿಕಾರಿಗಳು, ಎಲ್ಲಾ ಶಾಲೆಯ ಮುಖ್ಯ ಗುರುಗಳು ಮತ್ತು ಶಿಕ್ಷಕ ಸಿಬ್ಬಂದಿ ವರ್ಗದವರು, ಎಸ್ ಡಿ ಎಂ ಸಿ ಅಧ್ಯಕ್ಷರು ಮತ್ತು ಸದಸ್ಯರುಗಳು, ಗ್ರಾಮಸ್ಥರು ಹಾಗೂ ವಿದ್ಯಾರ್ಥಿಗಳು ಹರ್ಷವನ್ನು ವ್ಯಕ್ತಪಡಿಸಿರುತ್ತಾರೆ.

# ಉತ್ಸವದಲ್ಲಿ ರಾಯಚೂರು ಸಿಟಿ ಸುಂದರವಾಗಿ ಕಾಣಲಿ




• **ಮಲ್ಲಮ್ಮ ನುಡಿ ವಾರ್ತೆ ,ರಾಯಚೂರು:**

ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವವು ಯಶಸ್ವಿಯಾಗಿ ನಡೆಯುವ ನಿಟ್ಟಿನಲ್ಲಿ ರಾಯಚೂರು ಸಿಟಿಯು ಸುಂದರವಾಗಿ ಕಾಣಬೇಕು. ಈ ದಿಶೆಯಲ್ಲಿ ಯೋಚಿಸಿ ಪ್ರತಿಯೊಬ್ಬ ಪೌರ ಕಾರ್ಮಿಕರು ಸ್ವಚ್ಛತಾ ಕಾರ್ಯದಲ್ಲಿ ಸಕ್ರಿಯ ಭಾಗಿಯಾಗಬೇಕು ಎಂದು ರಾಯಚೂರು ಮಹಾನಗರ ಪಾಲಿಕೆ ಆಯುಕ್ತರಾದ ಜುಬಿನ್ ಮೋಹಪಾತ್ರ ಅವರು ಹೇಳಿದರು.

ನಗರದ ಜೈಲ್‌ಖಾನ್ ಬಳಿಯಲ್ಲಿರುವ ಮಹಿಳಾ ಸಮಾಜ ಮೈದಾನದಲ್ಲಿ ಜನವರಿ 28ರಂದು ಪೌರ ಕಾರ್ಮಿಕರ ಸಭೆ ನಡೆಸಿ ಅವರು ಮಾತನಾಡಿದರು.

ಶುಚಿತ್ವ ಇದ್ದಲ್ಲಿ, ಶಿಸ್ತು ಇದ್ದಲ್ಲಿ ಶಾಂತಿ ಇರುತ್ತದೆ. ಈ ದಿಶೆಯಲ್ಲಿ ನಾವೆಲ್ಲರೂ ಯೋಚಿಸಿ ಉತ್ಸವದ ನಿಗದಿಯಾದ ಈ ಸಂದರ್ಭದಲ್ಲಿ ನಮ್ಮ ನಮ್ಮ ಮನೆ, ಮನೆಯ ಸುತ್ತಲಿನ ಪರಿಸರ, ರಸ್ತೆ, ಗಟಾರು, ಸಾರ್ವಜನಿಕ ಸ್ಥಳಗಳು ಸೇರಿದಂತೆ ವಿವಿಧೆಡೆಯಲ್ಲಿ ಶುಚಿತ್ವಕ್ಕೆ ಒತ್ತು ಕೊಡಬೇಕು. ರಾಯಚೂರು ಜಿಲ್ಲಾ ಉತ್ಸವಕ್ಕೆ ಅತಿಥಿಗಳಾಗಿ ಆಮಿಸುವ ಜನತೆಗೆ ರಾಯಚೂರು ನಗರವು ಸುಂದರವಾಗಿ ಕಾಣುವಂತಾಗಬೇಕು. ಜನತೆಗೆ ಸ್ವಚ್ಛತೆಯ ಸಂದೇಶ ರವಾನೆಯಾಗಬೇಕು. ರಾಯಚೂರ ನಗರವನ್ನು ಸ್ವಚ್ಛ ನಗರವೆಂದು ಜನರು ಕೊಂಡಾಡುವಂತೆ ಮಾಡುವ ಜವಾಬ್ದಾರಿ ಪ್ರತಿಯೊಬ್ಬರ ಮೇಲಿದೆ ಎಂದು ಆಯುಕ್ತರು ಪೌರ ಕಾರ್ಮಿಕರಿಗೆ ಸ್ವಚ್ಛತೆಯ ಪಾಠ ಮಾಡಿದರು.

ರಾಯಚೂರು ಉತ್ಸವಕ್ಕೆ ಇನ್ನು ಒಂದು ವಾರ ಮಾತ್ರ ಬಾಕಿ ಇದೆ. ಈಗಾಗಲೇ ನಗರದಲ್ಲಿ ಕಸ ಸಂಗ್ರಹ ಸ್ಥಳಗಳಲ್ಲಿ ನಿತ್ಯ ಕಸ ವಿಲೇವಾರಿ ನಡೆಯುತ್ತಿದೆ. ನಿತ್ಯ ಮನೆ ಮನೆ ಕಸ ಸಂಗ್ರಹ, ಕಾರ್ಖಾನೆ, ಆಸ್ಪತ್ರೆ ಸೇರಿದಂತೆ ಎಲ್ಲಾ ಕಡೆಗಳಲ್ಲಿ ಕಸ ವಿಲೇವಾರಿ ನಡೆಯುತ್ತಿದೆ. ಬೇರೆ ಬೇರೆ ಕಡೆಗಳಲ್ಲಿ ಸ್ವಚ್ಛತೆ ಕಾಣಲಾರಂಭಿಸಿದೆ. ಈ ಕೆಲಸ ನಿರಂತರ ಮುಂದುವರೆಯಬೇಕು ಎಂದು ಸೂಚನೆ ನೀಡಿದರು.

ಉತ್ಸವಕ್ಕೂ ಮುಂಚಿತವಾಗಿ ಪ್ರತಿಯೊಬ್ಬರು ಸ್ವಚ್ಛತೆಯ ಕಡೆಗೆ ಮೊದಲ ಆದ್ಯತೆ ನೀಡಬೇಕು. ರಾಜ್ಯ, ಅಂತಾರಾಜ್ಯ, ಮಟ್ಟದ ಕಲಾವಿದರು ಮೊದಲ ಬಾರಿಗೆ ಜಿಲ್ಲೆಗೆ ಆಗಮಿಸಲಿದ್ದಾರೆ. ಅವರಿಗೆ ರಾಯಚೂರು ಸ್ವಚ್ಛ ನಗರವೆಂದು ತೋರಿಸಿಕೊಡಬೇಕಾಗಿದೆ.

ಪ್ರಮುಖವಾಗಿ ಮುಖ್ಯ ರಸ್ತೆಗಳು, ಮುಖ್ಯ ರಸ್ತೆಗಳಲ್ಲಿರುವ ರಾಜ ಕಾಲುವೆಗಳಿಂದ ದುರ್ವಾಸನೆ ಬೀರದಂತೆ ಬೀಚಿಂಗ್ ಪೌಡರ್ ಸಿಂಪಡಣೆ ಮಾಡಬೇಕು. ಯಾವುದೇ ಕಡೆಗಳಲ್ಲಿ ಕಸ ಕಾಣಿಸಬಾರದು. ಉತ್ಸವ ಕಾರ್ಯಕ್ರಮಗಳು ನಿಗದಿಯಾದ ಶ್ರೀ ಪಂಡಿತ ಸಿದ್ಧರಾಮ ಜಂಬಲದಿನ್ನಿ ಜಿಲ್ಲಾ ರಂಗಮಂದಿರ, ಜೈಲ್ ಖಾನ್ ಬಳಿಯ ಮಹಿಳಾ ಸಮಾಜ ಆವರಣ, ಕೃಷಿ ವಿಜ್ಞಾನ ವಿಶ್ವವಿದ್ಯಾಲಯ, ವಾಲ್‌ಕಟ್ ಮೈದಾನ, ಜಿಲ್ಲಾ ಕ್ರೀಡಾಂಗಣದ ಒಳಾಂಗಣ ಮತ್ತು ಹೊರಾಂಗಣದಲ್ಲಿ ಈಗಿನಿಂದಲೇ ಶುಚಿತ್ವ ಕಾರ್ಯ ನಡೆಯಬೇಕು. ಈ ಎಲ್ಲ ಕಡೆಗೆ ಸಹ ಪ್ರತಿ ದಿನ ಶುಚಿತ್ವ ಕಾರ್ಯವಾಗಬೇಕು ಎಂದು ಆಯುಕ್ತರು ಸೂಚನೆ ನೀಡಿದರು. ಬೇರೆ ಬೇರೆ ಕಡೆಗಳಲ್ಲಿ ಫಾಗಿಂಗ್ ಮಾಡಬೇಕು. ಎಲ್ಲೆಂದರಲ್ಲಿ ಕಸ ಎಸೆಯದಂತೆ ಜನರಲ್ಲಿ ಜಾಗೃತಿ ಮೂಡಿಸಬೇಕು ಎಂದರು.

ಮೈಸೂರು, ಮಂಗಳೂರು ಸೇರಿದಂತೆ ಕೆಲ ನಗರಗಳು ಸ್ವಚ್ಛತೆಗೆ ಹೆಸರುವಾಸಿಯಾಗಿದೆ. ಅವುಗಳ ಸಾಲಿನಲ್ಲಿ ರಾಯಚೂರು ಸಹ ಸೇರುವ ಹಾಗೆ ರಾಯಚೂರನ್ನು ಸ್ವಚ್ಛ ನಗರವೆಂದು ತೋರಿಸಿಕೊಡಲು ರಾಯಚೂರು ಉತ್ಸವ ಒಂದು ಅವಕಾಶವಾಗಿದ್ದು, ಇದನ್ನು ಸವಾಲಾಗಿ ಸ್ವೀಕರಿಸಿ ಕೆಲಸ ಮಾಡಬೇಕು. ಪ್ರತಿಯೊಬ್ಬರು ಸ್ವಚ್ಛತೆಯ ಕಾರ್ಯವನ್ನು ನಮ್ಮ ಮನೆಯ ಕೆಲಸವೆಂದು ಭಾವಿಸಿ ಜವಾಬ್ದಾರಿ ತೆಗೆದುಕೊಳ್ಳಬೇಕು. ಆಗ ಮಾತ್ರ ಸ್ವಚ್ಛ ನಗರ ಸಾಲಿನಲ್ಲಿ ನಮ್ಮ ಜಿಲ್ಲೆ ಗುರುತಿಸಲು ಸಾಧ್ಯವಾಗುತ್ತದೆ ಎಂದರು.

ಪೌರ ಕಾರ್ಮಿಕರ ಮೇಲೆ ಸರಿಯಾಗಿ ಮೇಲ್ವಿಚಾರಣೆ ಮಾಡಲು ಇದೆ ವೇಳೆ ಆಯುಕ್ತರು, ಪಾಲಿಕೆಯ ಪರಿಸರ ಅಭಿಯಂತರರು ಮತ್ತು ಪರಿಸರ ನಿರೀಕ್ಷರಿಗೆ ಸೂಚನೆ ನೀಡಿದರು.

ಇದೇ ಸಂದರ್ಭದಲ್ಲಿ ಪರಿಸರ ವಿಭಾಗದ ಅಭಿಯಂತರರಾದ ಜೈಪಾಲ್ ರೆಡ್ಡಿ, ಉಪ ಆಯುಕ್ತರಾದ ಮಲ್ಲಿಕಾರ್ಜುನ ಸೇರಿದಂತೆ ಪೌರ ಕಾರ್ಮಿಕರು, ಪಾಲಿಕೆಯ ವಿವಿಧ ಅಧಿಕಾರಿಗಳು ಇದ್ದರು.

# ಪೌತಿ ಖಾತೆ ಬದಲಾಯಿಸಿಕೊಳ್ಳಲು ತಹಸೀಲ್ದಾರ್ ಚನ್ನಮಲ್ಲಪ್ಪ ಘಂಟಿ ಮನವಿ.

• **ಮಲ್ಲಮ್ಮ ನುಡಿ ವಾರ್ತೆ ಗುರುಮಿಠಕಲ್.**



ಕುಟುಂಬದ ಸದಸ್ಯರು ಮರಣ ಹೊಂದಿ ಬಹಳ ವರ್ಷ ಕಳೆದರೂ ಸಹ ಕೆಲವರು ತಮ್ಮ ಹೆಸರಿಗೆ ಜಮೀನು ವರ್ಗಾವಣೆ ಮಾಡಿಕೊಂಡಿರುವುದಿಲ್ಲ ಅಂತಹ ವ್ಯಕ್ತಿಗಳು ನಿರ್ಲಕ್ಷ್ಯ ಮಾಡದೇ ತ್ವರಿತ ಗತಿಯಲ್ಲಿ ಜಮೀನು ವರ್ಗಾವಣೆ ಮಾಡಿಕೊಳ್ಳಲು ಗುರುಮಠಕಲ್ ತಾಲೂಕ ತಹಸೀಲ್ದಾರರಾದ ಮಲ್ಲಪ್ಪ ಘಂಟಿ ಮಂಗಳವಾರ ನಾಡ ಕಚೇರಿ ಕಾರ್ಯಾಲಯದಲ್ಲಿ ತಿಳಿಸಿದರು. ತಾಲೂಕಿನ ಎಲ್ಲಾ ಸ್ಥಳೀಯ ಮತ್ತು ಗ್ರಾಮ ಪಂಚಾಯಿತಿಗಳಲ್ಲಿ ಗ್ರಾಮಡಳಿತ ಅಧಿಕಾರಿಗಳಿಗೆ ಅಗತ್ಯ ದಾಖಲೆಗಳಾದ ಮೃತರ ಮರಣ ಪ್ರಮಾಣ ಪತ್ರ, ವಂಶವೃಕ್ಷ (ಅಥವಾ ಕುಟುಂಬದ ವಿವರಗಳ ನೋಟರಿ), ಆಧಾರ್ ಕಾರ್ಡ್, ಇತ್ತೀಚಿನ ಪಹಣಿ ಮತ್ತು ಹಕ್ಕು ಪತ್ರ, ರೇಷನ್ ಕಾರ್ಡ್ ಮತ್ತು ಮತದಾರರ ಗುರುತಿನ ಚೀಟಿ, ಭಾವಚಿತ್ರ ಸಲ್ಲಿಸಿ ಬದಲಾಯಿಸಿ ಕೊಳ್ಳಲು ತಿಳಿಸಿದರು. ತಾಲೂಕಿನ ಕೊಂಕಲ್ ನಾಡಕಚೇರಿಯಲ್ಲಿ ಅಭಿಲೇಖನಂ ಉನದಲ್ಲಿ ದಾಖಲೆಗಳು ಡಿಜಿಟಲೀಕರಣ ಮಾಡಿ ವಿತರಿಸಲಾಗುವುದು ಎಲ್ಲಾ ಸಾರ್ವಜನಿಕರು ಇದರ ಸದುಪಯೋಗ ಪಡೆಯಬೇಕು ಎಂದು ತಿಳಿಸಿದರು.

# ವಡಗೇರಾ ಗಣರಾಜ್ಯೋತ್ಸವ ಸಂಗೊಳ್ಳಿ ರಾಯಣ್ಣ ಹುತಾತ್ಮ ದಿನ ಆಚರಣೆ.

• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ:**



ವಡಗೇರಾ ಪಟ್ಟಣದ ಡಿ.ಡಿ ಯು.ಸಿ.ಬಿ.ಎಸ್ ಸಿ ಶಾಲೆಯಲ್ಲಿ ಹಮ್ಮಿಕೊಂಡಿದ್ದ 77ನೇ ಗಣರಾಜ್ಯೋತ್ಸವದ ಧ್ವಜಾರೋಹಣವನ್ನು ಶಾಲೆಯ ಪ್ರಾಂಶುಪಾಲ ಸಜೀಶ್ ರಾಜ್ ನೆರವೇರಿಸಿದರು. ಗಣರಾಜ್ಯೋತ್ಸವ ಹಾಗೂ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣರ ಹುತಾತ್ಮ ದಿನಾಚರಣೆ ಕುರಿತು ಶಿಕ್ಷಕ ನಿಂಗಪ್ಪ ಪೂಜಾರಿ ಹೈಯ್ಯಾಳ ಮಾತನಾಡಿ. ಗಣರಾಜ್ಯೋತ್ಸವವು ರಾಷ್ಟ್ರೀಯ ಹಬ್ಬಗಳಲ್ಲಿ ಇದು ಪ್ರಮುಖ ಹಬ್ಬವಾಗಿದ್ದು ಪ್ರಜಾಪ್ರಭುತ್ವದ ಅತ್ಯಂತ ಮಹತ್ವದ ದಿನ ಇದಾಗಿದೆ ಡಾ. ಬಿ.ಆರ್ ಅಂಬೇಡ್ಕರ್ ನಮಗೆ ಕೊಡುಗೆಯಾಗಿ ನೀಡಿದ ಸವಿಧಾನವು ಜಗತ್ತಿಗೆ ಮಾದರಿಯಾಗಿದೆ ಸವಿಧಾನದಿಂದಲೇ ನಮಗೆ ಎಲ್ಲಾ ರೀತಿಯ ಸೌಲಭ್ಯಗಳು ಸಿಕ್ಕಿವೆ ಪ್ರತಿಯೊಬ್ಬರು ಸಂವಿಧಾನವನ್ನು ಗೌರವಿಸಬೇಕಾಗಿದೆ ಸ್ವಾತಂತ್ರ ಹೋರಾಟಗಾರ ಸಂಗೊಳ್ಳಿ ರಾಯಣ್ಣರು ದೇಶಕ್ಕೆ ಸ್ವಾತಂತ್ರ್ಯ ಕೊಡಿಸುವಲ್ಲಿ ಹಗಲಿರುಳು ಎನ್ನದೆ ಶ್ರಮಿಸಿ ಜನವರಿ 26 ರಂದು ಹುತಾತ್ಮರಾಗಿದ್ದಾರೆ ವಿದ್ಯಾರ್ಥಿಗಳು ದೇಶ ಅಭಿಮಾನ ಬೆಳೆಸಿಕೊಳ್ಳಬೇಕು ಪ್ರತಿಯೊಬ್ಬರು ಮಹನೀಯರು ಹೋರಾಟಗಾರರ ಸ್ಮರಣೆಯನ್ನು ಮಾಡಬೇಕು ಎಂದು ಹೇಳಿದರು. ಧ್ವಜಾರೋಹಣದ ನಂತರ ಶಾಲಾ ಮಕ್ಕಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಭಾಷಣ ಸ್ಪರ್ಧೆ ಜರುಗಿದವು ಈ ಕಾರ್ಯಕ್ರಮದಲ್ಲಿ ದ್ವಿತೀಯ ದರ್ಜೆ ಸಹಾಯಕ ಯೋಗೇಶ್ ರೆಡ್ಡಿ ಮತ್ತು ಶಾಲಾ ಸಿಬ್ಬಂದಿ ವರ್ಗದವರು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಕೈಗಾರಿಕೆ ಉದ್ದಿಮೆದಾರರಿಗೆ ಒಂದು ದಿನದ ಅರಿವು ಮೂಡಿಸುವ ಕಾರ್ಯಕ್ರಮಕ್ಕೆ ಆಹ್ವಾನ

• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ.**

ಒಂದು ದಿನದ ಅರಿವು ಮೂಡಿಸುವ ಕಾರ್ಯಕ್ರಮಕ್ಕೆ ಆಹ್ವಾನಿಸಲಾಗಿದೆ ಎಂದು ಯಾದಗಿರಿ ಜಿಲ್ಲಾ ಕೈಗಾರಿಕಾ ಕೇಂದ್ರ ಜಂಟಿ ನಿರ್ದೇಶಕರು ಅವರು ತಿಳಿಸಿದ್ದಾರೆ. ಯಾದಗಿರಿ ಜಿಲ್ಲೆ ಸೈದಾಪೂರ ಜಿ.ಆರ್ ಪಾರ್ಕ್ ಹೋಟೆಲ್‌ದಲ್ಲಿ 2026ರ ಜನವರಿ 30 ರಂದು ಬೆಳಿಗ್ಗೆ 10.30 ಗಂಟೆಗೆ ಒಂದು ದಿನದ ಅರಿವು ಮೂಡಿಸಲು ಎಂ.ಎಸ್.ಎಂ.ಇಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸುವುದು ಮತ್ತು ವೇಗಗೊಳಿಸುವುದು (RAMP)ಯೋಜನೆಯಡಿಯಲ್ಲಿ ExportPromotionAnd Facilitationಕುರಿತು ಜರುಗುವ ಒಂದು ದಿನದ ಅರಿವು ಮೂಡಿಸುವ ಕಾರ್ಯಗಾರ ಏರ್ಪಡಿಸಲಾಗಿದೆ. ಪ್ರಯುಕ್ತ ಯಾದಗಿರಿ ಜಿಲ್ಲೆಯ ಎಲ್ಲಾ ಕೈಗಾರಿಕೆ ಉದ್ದಿಮೆದಾರರು ಭಾಗವಹಿಸಬೇಕು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪುರಸ್ಕೃತ ಹಿರೇಮಠ ರವರಿಗೆ ಸನ್ಮಾನ



• **ಮಲ್ಲಮ್ಮ ನುಡಿ ವಾರ್ತೆ,ಕೆಂಭಾವಿ:**

ಸಮೀಪದ ಮುದನೂರು ಸರಕಾರಿ ಪ್ರೌಢ ಶಾಲೆಯ ಕನ್ನಡ ಭಾಷಾ ಶಿಕ್ಷಕ ಶರಣಬಸಯ್ಯ ಎಂ ಹಿರೇಮಠ ರವರಿಗೆ ವಿಜಯನಗರ ಜಿಲ್ಲೆ ಇಂದಿರ ಚಾರಿಟೇಬಲ್ ಮತ್ತು ಶಿಕ್ಷಣ ಟ್ರಸ್ಟ್ ಕೊಟ್ಟೂರು ಸಂಚಾಲಿತ ಇಂದು ಪದವಿ ಪೂರ್ವ ಮಹಾವಿದ್ಯಾಲಯದಿಂದ 2026 ನೇ ಸಾಲಿನ ಸಾಹಿತ್ಯರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು.2025–26ನೇ ಸಾಲಿನಲ್ಲಿ ಸೇವೆಯನ್ನು ಪರಿಗಣಿಸಿ ಈ ಪುರಸ್ಕಾರ ಲಭಿಸಿದ ಹಿನ್ನೆಲೆಯಲ್ಲಿ ಸ್ಥಳಿಯ ಮುದನೂರಿನ ಗಣ್ಯರು ಹಾಗೂ ಪ್ರೌಢ ಶಾಲೆಯ ಸಿಬ್ಬಂದಿ ಜ. 26 ರಂದು ಗಣರಾಜ್ಯೋತ್ಸವ ಸಂದರ್ಭದಲ್ಲಿ ಶಿಕ್ಷಕ ಶರಣಬಸಯ್ಯ ಹಿರೇಮಠ ರವರಿಗೆ ಸನ್ಮಾನಿಸಿ ಅಭಿನಂದಿಸಿದರು.

# ವಿಭಾಗ ಮಟ್ಟದ ಕ್ರೀಡಾ ವಸತಿ ನಿಲಯಗಳ ಆಯ್ಕೆಗೆ ಅರ್ಜಿ ಆಹ್ವಾನ.

• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ.**

2026ರ ಜನವರಿ 30 ರಿಂದ 31 ರಂದು ಬಳ್ಳಾರಿಯ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯುವ ವಿಭಾಗ ಮಟ್ಟದ ಕ್ರೀಡಾ ವಸತಿ ನಿಲಯಗಳಿಗೆ ಆಯ್ಕೆ ಪ್ರಕ್ರಿಯೆಯಲ್ಲಿ ಯಾದಗಿರಿ ಜಿಲ್ಲೆಯ ಆಸಕ್ತ ಕಿರಿಯ ಹಾಗೂ ಹಿರಿಯ ಕ್ರೀಡಾಪಟುಗಳು ಭಾಗವಹಿಸಲು ಅರ್ಜಿ ಆಹ್ವಾನಿಸಲಾಗಿದೆ ಎಂದು ಯಾದಗಿರಿ ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರು ಶ್ರೀ ರಾಜುಬಾವಿಹಳ್ಳಿ ಅವರು ತಿಳಿಸಿದ್ದಾರೆ. ಬಳ್ಳಾರಿಯ ಜಿಲ್ಲಾ ಕ್ರೀಡಾಂಗಣದಲ್ಲಿ 2026–27ನೇ ಸಾಲಿಗೆ ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಜಿಲ್ಲಾ ಮತ್ತು ರಾಜ್ಯ ಕ್ರೀಡಾ ಶಾಲೆ, ವಸತಿ ನಿಲಯಗಳಿಗೆ ಅಥ್ಲೆಟಿಕ್ಸ್, ಹಾಕಿ, ಬಾಸ್ಕೆಟ್‌ಬಾಲ್, ವಾಲಿಬಾಲ್, ಕುಸ್ತಿ, ಫುಟ್‌ಬಾಲ್, ಜೂಡೋ, ಜಿಮ್ನಾಸ್ಟಿಕ್ಸ್, ಕ್ರೀಡೆಗಳಲ್ಲಿ ಕಿರಿಯರ ವಿಭಾಗದ ಆಯ್ಕೆ ಪ್ರಕ್ರಿಯೆ ಭಾಗವಹಿಸುವ ಕ್ರೀಡಾಪಟುಗಳ ಅರ್ಹತೆ ಈ ಕೆಳಕಂಡಂತಿರಬೇಕು. ಪ್ರಸ್ತುತ 7ನೇ ತರಗತಿಯಲ್ಲಿ ಓದುತ್ತಿರುವ ಬಾಲಕ, ಬಾಲಕಿಯರಿಗೆ. 2026 ಜೂನ್ 1 ರಂದು 14 ವರ್ಷ ಒಳಗಿರಬೇಕು. 01–06–2012ರ ನಂತರ ಜನಿಸಿರಬೇಕು. ಹಿರಿಯರ ವಿಭಾಗ ಆಯ್ಕೆಯಲ್ಲಿ ಭಾಗವಹಿಸುವ ಬಾಲಕ, ಬಾಲಕಿಯರ ಅರ್ಹತೆಗಳು ಪ್ರಸ್ತುತ 10ನೇ ತರಗತಿ ವ್ಯಾಸಂಗ ಮಾಡುತ್ತಿರಬೇಕು. 2026 ಜೂನ್ 1 ರಂದು 18 ವರ್ಷ ಒಳಗಿರಬೇಕು, 01–06–2008ರ ನಂತರ ಜನಿಸಿರಬೇಕು. ಆಯ್ಕೆ ಪ್ರಕ್ರಿಯೆ ನಡೆಯುವ ಸ್ಥಳ ಜಿಲ್ಲಾ ಕ್ರೀಡಾಂಗಣ, ರಂಗಮಂದಿರ ರಸ್ತೆ, ವಾಲ್ಮೀಕಿ ಭವನ ಹತ್ತಿರ, ನಲ್ಲಚೆರವು, ಬಳ್ಳಾರಿ. ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕ್ರೀಡಾಪಟುಗಳಿಗೆ ಯಾವುದೇ ರೀತಿಯ ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆಯನ್ನು ನೀಲಾಗುವುದಿಲ್ಲ. ಈ ಕ್ರೀಡಾ ವಸತಿ ನಿಲಯ ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸುವ ಆಸಕ್ತ ಕ್ರೀಡಾಪಟುಗಳು ಸದರಿ ಕ್ರೀಡಾ ವಸತಿ ನಿಲಯ ಆಯ್ಕೆ ಪ್ರಕ್ರಿಯೆಯ ಅರ್ಜಿ ನಮೂನೆಗಳನ್ನು ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ ಯಾದಗಿರಿ ಇಲ್ಲಿ ಪಡೆಯಬೇಕು. ಹೆಚ್ಚಿನ ಮಾಹಿತಿಗಾಗಿ ಯಾದಗಿರಿ ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ ಅಥ್ಲೆಟಿಕ್ ತರಬೇತುದಾರರು ಮಂಜುನಾಥ ಮೊ.ನಂ.9535318271. ಯಾದಗಿರಿ ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ ವಾಲಿಬಾಲ್ ತರಬೇತುದಾರರು ಪ್ರಕಾಶ 9886675263. ಯಾದಗಿರಿ ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ ಮೇಂಟೆನರ್ ದೊಡ್ಡಪ್ಪ 6362400143ಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರಾಯಚೂರು ಉತ್ಸವದ ಕಾರ್ಯಕ್ಕೆ ನಾವೂ ಕೈ ಜೋಡಿಸುತ್ತೇವೆ



• **ಮಲ್ಲಮ್ಮ ನುಡಿ ವಾರ್ತೆ ರಾಯಚೂರು:**

ರಾಯಚೂರು ಜಿಲ್ಲಾ ಉತ್ಸವದ ನೂತನ ವಿವಿಧ ಸಮಿತಿಗಳ ಅಧ್ಯಕ್ಷರು, ಸದಸ್ಯ ಕಾರ್ಯದರ್ಶಿಗಳು ಮತ್ತು ಸದಸ್ಯರ ಹಾಗೂ ಸಮನ್ವಯ ಅಧಿಕಾರಿಗಳ ಸಭೆಯು ಜಿಲ್ಲಾಧಿಕಾರಿಗಳಾದ ನಿತೀಶ್ ಕೆ ಅವರ ಅಧ್ಯಕ್ಷತೆಯಲ್ಲಿ ನೂತನ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜನವರಿ 28ರಂದು ನಡೆಯಿತು.

ಈ ಸಭೆಯಲ್ಲಿ ಭಾಗಿಯಾಗಿದ್ದ ಹಿರಿಯ ರೈತ ಮುಖಂಡರಾದ ಚಾಮರಸ ಪಾಟೀಲ, ಕರ್ನಾಟಕ ಸಂಘದ ಅಧ್ಯಕ್ಷರಾದ ಕೆ.ಶಾಂತಪ್ಪ, ಹೋರಾಟಗಾರರಾದ ಬಸವರಾಜ ಕಳಸ ಸೇರಿದಂತೆ ಇನ್ನೀತರರು ಮಾತನಾಡಿ, ರಾಯಚೂರು ಜಿಲ್ಲಾ ಉತ್ಸವದ ಮೊದಲನೇ ಸಾರ್ವಜನಿಕ ಸಭೆಯಲ್ಲಿ ಕೇಳಿ ಬಂದ ಬಲವಾದ ಅಭಿಪ್ರಾಯದಂತೆ ಜಿಲ್ಲಾಡಳಿತವು ಜಿಲ್ಲೆಯ ವಿವಿಧ ಸಂಘ ಸಂಸ್ಥೆಗಳ ಪ್ರತಿನಿಧಿಗಳು, ಗಣ್ಯರು ಮತ್ತು ಇನ್ನೀತರ ಮಹನಿಯರ ಒಳಗೊಂಡು ಹೊಸ ಸಮಿತಿಗಳನ್ನು ರಚಿಸಿದ್ದು ಅತ್ಯಂತ ಸ್ವಾಗತಾರ್ಹ ಕ್ರಮವಾಗಿದೆ. ಈ ಸಮಿತಿಯ ಸದಸ್ಯರಾದ ನಾವು ಉತ್ಸವದ ಕಾರ್ಯದಲ್ಲಿ ಭಾಗಿಯಾಗುತ್ತೇವೆ. ಈ ಸಮಿತಿಗಳಲ್ಲಿನ ಅಧಿಕಾರಿಗಳು ನಮ್ಮೆಲ್ಲರನ್ನು ವಿಶ್ವಾಸಕ್ಕೆ ಪಡೆದು ಕಾರ್ಯನಿರ್ವಹಿಸಬೇಕು ಎಂದು ಅಭಿಪ್ರಾಯಪಟ್ಟರು.

ಸಭೆಯಲ್ಲಿ ಮೊದಲಿಗೆ ವಿವಿಧ ಸಮಿತಿಗಳಲ್ಲಿ ಸದಸ್ಯರು ಉತ್ಸವದ ಕುರಿತು ನಾನಾ ಸಲಹೆ ನೀಡಿದರು. ರಾಯಚೂರು ಉತ್ಸವದ ನಿಮಿತ್ತ ಜಿಲ್ಲಾಡಳಿತವು ಜ್ಯೋತಿ ರಥಯಾತ್ರೆ ಕಾರ್ಯಕ್ರಮ ಹಮ್ಮಿಕೊಂಡಿದ್ದು ಉತ್ತಮ ಪ್ರಯತ್ನವಾಗಿದೆ. ಈ ಕಾರ್ಯಕ್ರಮದಲ್ಲಿ ಶಾಲಾ ಕಾಲೇಜಿನ ವಿದ್ಯಾರ್ಥಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಸೇರಿಸಬೇಕು ಎಂದು ಕರ್ನಾಟಕ ಸಂಘದ ಕೆ.ಶಾಂತಪ್ಪ ಅವರು ಸಲಹೆ ಮಾಡಿದರು.

ಉತ್ಸವದಲ್ಲಿ ಪ್ಲಾಸ್ಟಿಕ್ ಬಳಕೆ ಮಾಡಬಾರದು ಎಂದು ರೈತ ಸಂಘದ ಮುಖಂಡರದ ಅನಿತಾ ಅವರು ಸಲಹೆ ಮಾಡಿದರು. ರಸ್ತೆಗಳಲ್ಲಿ ಅಳವಡಿಸಿದ ಅಲಂಕೃತ ಬಟ್ಟೆಯನ್ನು ಸರಿಪಡಿಸಬೇಕು ಎಂದು ಕನ್ನಡಪರ ಸಂಘಟನೆಯ ಅಶೋಕ ಜೈನ್ ಅವರು ತಿಳಿಸಿದರು.

ಉತ್ಸವಕ್ಕೆ ವಿವಿಧ ಸಂಘ–ಸಂಸ್ಥೆಗಳ ಪ್ರತಿನಿಧಿಗಳ ಸಹಕಾರ ಪಡೆದುಕೊಳ್ಳಲು ಹೊಸ ಸಮಿತಿಗಳನ್ನು ರಚಿಸಿದ್ದು ಅತ್ಯಂತ ಸ್ವಾಗತಾರ್ಹ ಕ್ರಮವಾಗಿದೆ. ಈ ಸಮಿತಿಗಳಲ್ಲಿನ ಅಧಿಕಾರಿಗಳು ನಮಗೆ ಸಂಪರ್ಕಿಸಿ ಆಯಾ ಸಮಿತಿಗಳ ಹಂತದಲ್ಲಿ ಮೇಲಿಂದ ಮೇಲೆ ಸಭೆಗಳು ನಡೆದು ಕೆಲಸ ಹಂಚಿಕೆ ಕಾರ್ಯವಾಗಬೇಕು ಎಂದು ಮತಮಾರಿ ಗ್ರಾಮ ಪಂಚಾಯತ್ ಉಪಾಧ್ಯಕ್ಷರಾದ ಹುಸೇನ್ ಅವರು ಸಲಹೆ ಮಾಡಿದರು.

ಉತ್ಸವದಲ್ಲಿ ಬಹಳಷ್ಟು ಜನರು ಸೇರಲಿದ್ದು ಸಾಮಾನ್ಯ ಜನರು ಸಹ ಖರೀದಿಸಿ ಉಪಹಾರ ಊಟ ಮಾಡಲು ಅನುಕೂಲವಾಗುವಂತೆ ಕಡಿಮೆ ದರವನ್ನು ನಿಗದಿಪಡಿಸಬೇಕು ಎಂದು ಮುಖಂಡರಾದ ವಸಂತಕುಮಾರ ಅವರು ಸಭೆಗೆ ಸಲಹೆ ಮಾಡಿದರು.

ಜಿಲ್ಲೆಯ ಎಲ್ಲ ಜನಪ್ರತಿನಿಧಿಗಳ ಬ್ಯಾನರ್ ಸಹ ಉತ್ಸವದಲ್ಲಿ ಅಳವಡಿಸಿ ಜನತೆಗೆ ಸ್ವಾಗತ ಕೋರಲು ಅನುವು ಮಾಡಿಕೊಡಬೇಕು ಎಂದು ರವಿ ಜಲ್ದಾರ ಅವರು ತಿಳಿಸಿದರು.

ಉತ್ಸವದಲ್ಲಿ ಭಾಗಿಯಾಗುವ ಜನತೆಗೆ ಆರೋಗ್ಯದಲ್ಲಿ ಏನಾದರು ಏರುಪೇರುಗಳಾದಲ್ಲಿ ಕೂಡಲೇ ಚಿಕಿತ್ಸೆ ಸಿಗುವ ಹಾಗೆ ಉತ್ಸವದ ವಿವಿಧ ಸ್ಥಳದಲ್ಲಿ ತಾತ್ಕಾಲಿಕ ಚಿಕಿತ್ಸಾ ಕೇಂದ್ರಗಳನ್ನು ತೆರೆಯಬೇಕು ಎಂದು ಶಶಿಕಲಾ ಭೀಮರಾಯ ಅವರು ಸಲಹೆ ಮಾಡಿದರು.

ಗ್ರಾಮೀಣ ಭಾಗದಲ್ಲಿನ ಜನತೆಗೂ ಉತ್ಸವದ ಮಾಹಿತಿ ದೊರಕಬೇಕು. ಈ ನಿಟ್ಟಿನಲ್ಲಿ ಜಿಲ್ಲೆಯ ಎಲ್ಲ ಗ್ರಾಮಗಳ ಬಸ್ ನಿಲ್ದಾಣ ಸೇರಿದಂತೆ ಪ್ರಮುಖ ಸ್ಥಳಗಳಲ್ಲಿ ಉತ್ಸವದ ಬ್ಯಾನರ್ ಅಳವಡಿಸಿ ಪ್ರಚಾರ ನಡೆಸಬೇಕು ಎಂದು ಶ್ರೀದೇವಿ ನಾಯಕ ಅವರು ಸಲಹೆ ಮಾಡಿದರು.

ಜಿಲ್ಲಾಧಿಕಾರಿಗಳಾದ ನಿತೀಶ್ ಕೆ. ಅವರು ಮಾತನಾಡಿ, ರಾಯಚೂರು ಜಿಲ್ಲಾ ಉತ್ಸವಕ್ಕೆ ಜಿಲ್ಲೆಯ ಎಲ್ಲ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಹಾಗೂ ಇನ್ನೀತರರು ಕೈಜೋಡಿಸಿ ಸಹಕಾರ ನೀಡಬೇಕು. ಉತ್ಸವದ ಸಿದ್ಧತೆಯು ಈಗಾಗಲೇ ಶೇ.80ರಷ್ಟು ಪೂರ್ಣವಾಗಿದೆ. ಸಾರ್ವಜನಿಕರೊಂದಿಗೆ ನಡೆಸಿದ ಮೊದಲನೇ ಸಭೆಯಲ್ಲಿ ಕೇಳಿ ಬಂದ ಎಲ್ಲ ಸಲಹೆಗಳನ್ನು ನಾವು ಪರಿಗಣಿಸಿ ಕಾರ್ಯಗತ ಮಾಡಿದ್ದೇವೆ. ಈಗ ಉತ್ಸವಕ್ಕೆ ವಾರದ ಸಮಯವಷ್ಟೇ ಉಳಿದಿದೆ. ಸಂಘ ಸಂಸ್ಥೆಗಳ ಪ್ರತಿನಿಧಿಗಳು, ನಾಗರಿಕರು, ಗಣ್ಯರು, ಬುದ್ಧಿ ಜೀವಿಗಳು, ಸಾಹಿತಿಗಳು, ಕಲಾವಿದರು ಮತ್ತು ಇನ್ನೀತರ ಬೇರೆ ಬೇರೆ ವರ್ಗದವನ್ನು ಉತ್ಸವದ ವಿವಿಧ ಸಮಿತಿಗೆ ಸೇರಿಸಿದ್ದೇವೆ. ಆಯಾ ಸಮಿತಿಗಳಲ್ಲಿನ ಅಧ್ಯಕ್ಷರು ಮತ್ತು ಸದಸ್ಯ ಕಾರ್ಯದರ್ಶಿಗಳು ಹಾಗೂ ಸಮನ್ವಯ ಅಧಿಕಾರಿಗಳು ತಮ್ಮ ಹಂತದಲ್ಲಿ ಸಭೆ ಕರೆದು ಚರ್ಚಿಸಿ ಉತ್ಸವದ ಬೇರೆ ಬೇರೆ ಕಾರ್ಯಗಳ ಹಂಚಿಕೆ ಮಾಡಿಕೊಂಡು ಉತ್ಸವದ ಯಶಸ್ವಿಗೆ ಸಹಕಾರ ನೀಡಬೇಕು ಎಂದು ಕೋರಿದರು.

ಜನರ ಸುರಕ್ಷತೆಗಾಗಿ ಕ್ರಮ: ಉತ್ಸವದಲ್ಲಿ ಯಾವುದೇ ರೀತಿಯಲ್ಲಿ ಕಳ್ಳತನಗಳು ಆಗದಂತೆ ಮತ್ತು ಅವಘಡಗಳು ನಡೆಯದಂತೆ ನೋಡಿಕೊಳ್ಳಲು ಮುಂಜಾಗ್ರತಾ ಕ್ರಮವಾಗಿ ನಗರದ ಪ್ರಮುಖ ಸ್ಥಳಗಳಲ್ಲಿ ಸಿಸಿಟಿವಿ ಅಳವಡಿಕೆ ಕಾರ್ಯ ನಡೆದಿದೆ ಎಂದು ರಾಯಚೂರು ಡಿವೈಎಸ್ಪಿ ಶಾಂತಮೂರ್ತಿ ಅವರು ಸಭೆಗೆ ಮಾಹಿತಿ ನೀಡಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ, ಲಿಂಗಸುಗೂರು ಸಹಾಯಕ ಆಯುಕ್ತರಾದ ಬಸವಣೆಪ್ಪ ಕಲಶೆಟ್ಟಿ, ರಾಯಚೂರು ಮಹಾನಗರ ಪಾಲಿಕೆಯ ಉಪ ಆಯುಕ್ತರಾದ ಸಂತೋಷ ರಾಣಿ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು, ವಿವಿಧ ಸಂಘ–ಸಂಸ್ಥೆಗಳ ಮುಖಂಡರು ಇದ್ದರು.

## ಆರ್‌ಟಿಪಿಎಸ್ ಕೆಪಿಸಿ ಡಿಎವಿ, ಬ್ಲೆಸ್ಡ್ ಆಲ್ಫೋನ್ಸಾ ಪ್ರೌಢಶಾಲೆಗಳಲ್ಲಿ ಪ್ರಚಾರ

• **ಮಲ್ಲಮ್ಮ ನುಡಿ ವಾರ್ತೆ ರಾಯಚೂರು:**

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳ ಸಹಯೋಗದಲ್ಲಿ ಫೆ.5ರಿಂದ ಮೂರು ದಿನಗಳ ಕಾಲ ರಾಯಚೂರು ಜಿಲ್ಲೆಯಲ್ಲಿ ನಿಗದಿಯಾದ ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವದ ಪ್ರಚಾರ ಕಾರ್ಯಕ್ರಮಗಳು ಜನವರಿ 28ರಂದು ಶಕ್ತಿನಗರದಲ್ಲಿನ ಆರ್‌ಟಿಪಿಎಸ್‌ನಲ್ಲಿ ಹಾಗೂ ಕೆಪಿಸಿ ಡಿಎವಿ ಪ್ರೌಢಶಾಲೆ ಮತ್ತು ಬ್ಲೆಸ್ಡ್ ಆಲ್ಫೋನ್ಸಾ ಪ್ರೌಢಶಾಲೆಗಳಲ್ಲಿ ನಡೆದವು.

ಪ್ರಚಾರ ಸಮಿತಿಯ ಸದಸ್ಯರು ಹಾಗೂ ಜಿಲ್ಲಾ ಕೌಶಲ್ಯಾಭಿವೃದ್ಧಿ ಇಲಾಖೆಯ ಅಧಿಕಾರಿ ಸದಾಶಿವಪ್ಪ ಅವರು ಮಾತನಾಡಿ,

ರಾಯಚೂರು ಜಿಲ್ಲೆಯಲ್ಲಿ ಬಹುವರ್ಷಗಳ ನಂತರ ಜಿಲ್ಲಾ ಉತ್ಸವ ನಿಗದಿಯಾಗಿದೆ. ಇದು ನಮ್ಮೆಲ್ಲರ ಮನೆಯ ಹಬ್ಬವಾಗಿದೆ. ನಮ್ಮೂರಿನ ವಿವಿಧ ಕಲೆ ಸಾಹಿತ್ಯ ಪ್ರಕಾರಗಳ ಅನಾವರಣವು ಇಲ್ಲಿ ನಡೆಯಲಿದೆ. ಖ್ಯಾತ ಕಲಾವಿದರು ಕಾರ್ಯಕ್ರಮಕ್ಕೆ ಆಗಮಿಸಲಿದ್ದಾರೆ. ಎಲ್ಲರೂ ಸೇರಿ ಕಾರ್ಯಕ್ರಮದಲ್ಲಿ ಭಾಗಿಯಾಗಿ, ಉತ್ಸವ ಯಶಗೊಳಿಸೋಣ ಎಂದು ಇದೆ ವೇಳೆ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಅರಣ್ಯ ಇಲಾಖೆಯ ನಾಗರಾಜ, ಗ್ರಂಥಾಲಯ ಇಲಾಖೆಯ ಮರೆಪ್ಪ ಸೇರಿದಂತೆ ಪ್ರಚಾರ ಸಮಿತಿಯ ಇನ್ನೀತರ ಸದಸ್ಯರು ಇದ್ದರು.

## ವಾರ್ತಾ ಇಲಾಖೆಯ ಮಾಹಿತಿ ಪ್ರದರ್ಶನ ಮಳಿಗೆಗೆ ಚಾಲನೆ



• **ಮಲ್ಲಮ್ಮ ನುಡಿ ವಾರ್ತೆ ರಾಯಚೂರು:**

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗಾಗಿ ರಾಜ್ಯ ಸರ್ಕಾರ ರೂಪಿಸಿರುವ ಕಾರ್ಯಕ್ರಮಗಳ ಕುರಿತು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ರೂಪಿಸಿರುವ ಮಾಹಿತಿ ಪ್ರದರ್ಶನ ಮಳಿಗೆಗೆ ರಾಯಚೂರು ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಪಾಮಯ್ಯ ಮುರಾರಿ ಅವರು ಚಾಲನೆ ನೀಡಿದರು.

ಲಿಂಗಸೂರು ಕೇಂದ್ರ ಬಸ್ ನಿಲ್ದಾಣದಲ್ಲಿ ಜನವರಿ 28ರಂದು ನಡೆದ ಕಾರ್ಯಕ್ರಮದಲ್ಲಿ ರಿಬ್ಬನ್ ಕತ್ತರಿಸುವ ಮೂಲಕ ಮಳಿಗೆಯನ್ನು ಉದ್ಘಾಟಿಸಿದರು. ಇದೆ ವೇಳೆ, ಸಾಂಪ್ರದಾಯಿಕ ಮಾದರಿಯಲ್ಲಿ ಸಿದ್ಧಪಡಿಸಿದ್ದ ದೀಪ ಪ್ರಜ್ವಲನೆ ಕಾರ್ಯಕ್ರಮದಲ್ಲಿ ದೀಪ ಬೆಳಗಿಸಿ ಮಾತನಾಡಿದ ಪಾಮಯ್ಯ ಮುರಾರಿ ಅವರು, ಶಕ್ತಿ, ಅನ್ನಭಾಗ್ಯ, ಗೃಹಲಕ್ಷ್ಮಿ , ಗೃಹಜ್ಯೋತಿ, ಯುವನಿಧಿ ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಜೊತೆಗೆ ರಾಜ್ಯ ಸರ್ಕಾರವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನರ ಕಲ್ಯಾಣಕ್ಕಾಗಿ ಅನೇಕ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನ ಮಾಡುತ್ತಿದೆ. ಎಸ್ಸಿಪಿ ಟಿಎಸ್ಪಿ ಪ್ರತಿಭಾವಂತರಿಗೆ ಪ್ರೋತ್ಸಾಹ ಧನ, ಲೀಡ್ಕರ್ ಅನುಷ್ಠಾನ ಕಾರ್ಯಕ್ರಮ, ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ, ವಿವಿಧ ನಿಗಮಗಳ ಅನುಷ್ಠಾನ ಸೇರಿದಂತೆ ನಾನಾ ಕಾರ್ಯಕ್ರಮಗಳನ್ನು ರಾಜ್ಯ ಸರ್ಕಾರವು ಅಚ್ಚುಕಟ್ಟಾಗಿ ಜಾರಿ ಮಾಡುತ್ತಿದೆ ಎಂದು ತಿಳಿಸಿದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಗವಿಸಿದ್ದಪ್ಪ ಹೊಸಮನಿ ಅವರು ಪ್ರಾಸ್ತಾವಿಕ ಮಾತನಾಡಿ, ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ 2025ರ ಆಗಸ್ಟ್ 16ರಂದು ನಡೆದ ಅನುಸೂಚಿತ ಜಾತಿ ಅನುಸೂಚಿತ ಪಂಗಡಗಳ ರಾಜ್ಯ ಅಭಿವೃದ್ಧಿ ಪರಿಷತ್ ಸಭೆಯಲ್ಲಿ ಅನುಮೋದಿಸಿದಂತೆ, 2025–26ನೇ ಸಾಲಿನ ಎಸ್ಸಿಪಿ ಟಿಎಸ್ಪಿ ಕ್ರಿಯಾಯೋಜನೆಯಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಜನರಿಗಾಗಿ ಸರ್ಕಾರ ರೂಪಿಸಿರುವ ಕಾರ್ಯಕ್ರಮಗಳ ಕುರಿತಂತೆ ರಾಜ್ಯದ ವಿವಿಧೆಡೆಯ ಆಯ್ದ ಬಸ್ ನಿಲ್ದಾಣಗಳಲ್ಲಿ ನಡೆದಂತೆ ಲಿಂಗಸೂರು ಬಸ್ ನಿಲ್ದಾಣದಲ್ಲಿ ಸಹ ಪ್ರಚಾರ ಕಾರ್ಯ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಜನವರಿ 30ರವರೆಗೆ ಪ್ರಚಾರ: ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ರೂಪಿಸಿರುವ ಮಾಹಿತಿ ಪ್ರದರ್ಶನ ಮಳಿಗೆಯು ಲಿಂಗಸೂರು ನಗರದ ಕೇಂದ್ರ ಬಸ್ ನಿಲ್ದಾಣದಲ್ಲಿ ಜನವರಿ 28 ರಿಂದ ಜನವರಿ 30ರವರೆಗೆ ಇರುತ್ತದೆ. ಸಾರ್ವಜನಿಕರು ಜನಾಕರ್ಷಣೀಯ ಈ ಮಳಿಗೆಗೆ ಭೇಟಿ ನೀಡಿ ವಿವಿಧ ಗ್ಯಾರಂಟಿ ಯೋಜನೆಗಳು ಮತ್ತು ಎಸ್ಸಿಪಿ ಹಾಗೂ ಟಿಎಸ್ಪಿ ಯೋಜನೆಗಳ ಅನುಷ್ಠಾನದ ಯಶೋಗಾಥೆಯ ಚಿತ್ರಣವನ್ನು ವೀಕ್ಷಣೆ ಮಾಡಬಹುದಾಗಿದೆ ಎಂದು ಇದೆ ವೇಳೆ ಗವಿಸಿದ್ದಪ್ಪ ಅವರು ಲಿಂಗಸೂರು ತಾಲೂಕಿನ ಜನತೆಯಲ್ಲಿ ಮನವಿ ಮಾಡಿದರು.

ಫೆ.1ರಿಂದ ದೇವದುರ್ಗದಲ್ಲಿ: ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ರೂಪಿಸಿರುವ ಈ ಮಾಹಿತಿ ಪ್ರದರ್ಶನ ಮಳಿಗೆಯು ಫೆ.1ರಿಂದ ಫೆ.3ರವರೆಗೆ ದೇವದುರ್ಗ ಪಟ್ಟಣದ ಕೇಂದ್ರ ಬಸ್ ನಿಲ್ದಾಣದಲ್ಲಿ ಅಳವಡಿಸಲಾಗುವುದು ಎಂದು ಗವಿಸಿದ್ದಪ್ಪ ಅವರು ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಭೂಪನಗೌಡ ಕರಡಕಲ್, ಟಿಎಪಿಸಿಎಂಎಸ್‌ನ ಅಧ್ಯಕ್ಷರಾದ ಶಶಿಧರ ಪಾಟೀಲ, ಲಿಂಗಸೂರ ಕೇಂದ್ರ ಬಸ್ ನಿಲ್ದಾಣದ ಸಂಚಾರಿ ನಿಯಂತ್ರಕರಾದ ಸಂಗಪ್ಪ, ಸಾರಿಗೆ ನಿಯಂತ್ರಕರಾದ ಮೆಹಬೂಬಿ, ಬಸವಂತಪ್ಪ, ಅಮರಪ್ಪ, ಬಸಣ್ಣ ಸೇರಿದಂತೆ ಸಾರ್ವಜನಿಕರು, ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ಮತ್ತು ಇತರರು ಇದ್ದರು.

## ಸಂಭ್ರಮದಿಂದ ಜರುಗಿದ ಮಲ್ಲಮ್ಮ ದೇವಿ ಪ್ರತಿಷ್ಠಾಪನಾ ಕಾರ್ಯಕ್ರಮ

• **ಮಲ್ಲಮ್ಮ ನುಡಿ ವಾರ್ತೆ ಕಲಘಟಗಿ:**

ತಾಲೂಕಿನ ಮಡಕಿಹೊನ್ನಳ್ಳಿ ಗ್ರಾಮದಲ್ಲಿ ಬಹಳ ದಿವಸದ ಭಕ್ತದ ಇಚೆ–ಚ್ಚಯಂತೆ ನೂತನವಾಗಿ ನಿರ್ಮಿಸಿಲಾದ ದೇವಸ್ಥಾನದಲ್ಲಿ ಹೆಮರೆಡ್ಡಿಮಲ್ಲಮ್ಮ ದೇವಿ ಮೂರ್ತಿ ಪ್ರತಿಷ್ಠಾಪನಾ ಕಾರ್ಯಕ್ರಮವನ್ನು ಹನ್ನೆರಡು ಮಠ ಷ.ಬ್ರ ರೇವಣಸಿದ್ದೇಶ್ವರ ಶಿವಾಚಾರ್ಯ ಸ್ವಾಮಿಗಳು ಹಾಗೂ ಅಮ್ಮಿನಬಾವಿ ಸಂಸ್ಥಾನ ಪಂಚಗೃಹ ಹಿರೇಮಠ ಷ.ಬ್ರ ಅಭಿನವ ಶಾಂತಲಿಂಗ ಸ್ವಾಮಿಗಳು ನೆರವೇರಿಸಿದರು.

ಬೆಳಿಗ್ಗೆ ವೈದಿಕರಾದ ವೆ.ಮೂ ನಿಂಗಯ್ಯ ಹಿರೇಮಠ ಹಾಗೂ ವೆ.ಮೂ ವಿಶ್ವೇಶ್ವರಯ್ಯ ಹಿರೇಮಠ ಇವರಿಂದ ವಾಸ್ತು ಶಾಂತಿ, ನವಗೃಹ ಹೋಮ ಹವನ ಕಾರ್ಯಕ್ರಮಗಳು ಮೂರ್ತಿ ಅಲಂಕಾರ ಸೇವೆಗಳು, ಸುಮಂಗಲಿಯರಿಂದ ಪೂರ್ಣಕುಂಬ, ಕಳಸಾರೋಹಣ ,ಧರ್ಮಸಭೆ ಜರುಗಿದವು.

ಭಕ್ತರಿಗೆ ಮಹಾ ಪ್ರಸಾದ ಸೇವೆ ಆಯೋಜಿಸಲಾಗಿತ್ತು

ಇ ಸಂಧರ್ಬದಲ್ಲಿ ಶ್ರೀಧರ ಪಾಟೀಲಕುಲಕರ್ಣೀ ,ಮಲ್ಲೇಶಪ್ಪ ಜಾವೂರ,ಸಂಗಪ್ಪ ಮುಡೆಕ್ಕನವರ,ದೊಡ್ಡೇಶ ಮರಲಿಂಗಣ್ಣವರ,ಬಸಪ್ಪ ಜಿನ್ನೂರ,ಬಸಪ್ಪ ಮರಲಿಂಗಣ್ಣವರ,ಬಸವಂತಪ್ಪ ಮೇಟಿ,ಬಸವರಾಜ ಪರವಾಪೂರ,ಶಿವಪ್ಪ ಮುಡೆಕ್ಕನವರ,ಮಂಜುಳಾ ಜಿನ್ನೂರ,ಮಹದೇವಿ ಕುಬಿಹಾಳ,ನೀಲವ್ವಕರಿಕಟ್ಟಿ, ಶಾರವ್ವ ಇದ್ದರು.



## ವಸತಿ ರಹಿತ ಕುಟುಂಬಗಳಿಗೆ ವಸತಿಗಳನ್ನು ಒದಗಿಸಿ; ಪೂಜಾರ

• **ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು:**



,ವಸತಿ ವಂಚಿತರ ಹೋರಾಟ ಸಮಿತಿ ಹಾಗೂ ಕರ್ನಾಟಕ ರೈತ ಸಂಘ (ಎ.ಐ.ಯು.ಕೆ.ಸ್) ಸಿಂಧನೂರು ತಾಲೂಕು ಘಟಕ ವತಿಯಿಂದ ನಗರ ಸಭೆ ಪೌರಾಯುಕ್ತರಿಗೆ ಮನವಿ ಪತ್ರ ಸಲ್ಲಿಸಿ ಒತ್ತಾಯಿಸಿತು.

ನಂತರ ಮಾತನಾಡಿದ ವಸತಿ ವಂಚಿತರ ಹೋರಾಟ ಸಮಿತಿ ಹಾಗೂ ಕರ್ನಾಟಕ ರಾಜ್ಯ ರೈತ ಸಂಘ (ಎ.ಐ.ಯು.ಕೆ.ಎಸ್.) ರಾಜ್ಯ ಅಧ್ಯಕ್ಷರು ಹಾಗೂ ವಸತಿ ವಂಚಿತರ ಸಮಿತಿಯ ಸಂಚಾಲಕರಾದ ಡಿ ಎಚ್ ಪೂಜಾರ ಅವರು 204 ಕೂಲಿಕಾರರ ಕುಟುಂಬಗಳು ಅತ್ಯಂತ ಕಡು ಬಡವರಾಗಿದ್ದು ಕಳೆದ 30 ವರ್ಷಗಳಿಂದೆ ಮೇಲೆ ತೋರಿಸಿದ ಕಾಲುವೆಯ ಪಕ್ಕದಲ್ಲಿ ಶೆಡ್ಡು ಹಾಕಿಕೊಂಡು ತಮ್ಮ ಜೀವನ ನಡೆಸಿಕೊಂಡು ಬಂದಿದ್ದು ಇರುತ್ತದೆ. ಆದರೆ ದಿನಾಂಕ:12–01–2026ರಂದು ನೀರಾವರಿ ಇಲಾಖೆ ತುರ್ವಿಹಾಳ ಈ ಅಧಿಕಾರಿಗಳು ಈ ಜನರಿಗೆ ಏಕಾಏಕಿ ನೋಟಿಸುಗಳನ್ನು ಕೊಟ್ಟು ಶೆಡ್ಡುಗಳನ್ನು ತೆಗೆಯದಿದ್ದರೆ ಕಾನೂನು ಕ್ರಮ ಜರುಗಿಸುವುದಾಗಿ ಹೇಳಿರುತ್ತಾರೆ. ಈ ಎಲ್ಲಾ 2229 ಕುಟುಂಬಗಳು ಸುಮಾರು ವರ್ಷಗಳಿಂದೆ//*ವಸತಿ ಮಂಜೂರಾತಿಗಾಗಿ ತಮ್ಮ ಕಛೇರಿಗೆ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಆದರೆ ತಾವುಗಳು ಈ ಬಡ ಕೂಲಿ ಕಾರ್ಮಿಕರಿಗೆ ವಸತಿ ನಿವೇಶನಗಳನ್ನು ಸರ್ಕಾರ ಮಂಜೂರು ಮಾಡಿರುವುದಿಲ್ಲ.

ಸದರಿ ಮೇಲೆ ತೋರಿಸಿದ ಎಲ್ಲಾ ಕುಟುಂಬಗಳಿಗೆ ಜಮೀನು ಮತ್ತು ಮನೆ ಇತರೆ ಆಸ್ತಿಗಳನ್ನು ಹೊಂದದೆ ಇವರು ಮೂಲ ಉದ್ಯೋಗ ಕೂಲಿ ಕೆಲಸವಾಗಿದ್ದು, ಕೂಲಿಯಿಂದ ಬರುವ ಹಣವೇ ಈ ಕುಟುಂಬಕ್ಕೆ ಮೂಲ ಆಧಾರವಾಗಿರುತ್ತದೆ. ನೀರಾವರಿ ಇಲಾಖೆಯ ಅಧಿಕಾರಿಗಳು ಸದರಿ ಕುಟುಂಬಗಳನ್ನು ಈಗಿರುವ ಸ್ಥಳದಿಂದ ಸ್ಥಳಾಂತರ ಮಾಡಿಸಿದಲ್ಲಿ ಸದರಿ ಎಲ್ಲಾ ಕುಟುಂಬಗಳು ಅಕ್ಷರಸಹಃ ಬೀದಿಗೆ ಬಂದು ಬೀಳುತ್ತವೆ. ಏಕೆಂದರೆ, ಅವರಿಗೆ ಹಣ ಕೊಟ್ಟು ಬಾಡಿಗೆ ಮನೆ ಪಡೆಯುವ ಸಾಮರ್ಥ್ಯವೂ ಕೂಡಾ ಇರುವುದಿಲ್ಲ ಮತ್ತು ಬೇರೆ ಕಡೆ ಹೋಗಿ ವಾಸ ಮಾಡಲು ಜಾಗೆಯು ಕೂಡಾ ಹೊಂದಿರುವುದಿಲ್ಲ.

ಹಾಗಾಗಿ ನಮ್ಮ ಸಂಘದ ವತಿಯಿಂದ ತಮ್ಮಲ್ಲಿ ಹೇಳುವುದೇನೆಂದರೆ, ಈಗಾಗಲೇ ತಮ್ಮ ಇಲಾಖೆಯಿಂದ ನಿವೇಶನಗಳ ಹಂಚಿಕೆಗಾಗಿ ಖರೀದಿ ಮಾಡಿರುವ ಸುಕಾಲಪೇಟೆ, ಬನ್ನೂರು ರಸ್ತೆ, ಏಳುರಾಗಿ (ಡಿ) ಕ್ಯಾಂಪ್, ಈ ಜಾಗೆಗಳಲ್ಲಿ ಸದರಿ ಕುಟುಂಬಗಳಿಗೆ ನಿವೇಶನಗಳನ್ನು ಹಂಚಿಕೆ ಮಾಡಿದ ನಂತರ ಅಲ್ಲಿಂದ ಸ್ಥಳಾಂತರ ಮಾಡಿಸುವಂತೆ ನಮ್ಮ ಸಂಘವು ತಮ್ಮಲ್ಲಿ ಈ ಒತ್ತಾಯದ ಮನವಿ ಪತ್ರವನ್ನು ಸಲ್ಲಿಸುತ್ತಿದ್ದೇವೆ ಈ ಸಂದರ್ಭದಲ್ಲಿ. ಚಿಟ್ಟಿ ಬಾಬು. ಖಾಸಿಂಸಾಬ್ ನೂರಾರು ಮಹಿಳೆಯರು ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಲಿಂಗ ಅಸಮಾನತೆ ಹೋಗಲಾಡಿಸಲು ಹೆಣ್ಣಿಗೆ ಪ್ರೋತ್ಸಾಹಿಸೋಣ: ಡಿಹೆಚ್‌ಓ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಲಿಂಗ ಅಸಮಾನತೆಯನ್ನು ಹೋಗಲಾಡಿಸಲು ಹೆಣ್ಣಿಗೆ ಸಮಾನ ಅವಕಾಶ ಮತ್ತು ಪ್ರೋತ್ಸಾಹ ನೀಡಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್ ಬಾಬು ಅವರು ಹೇಳಿದರು.ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಮಂಗಳವಾರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆಯನ್ನು ಮೊದಲ ಬಾರಿಗೆ 2008 ರಲ್ಲಿ ಆಚರಣೆ ಮಾಡಲಾಯಿತು. ಭಾರತೀಯ ಸಮಾಜದಲ್ಲಿ ಹೆಣ್ಣು ಮಕ್ಕಳು ಎದುರಿಸುತ್ತಿರುವ ಅಸಮಾನತೆಗಳ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಈ ಕಾರ್ಯಕ್ರಮ ಆಚರಿಸಲಾಗುತ್ತದೆ ಎಂದು ಅವರು ತಿಳಿಸಿದರು.

ಮಹಿಳೆಯರಲ್ಲಿ ಶಿಕ್ಷಣದ ಮಹತ್ವ, ಆರೋಗ್ಯ ಮತ್ತು ಪ್ರಾಮುಖ್ಯತೆಯನ್ನು ಉತ್ತೇಜಿಸುವುದು ರಾಷ್ಟ್ರೀಯ ಹೆಣ್ಣು ಮಕ್ಕಳ ದಿನ ಆಚರಣೆಯ ಮುಖ್ಯ ಉದ್ದೇಶವಾಗಿದೆ ಎಂದರು.ಲಿಂಗಾನುಪಾತ ಹೆಣ್ಣು ಮಕ್ಕಳ ಆರೋಗ್ಯಕರ ಮತ್ತು ಸುರಕ್ಷಿತ ವಾತಾವರಣ ನಿರ್ಮಿಸಿದ್ದು, ಹೆಣ್ಣು ಮಗವನ್ನು ಉಳಿಸುವುದು, ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡುವುದರ ಕುರಿತು ಜಾಗೃತಿ ಅಭಿಯಾನವನ್ನು ನಡೆಸಲಾಗುತ್ತಿದೆ ಎಂದು ಹೇಳಿದರು.ಈ ಸಂದರ್ಭದಲ್ಲಿ ಜಿಲ್ಲಾ ಅಸಾಂಕ್ರಾಮಿಕ ರೋಗಗಳ ನಿಯಂತ್ರಣಾಧಿಕಾರಿ ಡಾ.ವಿರೇಂದ್ರ ಕುಮಾರ್, ಡಿಎನ್‌ಓ ಗಿರೀಶ್, ಆರೋಗ್ಯ ನಿರೀಕ್ಷಣಾಧಿಕಾರಿ ವಿರುಪಾಕ್ಷಿ, ಕಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಗೋಪಾಲ್ ಕೆ.ಹೆಚ್., ತಿಪ್ಪೇಸ್ವಾಮಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿಯ ಫ್ರಾನ್ಸಿಸ್, ಮಹೇಶ್, ಬಿಪಿಎಮ್ ಮೇಘರಾಜ್, ಓಬಳರೆಡ್ಡಿ, ವೀರೇಶ್ ಸೇರಿದಂತೆ ಪ್ರಾಥಮಿಕ ಸುರಕ್ಷಾಧಿಕಾರಿಗಳು, ಆರೋಗ್ಯ ನಿರೀಕ್ಷಣಾಧಿಕಾರಿಗಳು, ಆಶಾಕಾರ್ಯಕರ್ತೆಯರು ಸೇರಿದಂತೆ ಇತರರು ಹಾಜರಿದ್ದರು.

## ಯಶಸ್ವಿಗೊಳಿಸಲು ಸಮಿತಿಯ ಅಧ್ಯಕ್ಷ ಪಾಮಯ್ಯ ಮುರಾರಿ ಸೂಚನೆ

• **ಮಲ್ಲಮ್ಮ ನುಡಿ ವಾರ್ತೆ ರಾಯಚೂರು:**

ಜಿಲ್ಲೆಯಲ್ಲಿ ಫೆ.05ರಿಂದ ಫೆ.07ರವರೆಗೆ ನಿಗದಿಯಾದ ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವ–2026ರಲ್ಲಿ ಫೆ.07ರಂದು ಹಮ್ಮಿಕೊಂಡ ಜಿಲ್ಲಾ ಮಟ್ಟದ ಗ್ಯಾರಂಟಿ ಸಮಾವೇಶ ಕಾರ್ಯಕ್ರಮವು ಯಶಸ್ವಿಯಾಗಿ ನಡೆಯುವಂತೆ ಗ್ಯಾರಂಟಿ ಯೋಜನೆಗೆ ಸಂಬಂಧಿಸಿದ ಬೇರೆ ಬೇರೆ ಇಲಾಖೆಗಳ ಅಧಿಕಾರಿಗಳು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಪಾಮಯ್ಯ ಮುರಾರಿ ಅವರು ಹೇಳಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು, ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು, ಜಿಲೆಯ ಸಂಸದರು, ಶಾಸಕರು, ವಿಧಾನ ಪರಿಷತ್ ಸದಸ್ಯರು, ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರು ಹಾಗೂ ರಾಜ್ಯ ಉಪಾಧ್ಯಕ್ಷರು, ಜಿಲೆಯ ಎಲ್ಲ ಜನಪ್ರತಿನಿಧಿಗಳು ಸೇರಿದಂತೆ ಜಿಲ್ಲಾ ಹಾಗೂ ರಾಯಚೂರು, ಮಾನವಿ, ಸಿಂಧನೂರ, ಮಸ್ಕಿ, ಲಿಂಗಸೂರು, ದೇವದುರ್ಗ, ಸಿರವಾರ ಸೇರಿದಂತೆ ವಿವಿಧ ತಾಲೂಕುಗಳ ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು ಭಾಗವಹಿಸಲಿದ್ದಾರೆ. ರಾಯಚೂರು ಜಿಲ್ಲೆ ಮತ್ತು ತಾಲೂಕುವಾರು ವಿವಿಧ ಗ್ಯಾರಂಟಿ ಯೋಜನೆಗಳ ಅನುಷ್ಠಾನದಲ್ಲಿ ಪ್ರಸ್ತುತ ಅವಧಿವರೆಗೂ ಸಾಧಿಸಿರುವ ಪ್ರಗತಿಯ ವಿವರಗಳ ಮಾಹಿತಿಯನ್ನು ವಿಡಿಯೋ ಸಾಕ್ಷ್ಯಚಿತ್ರಗಳ ಮೂಲಕ ಪ್ರದರ್ಶಿಸುವ ಕಾರ್ಯ ಮಾಡಬೇಕು ಎಂದು ತಿಳಿಸಿದರು.

ಜಿಲ್ಲೆಯಲ್ಲಿನ ಗ್ಯಾರಂಟಿ ಯೋಜನೆಯಗಳ ಫಲಾನುಭವಿಗಳ ಯಶೋಗಾಥೆಯ ಬಗ್ಗೆ ನಾವು ತಿಳಿದುಕೊಳ್ಳಬೇಕು. ಅದು ಇತರರಿಗೆ ಪ್ರೇರಣೆಯಾಗಬೇಕು. ಮುಖ್ಯವಾಗಿ ಗ್ಯಾರಂಟಿ ಯೋಜನೆಗಳ ಆಶಯ ಮತ್ತು ಆಯಾ ಯೋಜನೆಗಳ ಬಗ್ಗೆ ಜನತೆಗೆ ತಿಳಿಸಲು ಅರ್ಹರು ಈ ಯೋಜನೆಯ ವ್ಯಾಪ್ತಿಗೆ ಬರಬೇಕು ಎನ್ನುವ ಪ್ರಮುಖ ಉದ್ದೇಶದೊಂದಿಗೆ ಫೆ.07ರಂದು ಜಿಲ್ಲಾ ಮಟ್ಟದ ಗ್ಯಾರಂಟಿ ಸಮಾವೇಶ ಹಮ್ಮಿಕೊಳ್ಳಲಾಗಿದೆ.

ಗ್ಯಾರಂಟಿ ಯೋಜನೆಗಳ ಫಲಾನುಭವಿಗಳ ಯಶೋಗಾಥೆಯ ಸಾಕ್ಷ್ಯಚಿತ್ರಗಳ ಪ್ರದರ್ಶನದ ಜೊತೆಗೆ ಸಾಧಕ ಫಲಾನುಭವಿಗಳ ಅಭಿಪ್ರಾಯದ ವಿಡಿಯೋ ಪ್ರದರ್ಶಿಸಬೇಕು. ಗ್ಯಾರಂಟಿ ಯೋಜನೆಗಳ ಯಶೋಗಾಥೆಯ ಕುರಿತು ನಾಟಕ ಪ್ರದರ್ಶನ ಸೇರಿದಂತೆ ಇತರೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲು ಅಗತ್ಯ ಕ್ರಮವಹಿಸಬೇಕೆಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿ ಸಿದರು. ಜಿಲ್ಲೆಯ ಸ್ವ–ಸಹಾಯ ಗುಂಪುಗಳು ಉತ್ಪಾದಿಸುವ ಉತ್ಪನ್ನಗಳು ಸೇರಿದಂತೆ, ಸ್ಥಳೀಯ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಮಳಿಗೆಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಆಯೋಜನೆ ಮಾಡಬೇಕೆಂದರು. ಇದೇ ಸಂದರ್ಭದಲ್ಲಿ ರಾಯಚೂರು ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಪವನ್ ಕಿಶೋರ್ ಪಾಟೀಲ್, ಜಿಲ್ಲಾ ಉಪಾಧ್ಯಕ್ಷರಾದ ಶಂಕರಗೌಡ ತುರ್ವಿಹಾಳ, ಹನುಮಂತಪ್ಪ ಜಾಲಿಬೆಂಚಿ, ಸದಸ್ಯರಾದ ಲಕ್ಷ್ಮಣ ಜ್ಯೋತಿ, ಮೆಹೆಬೂಬ್ ಸಾಬ್, ವೆಂಕಟೇಶ, ಆದನಗೌಡ, ಹೆಚ್.ಬಸವರಾಜ್, ಶೇಖರಪ್ಪಯಾದವ್, ಜಿಲ್ಲಾಪಂಚಾಯತ್ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ಈಶ್ವರ ಕುಮಾರ್ ಕಾಂದೂ, ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿ ಡಾ.ಟಿ.ರೋಣಿ, ಸಿಡಾಕ್ ಜಂಟಿ ನಿರ್ದೇಶಕ ಜಿ.ಯು.ಹುಡೇದ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ನವೀನ್ ಕುಮಾರ್, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ವಿಭಾಗೀಯ ನಿಯಂತ್ರಣಾಧಿಕಾರಿ ಚಂದ್ರಶೇಖರ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆಯ ಉಪ ನಿರ್ದೇಶಕರಾದ ನಜೀರ್ ಅಹಮದ್, ಜೆಸ್ಕಾಂ ಇಲಾಖೆಯ ಅಧಿಕಾರಿ ಚಂದ್ರಶೇಖರ ದೇಸಾಯಿ, ಜಿಲ್ಲಾ ಉದ್ಯೋಗಾಧಿಕಾರಿ ನವೀನ್ ಕುಮಾರ್ ಸಂಗೇಪಾಗ ಸೇರಿದಂತೆ ರಾಯಚೂರು, ಮಾನ್ವಿ, ಸಿಂಧನೂರ, ಮಸ್ಕಿ, ಲಿಂಗಸೂರು, ಸಿರವಾರ, ಅರಕೇರಾ ಮತ್ತು ದೇವದುರ್ಗ ತಾಲೂಕುಗಳ ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು ಸಭೆಯಲ್ಲಿ ಇದ್ದರು.

## ಶ್ರೀ ಕೃಷ್ಣದೇವರಾಯ ವಿವಿಯಲ್ಲಿ ಪುಸ್ತಕ ಮೇಳಕ್ಕೆ ಚಾಲನೆ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಕೇಂದ್ರ ಗ್ರಂಥಾಲಯದಲ್ಲಿ ಜ.28 ರಿಂದ 30 ರ ವರೆಗೆ ಮೂರು ದಿನಗಳ ಕಾಲ ಆಯೋಜಿಸಿರುವ ಪುಸ್ತಕ ಮೇಳಕ್ಕೆ ವಿವಿಯ ಕುಲಪತಿ ಪ್ರೊ.ಎಂ ಮುನಿರಾಜು ಅವರು ಬುಧವಾರ ಚಾಲನೆ ನೀಡಿದರು.



ಪುಸ್ತಕ ಪ್ರದರ್ಶನದಲ್ಲಿ 13 ವಿವಿಧ ಪುಸ್ತಕ ಮಳಿಗೆಗಳು ಭಾಗವಹಿಸಿದ್ದು, ಪುಸ್ತಕ ಪ್ರದರ್ಶನವು ಬೆಳಿಗ್ಗೆ 10 ರಿಂದ ಸಂಜೆ 5.30 ರ ವರೆಗೆ ಮೂರು ದಿನಗಳವರೆಗೆ ಜರುಗಲಿದೆ. ವಿದ್ಯಾರ್ಥಿಗಳು ಹಾಗೂ ಬೋಧಕ ಸಿಬ್ಬಂದಿಗಳು ಇದರ ಪ್ರಯೋಜನ ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಈ ವೇಳೆ ಕುಲಸಚಿವ ಪ್ರೊ. ತಿಪ್ಪೇರುದ್ರಪ್ಪ ಜೆ., ಗ್ರಂಥಪಾಲಕ ಡಾ.ಮಾರಣ್ಣ ಓ ಸೇರಿದಂತೆ ವಿವಿಯ ವಿವಿಧ ನಿಕಾಯದ ಡೀನರು, ವಿಭಾಗಗಳ ಮುಖ್ಯಸ್ಥರು, ಬೋಧಕ–ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿಗಳು ಇದ್ದರು.

# ತಲೆ ಕೆಳಗಾಗಿ ಹಾರಿಸಿ ರಾಷ್ಟ್ರ ಧ್ವಜಕ್ಕೆ ಅಗೌರವ



• ಮಲ್ಲಮ್ಮ ನುಡಿ ವಾರ್ತೆ ಮುದಗಲ್ :

ಸಮೀಪದ ಆಮದಿಹಾಳ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಜ.26 ರಂದು 77ನೇ ಗಣರಾಜ್ಯೋತ್ಸವದಲ್ಲಿ ಶಾಲೆಯ ಮುಖ್ಯ ಶಿಕ್ಷಕ ಗುರುಪಾದಪ್ಪ ಅವರು ರಾಷ್ಟ್ರಧ್ವಜವನ್ನು ತಲೆಕೆಳಗಾಗಿ ಹಾರಿಸಿ ರಾಷ್ಟ್ರಧ್ವಜಕ್ಕೆ ಅಗೌರವ ತೋರಿಸಿದ್ದಾರೆ.

ಅದೇ ರಾಷ್ಟ್ರಧ್ವಜ ರೋಹಣದಲ್ಲಿ ವಿದ್ಯಾರ್ಥಿಗಳಿಂದ ರಾಷ್ಟ್ರಗೀತೆ ಹಾಡಿ, ಅತಿಥಿಗಳು ಕೂಡ ತಲೆಕೆಳಗಾದ ರಾಷ್ಟ್ರಧ್ವಜಕ್ಕೆ ಗೌರವ ವಂದನೆ ಸಲ್ಲಿಸಿದ್ದಾರೆ. ರಾಷ್ಟ್ರಧ್ವಜ ತಲೆಕೆಳಗಾಗಿ ಹಾರಿಸಿದ್ದು ಕೆಲವರಿಗೆ ಅರಿವು ಬಂದಿದ್ದು. ತತ್ಕ್ಷಣ ಧ್ವಜಾರೋಹಣ ಕೆಳಗಿಳಿಸಲಾಗಿದೆ. ಈ ವೇಳೆ ರಾಷ್ಟ್ರಗೀತೆ ಹಾಡಲಾಗಿದೆ. ಆಗ ಸರಿಪಡಿಸಿ ಮತ್ತೆ ಎರಡನೇ ಬಾರಿಗೆ ಧ್ವಜಾರೋಹಣ ಮಾಡಲಾಗಿದೆ. ಈ ಅಚಾತುರ್ಯಕ್ಕೆ ಸಾರ್ವಜನಿಕ ವಲಯದಲ್ಲಿ ಟೀಕೆ ವ್ಯಕ್ತವಾಗಿದೆ. ಗಣರಾಜ್ಯೋತ್ಸವದ ಮಹತ್ವದ ದಿನದಂದು ಇಂತಹ ಅವಘಡ ಸಂಭವಿಸಿರುವುದು ಅಸಮಾಧಾನಕ್ಕೆ ಕಾರಣವಾಗಿದೆ. ಇದು ರಾಷ್ಟ್ರಧ್ವಜಕ್ಕೆ ಮಾಡಿದ ಅವಮಾನವೆಂದು ಆರೋಪಿಸಲಾಗಿದ್ದು, ಪ್ರಭಾರಿ ಮುಖ್ಯಶಿಕ್ಷಕರ ಬೇಜವಾಬ್ದಾರಿತನ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಸ್ಥಳೀಯರು ಹಾಗೂ ಸಾರ್ವಜನಿಕರು ಆಗ್ರಹಿಸಿದ್ದಾರೆ.

# ಶಾಲೆ ರಕ್ಷಿಸಲು ವಿದ್ಯಾರ್ಥಿಗಳ ಪೋಷಕರ ಪ್ರತಿಭಟನೆ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:

ತಾಲೂಕಿನ ಹೊಸ ಯರಗುಡಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ರಕ್ಷಿಸಲು ಆಗ್ರಹಿಸಿ ವಿದ್ಯಾರ್ಥಿಗಳ ಪೋಷಕರ ಪ್ರತಿಭಟನೆ ಶಾಲೆಯ ಹತ್ತಿರ ಎಐಡಿಎ ವಿದ್ಯಾರ್ಥಿ ಸಂಘಟನೆ ನೇತೃತ್ವದಲ್ಲಿ ನಡೆಯಿತು.

ಪ್ರತಿಭಟನೆ ಉದ್ದೇಶಿಸಿ ಎಐಡಿಎ ಜಿಲ್ಲಾ ಉಪಾಧ್ಯಕ್ಷರಾದ ಶಾಂತಿಯವರು ಮಾತನಾಡಿ ಹೊಸ ಯರಗುಡಿ ಸರ್ಕಾರಿ ಪ್ರಾಥಮಿಕ ಶಾಲೆ ಬಡವರಿಗೆ ಇರುವುದು ಇದು ಒಂದೇ ಸರ್ಕಾರಿ ಶಾಲೆ. ಈ ಶಾಲೆಯನ್ನು ಮುಚ್ಚಿ ಕೆಪಿಎಸ್ ಮ್ಯಾಗ್ನೆಟ್ ಶಾಲೆಗೆ ಹೋಗಬೇಕೆಂದರೆ 5 ವರ್ಷದ ಮಕ್ಕಳು ಒಂದು ಕಿಲೋ ಮೀಟರ್ ದೂರ ಹೇಗೆ ಹೋಗಬೇಕು? ಜೊತೆಗೆ ಅಲ್ಲಿನ ಜನರು ಶಾಲೆಯ ಕಟ್ಟಡ ಸರಿ ಇಲ್ಲದಿದ್ದಾಗ ಊರಿನ ಜನರೆಲ್ಲರೂ ಸೇರಿ ಶಾಲೆಯ ರಸ್ತೆ




ಸರಿ ಮಾಡಬೇಕೆಂದು ಹೋರಾಟ ಮಾಡಿದರು ಹಾಗೆಯೇ ಇಲ್ಲಿ 8ನೇ ತರಗತಿ ವರೆಗೂ ಶಾಲೆ ಸಹ ಮಾಡಬೇಕೆಂದು ಬೇಡಿಕೆ ಸಹ ಇಟ್ಟರು. ಹಾಗೆಯೇ ಇಲ್ಲಿ ವಾಸಿಸುವ ಜನರೆಲ್ಲರೂ ದುಡಿಯುವ ರೈತರು, ಕಾರ್ಮಿಕರು. ಬಡವರ ಮಕ್ಕಳು 150ಕ್ಕೂ ಹೆಚ್ಚು ಅಧಿಕ ಸಂಖ್ಯೆಯಲ್ಲಿ ದಾಖಲಾತಿ ಇರುವ ಸರ್ಕಾರಿ ಶಾಲೆ ಮುಚ್ಚಬಾರದು ಎಂಬುದು ಪೋಷಕರು ಆಗ್ರಹವಾಗಿದೆ.

ನಮ್ಮ ದೇಶದ ಮಹಾನ್ ಮಾನವತಾವಾದಿ ಜ್ಯೋತಿರಾವ್ ಫುಲೆ ಮತ್ತು ಸಾವಿತ್ರಿ ಬಾಯಿ ಫುಲೆ ಅವರು ಇಡೀ ಜೀವನವನ್ನು ಶಿಕ್ಷಣ-ಕ್ಕಾಗಿ ದುಡಿದು, ಶೋಷಿತರಿಗೆ, ದಲಿತರಿಗೆ ಮತ್ತು ಹೆಣ್ಣು ಮಕ್ಕಳಿಗೆ ಅಕ್ಷರ ಕ್ರಾಂತಿಯ ಹರಿಕಾರರಾದರು. ಭಗತ್ ಸಿಂಗ್, ನೇತಾಜಿ ಅವರ ಕನಸು, "ಸ್ವಾತಂತ್ರ್ಯ ನಂತರ ದೇಶದಲ್ಲಿ ಹುಟ್ಟಿದ ಪ್ರತಿಯೊಬ್ಬ ಮಗುವಿಗೂ ಶಿಕ್ಷಣ ನೀಡುವುದು ಸರ್ಕಾರದ ಜವಾಬ್ದಾರಿ" ಎಂದು ಸಾರಿದರು.

ಅಧಿಕಾರಿದ ಚುಕ್ಕಾಣಿ ಹಿಡಿದ ಎಲ್ಲಾ ಸರ್ಕಾರಗಳು ಬಡ ಮಕ್ಕಳಿಂದ ಶಿಕ್ಷಣವನ್ನು ಕಿತ್ತುಕೊಂಡು, ಸಮಾಜವನ್ನು ಇನ್ನೂಷ್ಟು ಕತ್ತಲೆ ಕೋಣೆಯಲ್ಲಿ ಹಾಕುತ್ತಿದ್ದಾರೆ.

ಆದ್ದರಿಂದ ಸಾರ್ವಜನಿಕ ಶಿಕ್ಷಣ ಉಳಿಸಿ ಜನರ ಸಮಿತಿ ನೇತೃತ್ವದಲ್ಲಿ ಸರ್ಕಾರಿ ಶಾಲೆಗಳನ್ನು ರಕ್ಷಿಸಿ, ಬಲಪಡಿಸಲು ಪ್ರಬಲ ಹೋರಾಟ ಕಟ್ಟಬೇಕು. ಹಾಗೂ ಶಿಕ್ಷಣವನ್ನು ಖಾಸಗೀಕರಣ ಮಾಡುತ್ತಿರುವ ಎಲ್ಲಾ ಸರ್ಕಾರಗಳ ವಿರುದ್ಧ ಜಾತಿ, ಧರ್ಮ ಬೇಧಬಾವವಿಲ್ಲದೆ ಎಲ್ಲಾರು ಒಂದಾಗಿ ಮತ್ತೊಂದು ನವೋದಯ ಚಳುವಳಿ ಕಟ್ಟಲು ಮುಂದಾಗಬೇಕು ಎಂದು ಕರೆ ನೀಡಿದರು.

ಈ ಪ್ರತಿಭಟನೆಯ ಜಿಲ್ಲಾ ಕಾರ್ಯದರ್ಶಿ ಕಂಬಳಿ ಮಂಜುನಾಥ, ಎಐಡಿಎ ಸದಸ್ಯರಾದ ಕಾಂತೇಶ್, ತಿಪ್ಪೇಸ್ವಾಮಿ, ಎಸ್.ಡಿ.ಎಮ್.ಸಿ ಅಧ್ಯಕ್ಷರು ನಾಗಮ್ಮ ಹಾಗೂ ಊರಿನ ಸರ್ಕಾರಿ ಶಾಲೆ ಉಳಿಸುವ ಸಮಿತಿ ಅಧ್ಯಕ್ಷರು ಪಾರ್ವತಿ ಕಾರ್ಯದರ್ಶಿ ಅಂಬಣ್ಣ, ಸದಸ್ಯರಾದ ಶೇಖರ್, ಪೋತಪ್ಪ, ಲಕ್ಷ್ಮಮ್ಮ ಹಾಗೂ ಹಿರಿಯರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಸಣ್ಣ ತಪ್ಪು ದೊಡ್ಡ ಅನಾಹುತವನ್ನು ಸೃಷ್ಟಿಸುವಂತಾಗಬಾರದು: ಉಮೇಶ್

• ಮಲ್ಲಮ್ಮ ನುಡಿ ವಾರ್ತೆ ಕೂಲ್ಹಾರ :

ಜೀವನದ ಯಾವುದೇ ಸಂದರ್ಭದಲ್ಲೂ ಅಚಾತುರ್ಯವನ್ನು ತೋರಬೇಡಿ ನಾವು ಮಾಡುವ ಕೆಲವು ಸಣ್ಣ ತಪ್ಪುಗಳು ಮುಂದೆ ದೊಡ್ಡ ಅನಾಹುತವನ್ನು ಸೃಷ್ಟಿಸುವಂತಾಗಬಾರದು ಎಂದು ಕೂಡಗಿಯ ಎನ್ ಟಿ ಪಿ ಸಿ ಹೆಡ್ ಕಾನ್ಸ್ಟೇಬಲ್ ಉಮೇಶ್ ಕೊಡಬೇಕು ಆ ಸಂದರ್ಭದಲ್ಲಿ ನಿಮ್ಮ ಜಾಣ್ಮೆ ಬಹುತೇಕ ಎಲ್ಲಾ ಬೆಂಕಿಯನ್ನು ತಡೆಗಟ್ಟಬಹುದು. ಬೆಂಕಿ ಆಕಸ್ಮಿಕದಿಂದ ಯಾರನ್ನಾದರೂ ರಕ್ಷಿಸಲು ಉತ್ತಮ ಮಾರ್ಗವೆಂದರೆ ತ್ವರಿತವಾಗಿ ನಿರ್ಣಯಿಸಿ.

ಕಾರ್ಯನಿರ್ವಹಿಸಿ: ಜನರನ್ನು ಹೊರಗೆ ಕರೆದುಕೊಂಡು ಹೋಗಿ, ಬೆಂಕಿ ಹರಡುವುದನ್ನು ನಿಲ್ಲಿಸಿ ಮತ್ತು ವೃತ್ತಿಪರ ಸಹಾಯಕ್ಕಾಗಿ ಪ್ರಮುಖ ನಿಯಮಗಳೆಂದರೆ:

ಮೊದಲು ಜೀವ, ನಂತರ ಆಸ್ತಿ.

ಬೆಳೆಯುತ್ತಿರುವ, ಹರಡುತ್ತಿರುವ ಅಥವಾ ನಿಮ್ಮ ನಿರ್ಗಮನವನ್ನು ತಡೆಯುತ್ತಿರುವ ಬೆಂಕಿಯನ್ನು ನಂದಿಸಬೇಡಿ.

ಗ್ರೀಸ್/ವಿದ್ಯುತ್ ಬೆಂಕಿ ಹೊತ್ತಿಕೊಂಡಾಗ ನೀರನ್ನು ಬಳಸುವುದನ್ನು ತಪ್ಪಿಸಿ. ವೃತ್ತಿಪರ ಅಗ್ನಿಶಾಮಕ ದಳದವರನ್ನು ಮೊದಲೇ ಕರೆ



ಹೇಳಿದರು.

ತಾಲೂಕಿನ ಕೂಡಗಿ ಸರ್ಕಾರಿ ಪದವಿ ಪೂರ್ವ ಕಾಲೇಜು ಹಮ್ಮಿಕೊಂಡು ಮಾತನಾಡಿದವರು, ಬೆಂಕಿ ಅಪಘಾತಗಳಿಂದ ತಪ್ಪಿಸಿಕೊಳ್ಳುವ ಬಗೆ ಹಾಗೂ ತೆಗೆದುಕೊಳ್ಳಬೇಕಾದ ಎಚ್ಚರಿಕೆಯ ಕ್ರಮಗಳ ಕುರಿತು ಉಪದೇಶಿಸಿ, ಬೆಂಕಿಯ ಅಪಘಾತದಿಂದ ಯಾರನ್ನಾದರೂ ರಕ್ಷಿಸಲು ಉತ್ತಮ ಮಾರ್ಗವೆಂದರೆ ಮೊದಲು ಗಾಭರಿಯಾಗದೆ ಬೆಂಕಿಯ ಅಪಘಾತವನ್ನು ತಡೆಗಟ್ಟುವುದರ ಕಡೆಗೆ ಗಮನ ಕರೆ ಮಾಡಿ. ಆಸ್ತಿ ಮತ್ತು ನಿಮ್ಮ ಸ್ವಂತದವರನ್ನು ರಕ್ಷಿಸುವ ಕಡೆಗೆ ಗಮನ ಕೊಡಿ ಎಂದರು.

ನಂತರ ಫೈರ್ ಸುಬೇದಾರ್ ತುಕಾರಾಂ ಲಮಾಣಿ ಮಾತನಾಡಿ, ಹೊಗೆಯಿಂದ ಉಸಿರಾಡಲು ಬಾರದ ಅಥವಾ ಸುಟ್ಟುಹೋದ ವ್ಯಕ್ತಿಯನ್ನು ಅಪ್ಪಿಕೊಳ್ಳುವಿಕೆಯಿಂದ ತೆಗೆದುಹಾಕಿ, ಸುಟ್ಟಗಾಯಗಳನ್ನು ತಂಪಾಗಿಸಿ, ಹೆಚ್ಚಿನ ಹರಿವಿನ ಆಮ್ಲಜನಕವನ್ನು ಒದಗಿಸಿ ಮತ್ತು ಲಭ್ಯವಿದ್ದರೆ ಆಸ್ಪತ್ರೆಗೆ ತ್ವರಿತವಾಗಿ ಸಾಗಿಸಿ ಮಾಡಿ ಅವರು ಉಪಕರಣಗಳು ಮತ್ತು ತರಬೇತಿಯನ್ನು ಪಡೆದು-ಕೊಂಡಿದ್ದರೆ ಇನ್ನೂ ಉತ್ತಮ ಎಂದು ಹೇಳಿದರು.

ಈ ವೇಳೆಯಲ್ಲಿ ಸಿ.ಐ.ಎಸ್.ಎಫ್ ನ ಕಾನ್ಸ್ಟೇಬಲ್ ರಿಂಕು ಕುಮಾರ್ ಫೈರ್ ಪ್ರೊ ಎಸ್ ಬಿ ದೇಸಾಯಿ, ಮಹಾಂತೇಶ್ ಪಾಟೀಲ್, ಲಕ್ಷ್ಮಿ ಅಂಗಡಿ, ಹಾಜರಿದ್ದರು. ವಿರುಪಾಕ್ಷಕ್ಕೆ ಕಿವುಡಜಾಡರ್ ಕಾರ್ಯಕ್ರಮ ನಿರ್ವಹಿಸಿದರು, ಸ್ನೇಹಾ ಹಿರೇಮಠ ಪ್ರಾರ್ಥಿಸಿದರು ಪ್ರಜ್ಞಾ ಹಿರೇಮಠ ವಂದಿಸಿದರು.

# ಮೆಕ್ಕೆಜೋಳ: ರೈತರಿಂದ ಮುತ್ತಿಗೆ



• ಮಲ್ಲಮ್ಮ ನುಡಿ ವಾರ್ತೆ ಕಲಘಟಗಿ:

ಪಟ್ಟಣದ ಕೃಷಿ ಮಾರುಕಟ್ಟೆಯಲ್ಲಿ ಸರಕಾರದಿಂದ ತರೆಯಲಾಗಿರುವ ಮೆಕ್ಕೆ ಜೋಳ ಖರಿದಿ ಕೇಂದ್ರಕ್ಕೆ ರೈತರು ತಮ್ಮ ಅಸಮಾಧಾನಗಳಿಗೆ ಪರಿಹಾರ ಸಿಗದ ಕಾರಣ ಕೃಷಿ ಮಾರುಕಟ್ಟೆ ಅಧಿಕಾರಿಗಳ ಕಚೇರಿಗೆ ರೈತರು ಮುತ್ತಿಗೆ ಹಾಕಿದ ಘಟನೆ ಜರುಗಿದೆ

ಬೆಳಿಗ್ಗೆಯಿಂದ ತಮ್ಮ ಬೆಲೆಯಾದ ಮೆಕ್ಕೆಜೋಳವನ್ನು ಖರಿದಿ ಕೇಂದ್ರಕ್ಕೆ ನೀಡಿ ಹೆಚ್ಚುವರಿ ಹಣವನ್ನು ಪಡೆಯಲು ತಮ್ಮ ಆಧಾರ ಕಾರ್ಡನೊಂದಿಗೆ ಸರತಿಯಲ್ಲಿ ನಿಂತಾಗ ಅಧಿಕಾರಿಗಳ ವರ್ತನೆಯಿಂದ ಬೆಸತ್ತ ರೈತರು ಅಲ್ಲಿನ ಅಧಿಕಾರಿಗಳ ವಿರುದ್ಧವಾದ ವಿವಾದಗಳೊಂದಿಗೆ ಮುಗಿಬಿದ್ದಿದ್ದು ಸ್ಥಳಕ್ಕೆ ಪ್ರೋಬೆಷನರಿ ತಹಶಿಲ್ದಾರ ರಿತಿಕಾ ವರ್ಮಾ ಪೋಲೀಸರೊಂದಿಗೆ ಆಗಮಿಸಿ ರೈತರ ಸಮಸ್ಯೆ ಕುರಿತು ಚರ್ಚೆ ನಡೆಸಿದರು ರೈತರು ತಾವು ಬಂದ ಮೆಕ್ಕೆಜೋಳಕ್ಕೆ ಸರಿಯಾದ ರೀತಿಯಲ್ಲಿ ಬಿಲ್ಲ ನೀಡುತ್ತಿಲ್ಲ ಕೈಬರಹದ ಚೀಟಿಯಲ್ಲಿ ನೀಡುತ್ತಿದ್ದು ಅಲ್ಲದೇ ಪ್ರತಿ ಕ್ವಿಂಟಲಗೆ ಮೂರು ಕೆಜಿ ಕಡಿತಗೊಳಿಸಲಾಗುತ್ತಿದೆ

> ಇದಕ್ಕೆ ಸ್ಪಂದಿಸಿದ ತಹಸಿಲ್ದಾರ ಕೃಷಿಮಾರುಕಟ್ಟೆ ಅಧಿಕಾರಿಗೆ ಸರಿಯಾಗಿ ರೈತರ ಸಮಸ್ಯೆಗೆ ಸ್ಪಂದಿಸ ಬೇಕು ಸರಿಯಾದ ರೀತಿಯಲ್ಲಿ ಬಿಲ್ಲ ನೀಡದ ದಲ್ಲಾಳಿಗಳ ಪರವಾನಿಗೆಯನ್ನು ರದ್ದು ಮಾಡುವುದಾಗಿ ಎಚ್ಚರಿಸಿ ಮೆಕ್ಕೆ ಜೋಳದ ಬೆಲೆ ಎರಿಳಿತವಾಗದ ಹಾಗೆ ಕಾರ್ಯನಿರ್ವಹಿಸಿ ಬೇಕು ಆದಾರ ಸಂಭಂದಿಸಿದ ಸಮಸ್ಯೆಗಳ ಕುರಿತು ಅಧಿಕಾರಿಗಳೊಡನೆ ಚರ್ಚಿಸಿ ತಕ್ಷಣ ಕ್ರಮಕೈಗೊಳ್ಳಲಾಗುವುದು ಎಂದರು.
>
> **ಪ್ರೋಬೆಷನರಿ ತಹಶಿಲ್ದಾರ ರಿತಿಕಾ ವರ್ಮಾ**

> ಇಗಾಲೆ ಮೆಕ್ಕೆಜೋಳ ಬೆಳೆದ ನಾವು ಎತಕ್ಕಾದರೂ ಬೆಳೆದೆವು ಎಂಬ ಪರಿಸ್ಥಿತಿ ನಿರ್ಮಾಣವಾಗಿದ್ದು ಮೇಲೆ ಬೇರೆ ದಲ್ಲಾಳಿ ಹಾಗೂ ಸರ್ವರ ಕಾಟದಿಂದ ಬೆಸತ್ತು ಹೋಗಿದ್ದೆವೆ ಸರಕಾರ ಇ ಕೂಡಲೇ ಕ್ರಮಕೈಗೊಳ್ಳ ಬೇಕು ತಾಲೂಕಿನಾಧ್ಯಂತ ಖರಿದಿ ಕೇಂದ್ರ ತೆರೆಯ ಬೇಕು
>
> **ಮುಕ್ಕಲ್ಲ ಗ್ರಾಮದ ರೈತ ಡಿ.ವಾಯ್ ಯಲ್ಲಾರಿ**

ಇದರ ಭಗ್ಗೆ ಚರ್ಚಿಸಿದರೆ ನಿಮ್ಮ ಮೆಕ್ಕೆಜೋಳವನ್ನು ಖರಿದಿ ಮಾಡುವುದಿಲ್ಲವೆಂದು ದಲ್ಲಾಳಿಗಳು ನಮ್ಮನ್ನು ಹೆದರಿಸುತ್ತಾರೆ ಇಗಾಗಲೇ ನಾವು ಬೆಳೆದ ಬೆಳೆಗಳಿಗೆ ಬೆಲೆ ಸಿಗದೆ ಕಂಗಾಲಾಗಿದ್ದೆವೆ ಸರಿಯಾದ ರೀತಿಯಲ್ಲಿ ಸರ್ವರ ಕೂಡ ಬರದೆ ದಿನವಿಡಿ ಕೃಷಿಮಾರುಕಟ್ಟೆಯಲ್ಲಿ ಕಾಲ ಕಳಿಯುತ್ತಿದ್ದೆವೆ ಎಂದರು.

ಇ ಸಂಧರ್ಬದಲ್ಲಿ ಗ್ರೇಡು ತಹಸಿಲ್ದಾರ ಬಸವರಾಜ ಹೊಂಕಣ್ಣವರ, ಹಾಗೂ ಸಿಬ್ಬಂದಿಗಳು ಮಹಾರುದ್ರಪ್ಪ ಅಗಡಿ, ಅಶೋಕ ಯಲ್ಲಾರಿ ಸಂಗಪ್ಪ ಪುರದಣ್ಣವರ, ಸಿಧ್ಧನಗೌಡ ಪುರದನಗೌಡ್ರ, ಕಲ್ಲಪ್ಪ ಗುಡಿಹಾಳ, ಶಂಕರಪ್ಪ ಕುಂಬಾರ, ರಾಘವೇಂದ್ರ ಹುಲಿಹೊಂಡ, ಮಂಜು ಪೂಜಾರ, ಲಕ್ಷ್ಮಣ ಯಲ್ಲಾರಿ ಇದ್ದರು.

# ಹಿಂದೂ ಸಂಸ್ಕೃತಿ ಸಂಪ್ರದಾಯ ಮಕ್ಕಳಿಗೆ ಕಲಿಸಿ



• ಮಲ್ಲಮ್ಮ ನುಡಿ ವಾರ್ತೆ ಮುದಗಲ್:

ಸನಾತನ ಹಿಂದೂ ಧರ್ಮದ ಸಂಸ್ಕಾರ, ಸಂಸ್ಕೃತಿ, ಸಂಪ್ರದಾಯಗಳನ್ನ ಮಕ್ಕಳಿಗೆ ಕಲಿಸುವಂತ ಕೆಲಸ ತಂದೆ-ತಾಯಿಗಳಿಂದಾಗಬೇಕಿದೆ ಎಂದು ನಂದವಾಡಗಿ-ಆಳಂದ ಮಹಾಂತೇಶ್ವರ ಮಠದ ಪೂಜ್ಯರಾದ ಡಾ. ಅಭಿನವ ಚೆನ್ನಬಸವ ಶಿವಾಚಾರ್ಯ ಸ್ವಾಮೀಜಿ ಶನಿವಾರ ಹೇಳಿದರು.

ಪಟ್ಟಣದ ಶ್ರೀ ವಿಜಯಮಹಾಂತೇಶ್ವರ ಮಠದಲ್ಲಿ ಹಿಂದೂ ಸಮ್ಮೇಳನ ಸಮಿತಿ ಆಯೋಜಿಸಿದ್ದ ಬೃಹತ್ ಹಿಂದೂ ಸಮ್ಮೇಳನ ಕಾರ್ಯಕ್ರಮದ ದಿವ್ಯಸಾನಿಧ್ಯ ವಹಿಸಿ ಮಾತನಾಡಿದ ಅವರು ಧರ್ಮ ಯಾವತ್ತೂ ಜಾಗೃತವಾಗಿದೇ, ಇಲ್ಲಿ ನಮ್ಮ ಮನಸ್ಸುಗಳು ಜಾಗೃತವಾಗುವ ಕೆಲಸವಾಗಬೇಕಿದೆ. ಧರ್ಮದ ಪರಂಪರೆ, ಸಂಸ್ಕೃತಿ, ಸಂಪ್ರದಾಯಗಳು ಉಳಿಸುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ. ಧರ್ಮದ ಏಕತೆಗಾಗಿ ಪರರೊಂದಿಗೆ ಪರಸ್ಪರ ಪ್ರೀತಿ, ನಂಬಿಕೆಯೊಂದಿಗೆ ಬದುಕಬೇಕು. ಹಿಂದೂ ಧರ್ಮದಲ್ಲಿ ಪರರನ್ನು ಪ್ರೀತಿಸುವ ಗುಣವಿದೆ. ಮನುಷ್ಯನ ಮನಸ್ಸು ಮತ್ತು ಮನೆಯನ್ನು ಸ್ವಚ್ಛಂಧವಾಗಿಟ್ಟುಕೊಳ್ಳುವುದೇ ಹಿಂದೂ ಧರ್ಮದ ಸಂಸ್ಕಾರವಾಗಿದೆ. ಧಾರ್ಮಿಕ ಸಂಸ್ಕಾರ, ಸಂಸ್ಕೃತಿ, ಸಂಪ್ರದಾಯ ಮನಸ್ಸಿನಲ್ಲಿ ಮೂಡಿದಾಗ ಧರ್ಮ ರಕ್ಷಣೆಯಾಗುತ್ತದೆ. ಭಾರತೀಯ ಮಾತೆಯ ಸಂಸ್ಕೃತಿಯನ್ನು ಮಹಿಳೆಯರು ಎತ್ತಿಹಿಡಿಯಬೇಕು. ಪಾಶ್ಚಾತ್ಯ ಶೈಲಿಗೆ ಮಾರುಹೋಗಬಾರದು. ಮನುಷ್ಯನ ಕಾಯದಲ್ಲಿ ಸಂಸ್ಕಾರದ ಕುಡಿ ಚಿಗುರೊಡೆದಾಗ ಧರ್ಮ ಉಳಿಯುತ್ತದೆ. ನಮ್ಮ ನೀತಿಯಿಂದ ಸಮಾಜದಲ್ಲಿ ಏಕತೆ ಬರಲು ಸಾಧ್ಯ. ಜಗತ್ತಿನಲ್ಲಿ ಪ್ರಕೃತಿ ಆರಾಧನೆಯಲ್ಲಿ ದೇವರನ್ನ ಕಾಣುವ ಏಕೈಕವಾದದ್ದು ಸನಾತನ ಹಿಂದೂ ಧರ್ಮವಾಗಿದೆ. ಕಾಲಕ್ಕೆ ಕಾಲಕ್ಕೆ ಸಾವಿರಾರು ವರ್ಷಗಳಿಂದ ನಿರಂತರ ದಾಳಿಯಾದರೂ ಹಿಂದೂ ಧರ್ಮವನ್ನು ಅಳಿಸಲು ಯಾರಿಂದಲೂ ಸಾಧ್ಯವಾಗಿಲ್ಲ ಎಂದು ಆಶೀರ್ವಚನ ನೀಡಿದರು.

# ಉದ್ಘಾಟನಾ ಕಾರ್ಯಕ್ರಮ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:

ಜಿಲ್ಲಾಡಳಿತ, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ಮತ್ತು ಜಿಲ್ಲಾ ನ್ಯಾಯವಾದಿಗಳ ಸಂಘ ಇವರ ಸಂಯುಕ್ತಾಶ್ರಯದಲ್ಲಿ ಜ.31 ರಂದು ಬೆಳಿಗ್ಗೆ 10.30 ಗಂಟೆಗೆ ನಗರದ ರೈಲ್ವೇ ನಿಲ್ದಾಣ ಎದುರುಗಡೆಯ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಬಳ್ಳಾರಿ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಮಧ್ಯಸ್ಥಿಕೆ ಕೇಂದ್ರದ ನೂತನ ಕಟ್ಟಡದ ಉದ್ಘಾಟನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷರಾದ ನ್ಯಾಯಮೂರ್ತಿ ಟಿ.ಜಿ ಶಿವಶಂಕರೇಗೌಡ ಅವರು ಉದ್ಘಾಟನೆ ನೆರವೇರಿಸುವರು.

ಮುಖ್ಯ ಅತಿಥಿಗಳಾಗಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರೂ ಆದ ಕೆ.ಜಿ. ಶಾಂತಿ, ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ ನಾಗೇಂದ್ರ ಪ್ರಸಾದ್. ಕೆ., ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ರಿಜಿಸ್ಟ್ರಾರ್ ಮತ್ತು ಆಡಳಿತಾಧಿಕಾರಿ ಮಲ್ಲಿಕಾರ್ಜುನ ಈಶ್ವರಪ್ಪ ಕಮತಗಿ, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಪಿ.ರಾಮಬ್ರಹ್ಮಂ, ರಾಜ್ಯ ವಕೀಲರ ಪರಿಷತ್ತಿನ ಸದಸ್ಯರಾದ ಕೆ.ಕೋಟೇಶ್ವರ ರಾವ್, ಜೆ.ಎಂ. ಅನಿಲ್ ಕುಮಾರ್, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಮಹಿಳಾ ಸದಸ್ಯರಾದ ಮಾರ್ಲಾ ಶಶಿಕಲಾ, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷ ಎನ್.ತಿಪ್ಪೇಸ್ವಾಮಿ ಸೇರಿದಂತೆ ಸಿಬ್ಬಂದಿ ವರ್ಗ ಹಾಗೂ ಇತರರು ಉಪಸ್ಥಿತರಿರುವರು ಎಂದು ಪ್ರಕಟಣೆ ತಿಳಿಸಿದೆ.

# ಮಾಲೀಕ ವಿಶ್ವನಾಥ ಪತ್ತೆ

ಬಳ್ಳಾರಿ, : ನಗರದ ಕುಂಬಾರ ಓಣಿಯಲ್ಲಿನ ಕಟ್ಟಡದಲ್ಲಿ ಅಧಿಕ ಲಾಭಾಂಶದ ಆಮಿಷವೊಡ್ಡಿ, ಅಕ್ರಮವಾಗಿ ಚೀಟಿ ವ್ಯವಹಾರ ನಡೆಸುತ್ತ, ಜನರಿಂದ ಕೋಟ್ಯಾಂತರ ರೂ ಹಣ ಪಡೆದು ವಂಚಿಸುತ್ತಿದ್ದ 'ವಾಸವಿ ಹೋಮ್ ನೀಡ್ಸ್ ಮಳಿಗೆ'ಯ ಮಾಲೀಕ ವಿಶ್ವನಾಥ್ ಕಳೆದ ಎಪ್ರಲ್ ನಲ್ಲಿ ಪೊಲೀಸರಿಂದ ಬಂಧಿತನಾಗಿ, ಜಾಮೀನು ಪಡೆದು ನಂತರ ಆತ್ಯಹತ್ಯೆಯ ಪತ್ರ ಬರೆದಿಟ್ಟು ನಾಪತ್ತೆಯಾಗಿದ್ದ. ಈತನನ್ನು ಪೊಲೀಸರು ಬಂಧಿಸಿ ಆತನಿಂದ ರಿಕವರಿ ಪ್ರಕ್ರಿಯೆ ನಡೆದಿದೆ ಎಂದು ತಿಳಿದು ಬಂದಿದೆ.

ವಿಶ್ವನಾಥ ತಮ್ಮ ಮಳಿಗೆಯಲ್ಲಿ ಹೋಮ್ ನೀಡ್ಸ್ ಸಾಮಾಗ್ರಿ ಖರೀದಿ ಮಾಡಿದರೆ ಶೇ 20 ರಷ್ಟು ಇತರೇ ಸಾಮಾಗ್ರಿ ಕೊಡುವುದಾಗಿ. ಕೂಪನ್ ಕೊಡುತ್ತಿದ್ದ. ನಂತರ ಹಣ ಡೆಪಾಸಿಟ್ ಮಾಡಿದರೆ ಶೇ. 20 ರಷ್ಟು ಬಡ್ಡಿ ಹಣದ ವಸ್ತು ಕೊಡುವುದಾಗಿ ಹಣ ಸಂಗ್ರಹ ಮಾಡುತ್ತಿದ್ದ.

ಈ ರೀತಿ ಕನಿಷ್ಠ 10 ಸಾವಿರದಿಂದ 5 ಲಕ್ಷದ ವರಗೆ ಸಾವಿರಾರು ಮಂದಿ ವಿಶ್ವನಾಥ್ ಗೆ ಚೀಟಿ ವ್ಯವಹಾರಕ್ಕೆ ಹಣ ಹೂಡಿಕೆ ಮಾಡಿದ್ದರು. ಈತನ ವ್ಯವಹಾರದ ಬಗ್ಗೆ ಸಂಶಯ ಬಂದು ಪೊಲೀಸರು ಬಂಧಿಸಿ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದರು. ನಂತರ ಆತ ಜಾಮೀನು ಪಡೆದು ಹೊರ ಬಂದು ಎಲ್ಲರಗೂ ಹಣ ನೀಡುವುದಾಗಿ ಹೇಳಿ ರಾತ್ರೋ ರಾತ್ರಿ ಆತ್ಯಹತ್ಯೆಯ ಪತ್ರ ಬರೆದಿಟ್ಟು ನಾಪತ್ತೆಯಾಗಿದ್ದ.

ಈ ಬಗ್ಗೆ ನಗರದ ಬ್ರೂಸ್ ಪೇಟೆ ಪೊಲೀಸ್ ಠಾಣೆಗೆ ತೆರಳಿ ಜನತೆ ದೂರು ಸಲ್ಲಿಸಿದ್ದರು. ಇತನನ್ನು ಹುಡುಕುತ್ತಿದ್ದ ಪೊಲೀಸರು ಈವರೆಗೆ ಪತ್ತೆಹಚ್ಚಿರಲಿಲ್ಲ. ಆದರೆ ಹೊಸ ಎಸ್ಪಿ ಬಂದ ಮೇಲೆ ವಿಶ್ವನಾಥನ್ನು ಹುಡುಕಿ ತಂದು ಆತನಿಂದ ರಿಕವರಿ ಮಾಡುತ್ತಿದ್ದಾರಂತೆ ಪೊಲೀಸರು.

# 77ನೇ ಗಣರಾಜ್ಯೋತ್ಸವ ಸಂಭ್ರಮ ಆಚರಣೆ




• ಮಲ್ಲಮ್ಮ ನುಡಿ ವಾರ್ತೆ ಕೊಟ್ಟೂರು:

ಮಕ್ಕಳಿಗೆ ಉತ್ತಮ ಸಂಸ್ಕಾರ, ಶಿಕ್ಷಣದ ಜೊತೆಗೆ ರಂಗ ಚಟುವಟಿಕೆಗಳ ಬಗ್ಗೆ ಹೆಚ್ಚಿನ ಪ್ರಾಶಸ್ತ್ಯ ನೀಡುವ ಮೂಲಕ ಸ್ವಾಸ್ತ ಸಮಾಜಕ್ಕೆ ನಿರ್ಮಾಣಕ್ಕೆ ಎಲ್ಲಾರು ಮುಂದಾಗಬೇಕು ಎಂ ದು ಕೆ ಟಿ ಸಿದ್ಧರಾಮೇಶ್ವರ ಹೇಳಿದರು.

ಕಲ್ಪತರು ಕಲಾ ಟ್ರಸ್ಟ್ ರಿ ಕೊಟ್ಟೂರು ಇವರಿಂದ 77ನೇ ಗಣರಾಜ್ಯೋತ್ಸವ ಅಂಗವಾಗಿ ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜು ಆವರಣದಲ್ಲಿ ಮಂಗಳವಾರ ಸಂಜೆ ಪಂಡಿತ್ ಪುಟ್ಟರಾಜ ಗವಾಯಿಗಳ ವೇದಿಕೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮದ ಉದ್ಘಾಟಿಸಿ ಮಾತನಾಡಿದರು.

ಕ್ಷೇತ್ರನಾಥ ಶ್ರೀ ಗುರು ಬಸವೇಶ್ವರ ಸ್ವಾಮಿಯ ಆಶೀರ್ವಾದ ಪಡೆದು ನಾಡಿನ ಎಲ್ಲ ರಂಗದಲ್ಲಿ ನಾವು ನೊಡ ಬಹುದು. ಎಲೆ ಮರೆಯ ಕಾಯಿಯಂತೆ ಇರುವ ಕಲಾವಿದರನ್ನು ಗುರಿತಿಸಿ ಅವರಿಗೆ ವೇದಿಕೆ ಕಲ್ಪಿಸುವ ನಿಟ್ಟಿನಲ್ಲಿ ನಿರಂತರವಾದ ಸೇವೆಯನ್ನು ಕಲ್ಪತರು ಕಲಾ ಟ್ರಸ್ಟ್ ಕಾರ್ಯ ಶ್ಲಾಘನೆ ವ್ಯಕ್ತಪಡಿಸಿದರು.

ಯೊಗ, ಸಂಗೀತ, ಭರತನಾಟ್ಯ, ರಂಗಭೂಮಿ, ಜಾನಪದ ಇತರೆ ಕಲಾ ಪ್ರಕಾರಗಳು ನಮ್ಮ ನಿತ್ಯ ಜೀವನದಲ್ಲಿ ಮಾಡುವುದರಿಂದ ಏಕಾಗ್ರತೆ, ರಕ್ತಸಂಚಾರ ಸುಲಭವಾಗುತ್ತದೆ. ಮನಸ್ಸು ಹತೋಟಿಲ್ಲಿರುವುದರ ಜೊತೆಗೆ ಸಧೃಡವಾದ ಆರೋಗ್ಯವಂತರಾಗಿ ಎಂದು ಶ್ರೀ ಮತಿ ಸಿಂಧು ಗಿರೀಶ್ ಉಪನ್ಯಾಸಕರು ಹೇಳಿದರು. ಕಿರುತೆರೆಯ ನಟಿ ಕುಮಾರಿ ನಂದಿನಿ ನಿಧನಕ್ಕೆ ಎರಡು ನಿಮೀಷ ಮೌನಚರಣೆ ನಡೆಯಿತು. ಹಿರಿಯ ಸಂಗೀತ ಕಲಾವಿದ ಜಂಬೂರು ಕುಮಾರ ಸ್ವಾಮಿ ಹಾರ್ಮೋನಿಯಂ ವಾದ್ಯ ನುಡಿಸುವ ಮೂಲಕ ಸಾಂಸ್ಕೃತಿಕ ಕಾರ್ಯಕ್ರಮದ ಚಾಲನೆ ನೀಡಿದರು. ನಾದ ಲಹರಿ ಸಂಗೀತ ಪಾಠ ಶಾಲೆ ಮಕ್ಕಳಿಂದ ನಾಡ ಗೀತೆ, ರೈತ ಗೀತೆ, ಅಂಬೇಡ್ಕರ್ ಗೀತೆ, ದೇಶ ಭಕ್ತಿ ಗೀತೆ ಹಾಡಿದರು.

ಸ್ವರ ಸಂಗಮ ಸಂಗೀತ ಪಾಠ ಶಾಲೆ ವಿದ್ಯಾರ್ಥಿಗಳು ಸುಗಮ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು. ಶ್ರೀ ಗುರು ಕೊಟ್ಟೂರೇಶ್ವರ ಭರತನಾಟ್ಯ ಶಾಲೆ, ಹಂಸಪ್ರೀಯಾ ನತ್ಯನಿಕೇತನ ಕಲಾ ಟ್ರಸ್ಟ್ ವತಿಯಿಂದ ಭರತನಾಟ್ಯ, ರೊಷನ್ ಕುಮಾರ್, ಇಕ್ಷುಧ್ ಬಿ ಎಂ ಮಿಮಿಕ್ರೀ, ಚಲನಚಿತ್ರ ನಟ ಪಿ ಕೆ ಇಂದ್ರಜಿತ್ ದೇಶ ಭಕ್ತಿ, ಗೀತೆ, ಕುಮಾರಿ ನಿವೇದಿತಾ, ಶ್ರೀ ಮತಿ

ಶಾಂತ ಪಿ ಡಿ ಓ ಇವರು ಪಂಡಿತ್ ಪುಟ್ಟರಾಜ ಗವಾಯಿ ಗಳ ಗೀತೆ ಹಾಡಿದರು.

ಕಲಾವಿದ ವೈ ಸಿದ್ದೇಶ್ ಮಾತನಾಡಿದರು ಚಿಗ-ಟೇರಿ ಕೊಟ್ರೇಶಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಹಿರಿಯ ರಂಗಭೂಮಿ ಕಲಾವಿದ ದೇವೇಂದ್ರಪ್ಪ, ಮಲ್ಲಪ್ಪ ಗುಂಡ್ಲನೂರು ಗ್ರಂಥಾಪಾಲಕ, ಶ್ರೀಮತಿ ಲಲಿತಾ ಕಾಳಚಾರಿ ಗ್ರಾ ಪಂ ಸದಸ್ಯೆ. ಸಿಂಧೂ ಗಿರೀಶ್, ಶ್ರೀಮತಿ ಶ್ವೇತ, ಕುಮಾರಿ ಪ್ರೀಯಾಂಕ ಸಂಗೀತ ಶಿಕ್ಷಕಿ, ಶಾಂತಮ್ಮ ಪಿ ಡಿ ಓ, ಬಿ, ಕೆ ಟಿ ಸಿದ್ದರಾಮೇಶ್ ಶಿಕ್ಷಕರು, ಮಠದ ನಟರಾಜ, ಇಂದ್ರಜಿತ್ ಪಿ ಕೆ, ಸಿದ್ದೇಶ್, ಚಿಗಟೇರಿ ಕೊಟ್ರೇಶಿ ನಿವೇದಿತಾ ಇತರರು ವೇದಿಕೆ ಯಲ್ಲಿ ಇದ್ದರು.

# ಸಂವಿಧಾನ ಸಮಾನ ಅವಕಾಶಗಳನ್ನು ಒದಗಿಸಿದೆ: ರಾಮರಡ್ಡೆಪ್ಪ ಹಾಲಕೇರಿ

• ಮಲ್ಲಮ್ಮ ನುಡಿ ವಾರ್ತೆ ಕುಕನೂರ:

ಭಾರತದ ಪ್ರಜೆಗಳಿಗೆಲ್ಲ ಸಂವಿಧಾನ ಸಮಾನ ಅವಕಾಶಗಳನ್ನು ಒದಗಿಸಿದೆ ಸಾಮಾನ್ಯ ಪ್ರಜೆಯೂ ದೇಶದ ಪ್ರಧಾನ ಮಂತ್ರಿ ಆಗುವಂತೆ ಮಾಡಿದೆ-

ಪ್ರಜೆಗಳಿಂದ ಪ್ರಜೆಗಳಿಗಾಗಿ ಪ್ರಜೆಗಳಿಗೋಸ್ಕರ, ನಿರ್ಮಾಣ ವಾಗಿರುವ ಸರ್ಕಾರವೇ ಪ್ರಜಾಸರ್ಕಾರ ಎಂದು ಇಟಗಿಯ ಸರ್ಕಾರಿ ಆದರ್ಶ ವಿದ್ಯಾಲಯದ ಪ್ರಾಚಾರ್ಯರಾದ ರಾಮರಡ್ಡೆಪ್ಪ ಹಾಲಕೇರಿ ತಳಹದಿಯ ಮೇಲೆ ಕಾರ್ಯಾಂಗ, ಶಾಸಕಾಂಗ, ನ್ಯಾಯಾಂಗ ಸೃಷ್ಠಿಯಾದವು, ನಮ್ಮ ಸಂವಿಧಾನವು ದೇಶದ ಸಾಮಾನ್ಯ ಪ್ರಜೆಯೂ ಸರ್ಕಾರಿ ನೌಕರ, ಜನ ನಾಯಕ, ಮುಖ್ಯಮಂತ್ರಿ, ಪ್ರಧಾನ ಮಂತ್ರಿ ಆಗುವಂತೆ ಮಾಡಿದೆ ಎಂದರು.

ಈ ಸಂದರ್ಭದಲ್ಲಿ ಎಸ್ ಡಿಎಂಸಿ ಅಧ್ಯಕ್ಷ ಕಳಕನಗೌಡ ಸಾದರ, ಪಿಯು ಕಾಲೇಜಿನ ಪ್ರಾಚಾರ್ಯರಾದ ಬೀರಪ್ಪ, ಶಿಕ್ಷಕರಾದ ಜಯಪ್ಪ ಕನಕಮ್ಮನವರ್,



ಹೇಳಿದರು.

ತಾಲೂಕಿನ ಇಟಗಿ ಗ್ರಾಮದ ಸರ್ಕಾರಿ ಆದರ್ಶ ವಿದ್ಯಾಲಯದಲ್ಲಿ 77ನೇ ಗಣರಾಜ್ಯೋತ್ಸವ ದಿನಾಚರಣೆಯನ್ನು ಆಚರಿಸಲಾಯಿತು ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದವರು,

ನಮ್ಮ ದೇಶ 1947 ರಂದು ಸ್ವತಂತ್ರಗೊಂಡಿತು, ಭಾರತ ರತ್ನ ಡಾ. ಬಿ ಆರ್ ಅಂಬೇಡ್ಕರ್ ರವರ ನೇತೃತ್ವದಲ್ಲಿ ದೇಶದ ಅಖಂಡತೆಗೆ ಒಪ್ಪುವಂತೆ ಸಂವಿಧಾನವು ರೂಪಗೊಂಡು 1950 ಜನೇವರಿ 26 ರಂದು ಜಾರಿಗೊಂಡಿತು. ಪ್ರಜಾಪ್ರಭುತ್ವದ ಜಗದೀಶ ಅಜ್ಜಣ್ಣನವರ್, ರಂಗಪ್ಪ ಓಲೆಕಾರ್, ಬಸಮ್ಮ ಮೇಟಿ, ಶರಣಪ್ಪ ಬೊಮ್ಮಲೇಕರ್, ನಾಗರಾಜ ಸೋನಾಗ, ರೋಹಿಣಿ, ಸಂತೋಷ್ ಕುಮಾರಿ, ಶ್ವೇತ ಹಳ್ಳಿ, ಶ್ರೀದೇವಿ ಬೆಳದಡಿ, ಮುರಾರಿ ಭಜಂತ್ರಿ, ರಮೇಶ್ ಕೆ ಟಿ, ವಿಜಯಲಕ್ಷ್ಮಿ, ಶ್ವೇತ ಬನ್ನಿಕೊಪ್ಪ, ಪೂಜಾ, ಭೀಮಾಂಬಿಕ, ರಹಿಮನ್, ಹಾಗೂ ಬಸವರಾಜ, ಸೇರಿದಂತೆ ಎಸ್ ಡಿ ಎಮ್ ಸಿ ಯ ಪದಾಧಿಕಾರಿಗಳು ಸದಸ್ಯರು ಇತರರು ಶಿಕ್ಷಕರು ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿ ವಿದ್ಯಾರ್ಥಿನಿಯರು ಇತರರು ಉಪಸ್ಥಿತರಿದ್ದರು.

### ಪ್ರವಾಸೋದ್ಯಮ ಅಭಿವೃದ್ಧಿ ಯೋಜನೆಗಳ ಕುರಿತು ಸಭೆ

# ಬಾದಾಮಿ ಪಟ್ಟದಕಲ್ಲು ಐಹೊಳೆ ಸಮಗ್ರ ಅಭಿವೃದ್ಧಿಗೆ ಡಿಪಿಆರ್



• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ಜಿಲ್ಲೆಯ ಬಾದಾಮಿ, ಪಟ್ಟದಕಲ್ಲ ಹಾಗೂ ಐಹೊಳೆ ಪ್ರವಾಸಿ ತಾಣಗಳ ಸಮಗ್ರ ಅಭಿವೃದ್ಧಿಗೆ ವಿಸ್ತೃತ ಯೋಜನಾ ವರದಿ (ಡಿಪಿಆರ್) ತಯಾರಿಸುವಂತೆ ಸಂಸದ ಪಿ.ಸಿ.ಗದ್ದಿಗೌಡರ ಹೇಳಿದರು. ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಬಾದಾಮಿ, ಪಟ್ಟದಕಲ್ಲ ಹಾಗೂ ಐಹೊಳೆ ಪ್ರವಾಸಿ ತಾಣಗಳ ಸಮಗ್ರ ಅಭಿವೃದ್ಧಿ ಯೋಜನೆಗಳ ಕುರಿತು ಜರುಗಿದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯದಿಂದ ಜಿಲ್ಲೆಯ ಪ್ರವಾಸಿ ತಾಣಗಳನ್ನು ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ಅಂದಾಜು 200 ಕೋಟಿ ರೂ.ಗಳ ಸಮಗ್ರ ವಿಸ್ತೃತ ಯೋಜನಾ ವರದಿ ಸಿದ್ದಪಡಿಸಬೇಕಿದೆ. ಪ್ರವಾಸಿ ತಾಣಗಳ ವ್ಯಾಪ್ತಿಯ ಸ್ಥಳೀಯ ಅಧಿಕಾರಿಗಳ ಗಣನೆಗೆ ತೆಗೆದುಕೊಂಡು ಯೋಜನಾ ವರದಿ ಸಿದ್ದಪಡಿಸುವಂತೆ ಆರ್ಕಿಟೆಕ್ಟ ಪ್ರಶಾಂತ ಹಲಗಲಿಯವರಿಗೆ ತಿಳಿಸಿದರು. ಬಾದಾಮಿ ಎಪಿಎಂಸಿ ಜಮೀನಿನಲ್ಲಿ ಮುಖ್ಯವಾಗಿ ಪಾರ್ಕಿಂಗ್ ಪ್ಲಾಜಾ ನಿರ್ಮಾಣ ಮಾಡುವುದು, ಅಲ್ಲಿಂದ ಗುಹಾಂತರ ದೇವಾಲಯಕ್ಕೆ ಹೋಗಲು ಸಂಪರ್ಕ ರಸ್ತೆ ನಿರ್ಮಾಣದ ಯೋಜನೆ, ಪ್ರವಾಸಿಗರಿಗೆ ಶೌಚಾಲಯ ಸೇರಿದಂತೆ ಇತರೆ ಮೂಲಭೂತ ಸೌಕರ್ಯಗಳ ಅಭಿವೃದ್ಧಿ, ಅಗಸ್ತ್ಯತೀರ್ಥ ಹೊಂಡದ ಸುತ್ತಲೂ ಗ್ಯಾಲರಿ ಜೊತೆಗೆ ಸಂಗೀತ ಕಾರಂಜಿ ಸೇರಿದಂತೆ ಇತರೆ ಅಭಿವೃದ್ಧಿ ಕೆಲಸಗಳನ್ನು ಡಿಪಿಆರ್‌ಗಳಲ್ಲಿ ಸೇರಿಸಿಕೊಳ್ಳಲು ಅವರು ತಿಳಿಸಿದರು.

ಅದೇ ರೀತಿ ಪಟ್ಟದಕಲ್ಲ ಹಾಗೂ ಐಹೊಳೆ ಪ್ರವಾಸಿ ತಾಣಗಳ ಅಭಿವೃದ್ದಿಗೆ ಯೋಜನೆ ರೂಪಿಸಲು ತಿಳಿಸಿದರು. ಜಿ.ಪಂ ಸಿಇಓ ಶಶಿಧರ ಕುರೇರ ಮಾತನಾಡಿ, ಮುಖ್ಯವಾಗಿ ಬಾದಾಮಿಯಲ್ಲಿ ಪಾರ್ಕಿಂಗ್ ಪ್ಲಾಜಾ, ಅಗಸ್ತ್ಯತೀರ್ಥ ಹೊಂಡ ಅಭಿವೃದ್ದಿ ಯಾವ ರೀತಿಯಾಗಿ ಮಾಡುತ್ತೀರಿ ಎಂಬುದರ ಬಗ್ಗೆ ಮಾಹಿತಿ ಹಾಗೂ ಪಟ್ಟದಕಲ್ಲ ಹಾಗೂ ಐಹೊಳೆ ಅಭಿವೃದ್ದಿಗೆ ಕೈಗೊಂಡ ಯೋಜನೆಗಳ ಬಗ್ಗೆ ಡ್ರಾಪ್ಟ ಮಾಹಿತಿ ನೀಡಲು ತಿಳಿಸಿದರೆ ಅದರಲ್ಲಿ ಏನು ಬದಲಾವಣೆ ಮಾಡಬೇಕು. ಏನು ಸೇರಿಸಬೇಕು ಎಂಬುದರ ಬಗ್ಗೆ ಮಾಹಿತಿ ನೀಡಲು ಸಾಧ್ಯವಾಗುತ್ತದೆ. ಅವಶ್ಯಕತೆಗೆ ಅನುಗುಣವಾಗಿ ಮೊದಲು ಯೋಜನೆ ರೂಪಿಸಿ, ನಂತರ ಇತರೆ ಅಭಿವೃದ್ದಿಯ ಬಗ್ಗೆ ಚರ್ಚೆ ಮಾಡಲಾಗುವುದೆಂದು ತಿಳಿಸಿದರು.

ಜಿಲ್ಲಾಧಿಕಾರಿ ಸಂಗಪ್ಪ ಮಾತನಾಡಿ, ಮೊದಲು ಪ್ರವಾಸಿ ತಾಣಗಳ ಅಭಿವೃದ್ದಿಯ ದೃಷ್ಟಿಕೋನ ಇಟ್ಟುಕೊಂಡು ಯೋಜನಾ ವರದಿ ಸಿದ್ದಪಡಿಸಬೇಕು. ಪ್ರವಾಸಿ ತಾಣಗಳ ಪ್ರಸ್ತುತ ವಸ್ತುಸ್ಥಿತಿ, ಪಾರಂಪರಿಕ ತಾಣಗಳ ಸಂರಕ್ಷಣೆ, ಸ್ಥಳೀಯ ಉದ್ಯೋಗ ಸೃಷ್ಟಿ, ಮೂಲಸೌಕರ್ಯ ಸುಧಾರಣೆ, ರಸ್ತೆ ಸಂಪರ್ಕ, ಪಾರ್ಕಿಂಗ್ ವ್ಯವಸ್ಥೆ, ಕುಡಿಯುವ ನೀರು ಹಾಗೂ ವಸತಿ ಸೇರಿದಂತೆ ಅಗತ್ಯ ಮೂಲಸೌಕರ್ಯಗಳ ಗಣನೆಗೆ ತೆಗೆದುಕೊಳ್ಳಬೇಕು ಎಂದು ತಿಳಿಸಿದರು. ವಿಡಿಯೋ ವರ್ಚ್ಯೂಲ ಮೂಲಕ ಮಾತನಾಡಿದ ಆರ್ಕಿಟೆಕ್ಟ್ ಪ್ರಶಾಂತ, ಪ್ರವಾಸಿ ತಾಣಗಳಲ್ಲಿ ಮುಖ್ಯವಾಗಿ ಗುಣಮಟ್ಟದ ಹೋಟಲ್‌ಗಳ ಕೊರತೆ ಇದೆ. ವಿದೇಶದಿಂದ ಬರುವ ಪ್ರವಾಸಿಗರಿಗೆ ಗುಣಮಟ್ಟದ ಊಟ ಸಿಗುವಂತೆ ಮಾಡಬೇಕು. ಪಟ್ಟದಕಲ್ಲು, ಐಹೊಳೆಯಲ್ಲಿ ಆ ವ್ಯವಸ್ಥೆ ಇರುವದಿಲ್ಲ. ಅದರಂತೆ ಹಂಪಿ, ಬಾದಾಮಿ, ಲಕ್ಕುಂಡಿ ಪ್ರವಾಸಿ ತಾಣಗಳಿಗೆ ಸರ್ಕ್ಯೂಟ್ ಆಗಬೇಕು. ಅಲ್ಲದೇ ಹುಬ್ಬಳ್ಳಿಯಲ್ಲಿ ವಿಮಾನ ನಿಲ್ದಾಣ ಇರುವದರಿಂದ ಹುಬ್ಬಳ್ಳಿಯಿಂದ ಬಾದಾಮಿ ನೇರವಾಗಿ ಬರಲು ಹವಾನಿಯಂತ್ರಿತ ಬಸ್‌ಗಳ ಸೌಲಭ್ಯ ಆಗಬೇಕು. ಕೆಂದೂರು ಕೆರೆ ಅಭಿವೃದ್ಧಿ ಪಡಿಸುವ ಮೂಲಕ ಅಲ್ಲಿ ಜಂಗಲ್ ರೇಸಾಲ್ಟಗೆ ಪ್ರಸ್ತಾವನೆ ಮಾಡಬಹುದು ಎಂದರು. ಸಭೆಯಲ್ಲಿ ಉಪವಿಭಾಗಾಧಿಕಾರಿ ಸಂತೋಷ ಜಗಲಾಸರ, ಭಾರತೀಯ ಪುರಾತತ್ವ ಇಲಾಖೆಯ ಉಪ ಅಧೀಕ್ಷಕ ಶ್ರೀಗುರು ಭಾಗಿ, ಪ್ರವಾಸೋದ್ಯಮ ಇಲಾಖೆಯ ಉಪನಿರ್ದೇಶಕ ಜಿ.ಎಸ್.ಹಿತ್ತಲಮನಿ, ಬಾದಾಮಿ ತಹಶೀಲ್ದಾರ ಎಸ್.ಬಿ.ಬೊಮ್ಮನ್ನವರ, ಬಾದಾಮಿ ಪುರಸಭೆ ಮುಖ್ಯಾಧಿಕಾರಿ ಬಂದೇನವಾಜ ಸೇರಿದಂತೆ ತಾಪಂ ಕಾರ್ಯನಿರ್ವಾಹಕ ಅಧಿಕಾರಿಗಳು ಉಪಸ್ಥಿತರಿದ್ದರು.

### ಹಳೆ ಮಲ್ಲಾಪೂರ ಗ್ರಾಮದಲ್ಲಿರುವ ಮಲ್ಲಯ್ಯನ ಗುಡ್ಡದಲ್ಲಿ

# ಸಸಿ ನೆಡುವ ಕಾರ್ಯಕ್ಕೆ ಜಿಲ್ಲಾಧಿಕಾರಿ ಚಾಲನೆ



• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ತಾಲೂಕಿನ ಹಳೆ ಮಲ್ಲಾಪೂರ ಗ್ರಾಮದಲ್ಲಿರುವ ಮಲ್ಲಯ್ಯನ ಗುಡ್ಡದಲ್ಲಿ 2 ಸಾವಿರ ಸಸಿಗಳನ್ನು ನೆಡುವ ಕಾರ್ಯಕ್ಕೆ ಜಿಲ್ಲಾಧಿಕಾರಿ ಸಂಗಪ್ಪ ಬುಧವಾರ ಚಾಲನೆ ನೀಡಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಅರಣ್ಯ ಇಲಾಖೆ ಹಾಗೂ ನಾಗರಾಳ-ನಾಯನೇಗಲಿ ಇಐಡಿ ಪ್ಯಾರಿ ಇಂಡಿಯಾ ಲಿಮಿಟೆಡ್ ಸಹಯೋಗದಲ್ಲಿ ಹಮ್ಮಿಕೊಂಡ ಸಸಿ ನೆಡುವ ಕಾರ್ಯಕ್ಕೆ ಚಾಲನೆ ನೀಡಿ ಮಾತನಾಡಿದ ಅವರು ಪರಿಸರ ಸಂರಕ್ಷಣೆ ಮಾಡುವ ಉದ್ದೇಶದಿಂದ ಮಲ್ಲಯ್ಯನ ಗುಡ್ಡದಲ್ಲಿ ವಿವಿಧ ಜಾತಿಯ ಒಟ್ಟು 2 ಸಾವಿರ ಸಸಿಗಳನ್ನು ನೆಡುವ ಕಾರ್ಯಕ್ಕೆ ಚಾಲನೆ ನೀಡಲಾಗಿದೆ. ಗುಡ್ಡದ ಪ್ರದೇಶಗಳಲ್ಲಿ ಸಸಿ ನೆಡುವುದರಿಂದ ಮಣ್ಣು ಕೊಚ್ಚುವಿಕೆಯನ್ನು ತಡೆಯಬಹುದಾಗಿದೆ. ಜಲಸಂಪನ್ಮೂಲ ಸಂರಕ್ಷಣೆ ಹಾಗೂ ಹವಾಮಾನ ಸಮತೋಲನಕ್ಕೆ ಸಹಕಾರಿಯಾಗಿದೆ ಎಂದು ತಿಳಿಸಿದರು.

ಹಸಿರು ಪರಿಸರ ನಿರ್ಮಾಣದತ್ತ ಜಿಲ್ಲಾಡಳಿತ ಮುಂದಾಗಿದ್ದು, ಜಿಲ್ಲೆಯಲ್ಲಿರುವ ಪ್ರತಿಯೊಂದ ಶುಗರ್ಸ್ ಕಾರ್ಖಾನೆಗಳ ಸಿಎಸ್‌ಆರ್ ಅನುದಾನಡಿಯಲ್ಲಿ ಅರಣ್ಯ ಇಲಾಖೆಯ ಸಹಯೋಗದೊಂದಿಗೆ ನಿಗಧಿಪಡಿಸಿದ ಸ್ಥಳಗಳಲ್ಲಿ ಗಿಡ, ಮರಗಳನ್ನು ಬೆಳೆಸಲು ಎಲ್ಲ ಕಾರ್ಖಾನೆಗಳಿಗೆ ತಿಳಿಸಲಾಗಿತ್ತು. ಅದರಂತೆ ನಾಗರಾಳ-ನಾಯನೇಗಲಿ ಇಐಡಿ ಪ್ಯಾರಿ ಶುಗರ್ಸ್ ಇಂಡಿಯಾ ಲಿಮಿಟೆಡ್‌ನವರು ಬಾಗಲಕೋಟೆ ತಾಲೂಕಿನ ಮಲ್ಲಯ್ಯನ ಗುಡ್ಡದಲ್ಲಿ ಸಸಿ ನೆಡುವ ಕಾರ್ಯಕ್ಕೆ ಮುಂದಾಗಿರುವುದು ಸಂತೋಷದ ವಿಷಯವಾಗಿದೆ ಎಂದರು.

ಇದೇ ರೀತಿಯ ಅರಣ್ಯ ಇಲಾಖೆ ಹಾಗೂ ಕಾರ್ಖಾನೆಗಳ ವ್ಯಾಪ್ತಿಯಲ್ಲಿ ಬರುವ ಸ್ಥಳಗಳಲ್ಲಿ ಸಸಿಗಳನ್ನು ನೆಟ್ಟು ಪರಿಸರ ಸಂರಕ್ಷಿಸುವ ಕಾರ್ಯ ಹಮ್ಮಿಕೊಳ್ಳಲಾಗಿದೆ. ಮೆಲ್‌ಬ್ರೋ ಶುಗರ್ಸ್‌ನವರಿಗೆ ಮುಚಖಂಡಿ ಕೆರೆ ಆವರಣ, ಬಾಡಗಂಡಿಯಲ್ಲಿರುವ ಬೀಳಗಿ ಶುಗರ್ಸ್‌ನವರಿಗೆ ಬಾಡಗಂಡಿ ಮತ್ತು ಚಿಕ್ಕಸಂಗಮ, ಜೆಮ್ಸ್ ಶುಗರ್ಸ್‌ದವರಿಗೆ ಸುನಗ ಮತ್ತು ವಾರಿ ಮಲ್ಲಯ್ಯನಗುಡ್ಡ, ಬಾದಾಮಿ ಶುಗರ್ಸ್‌ಗೆ ಬಾದಾಮಿ ಗುಹೆಯ ಹತ್ತಿರ, ಕೇದಾರನಾಥ ಶುಗರ್ಸ್‌ಗೆ ಲಿಂಗಾಪೂರದಲ್ಲಿ ಸಸಿ ನೆಡಲು ಸ್ಥಳ ಗುರುತಿಸಲಾಗಿದೆ ಎಂದು ತಿಳಿಸಿದರು.

ಕೇನ್ ಫವರ್ ಲಿಮಿಟೆಡ್‌ಗೆ ಕುಳಗೇರಿ ಕ್ರಾಸ್, ನಿರಾಣಿ ಶುಗರ್ಸ್‌ಗೆ ಮುಧೋಳ, ಇಂಡಿಯನ್ ಕೇನ್ ಪಾವರ್‌ಗೆ ಉತ್ತೂರು, ರೈತರ ಸಹಕಾರಿ ಸಕ್ಕರೆ ಕಾರ್ಖಾನೆಗೆ ಮುದ್ದಾಪೂರ, ಜಮಖಂಡಿ ಶುಗರ್ಸ್‌ಗೆ ಸಾವಳಗಿ, ಖಾಜಿಬೀಳಗಿ, ಪ್ರಭುಲಿಂಗೇಶ್ವರ ಶುಗರ್ಸ್‌ಗೆ ಸಿದ್ದಾಪೂರ, ಕುಳಲಿ, ಗೋದಾವರಿ ಶುಗರ್ಸ್‌ಗೆ ತೇರದಾಳ ಮತ್ತು ಬೆಳಗಲಿ ಗುಡ್ಡ ಹಾಗೂ ಸಾಯಿಪ್ರೀಯಾ ಶುಗರ್ಸ್‌ಗೆ ಮರೆಗುಡ್ಡಿ ಗ್ರಾಮದಲ್ಲಿ ಸಸಿಗಳನ್ನು ನೆಡಲಿದ್ದಾರೆಂದು ತಿಳಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಜಿ.ಪಂ ಸಿಇಓ ಅವರು ಮಲ್ಲಯ್ಯನ ಗುಡ್ಡದ ಹತ್ತಿರ ಆಲಮಟ್ಟಿ ಹಿನ್ನೀರು ಇರುವದರಿಂದ ಸುಂದರವಾದ ಗಾರ್ಡನ್ ಮಾಡಲು ಅವಕಾಶವಿದೆ. ಈ ಗುಡ್ಡದಲ್ಲಿ ಮಲ್ಲಿಕಾರ್ಜುನ ದೇವಸ್ಥಾನವಿದ್ದು, ಸುತ್ತಲೂ ಪರಿಸರ ಬೆಳೆಸಿ, ಹಸರೀಕರಣಕ್ಕಾಗಿ ಕ್ರಮಕೈಗೊಂಡರೆ ಸುಂದರವಾದ ವಾತಾವರಣ ಸೃಷ್ಠಿಯಾಗುತ್ತದೆ. ಇದರಿಂದ ಪ್ರವಾಸಿಗರನ್ನು ಆಕರ್ಷಿಸಬಹುದಾಗಿದೆ ಎಂದು ತಿಳಿಸಿದರು.

ಪ್ರಾರಂಭದಲ್ಲಿ ಮಲ್ಲಯ್ಯನ ಗುಡ್ಡದಲ್ಲಿರುವ ಮಲ್ಲಿಕಾರ್ಜುನ ದೇವಸ್ಥಾನಕ್ಕೆ ತೆರಳಿ ದರ್ಶನ ಒಡೆಯಲಾಯಿತು. ಕಾರ್ಯಕ್ರಮದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ ಸ್ವಪ್ನಿಲ್ ಅಹಿರೆ, ಆಹಾರ ಇಲಾಖೆಯ ಜಂಟಿ ನಿರ್ದೇಶಕ ಶ್ರೀಶೈಲ ಕಂಕಣವಾಡಿ, ಉಪ ವಲಯ ಅರಣ್ಯ ಸಂರಕ್ಷಣಾಧಿಕಾರಿ ರೂಪಾ ಡಿ, ಎ.ಐ.ಡಿ ಪ್ಯಾರಿ ಇಂಡಿಯಾ ಲಿಮಿಟೆಡ್‌ನ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗ, ಸುತ್ತಮುತ್ತಲಿನ ಗ್ರಾಮ, ನಗರದ ಪ್ರಮುಖರಾದ ಮಲ್ಲಿಕಾರ್ಜುನ ಮೇಟಿ, ಶ್ರೀನಿವಾಸ ಬಳ್ಳಾರಿ, ನಾಗರಾಜ ಹದ್ಲಿ, ಡಾ.ಶೇಖರ ಮಾನೆ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಮೆಟ್ರಿಕ್ ನಂತರದ ವಿದ್ಯಾರ್ಥಿವೇತನಕ್ಕಾಗಿ ಸೂಕ್ತ ದತ್ತಾಂಶ ನೀಡಿ ನವೀಕರಿಸಿಕೊಳ್ಳಲು ಸೂಚನೆ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಶುಲ್ಕ ಮರುಪಾವತಿ ಕಾರ್ಯಕ್ರಮದಡಿ 2020-21, 2021-22, 2022-23, 2023-24, 2024-25 ಮತ್ತು 2025-26 ನೇ ಸಾಲಿನಲ್ಲಿ ವಿದ್ಯಾರ್ಥಿವೇತನಕ್ಕಾಗಿ ಅರ್ಜಿ ಸಲ್ಲಿಸಿ ಸೂಕ್ತ ದತ್ತಾಂಶ ಲಭ್ಯವಿಲ್ಲದೇ ಪಾವತಿ ಮಾಡಲು ಬಾಕಿ ಇರುವ ವಿದ್ಯಾರ್ಥಿಗಳಿಗೆ ವಿಳಂಬವಾಗುತ್ತಿದ್ದು, ವಿದ್ಯಾರ್ಥಿಗಳು ತಮ್ಮ ಆಧಾರ್, ಕೌನ್ಸೆಲಿಂಗ್ ವಿವರ ಹಾಗೂ ಹಿಂದಿನ ಶೈಕ್ಷಣಿಕ ವರ್ಷದ ಫಲಿತಾಂಶ ದತ್ತಾಂಶದ ಮಾಹಿತಿ ನವೀಕರಿಸಿಕೊಳ್ಳಬೇಕು.

ವಿದ್ಯಾರ್ಥಿಗಳು ರಾಜ್ಯ ವಿದ್ಯಾರ್ಥಿ ವೇತನ ತಂತ್ರಾಂಶದ ಮೂಲಕ ಅರ್ಜಿ ಸಲ್ಲಿಸಿರುವ ಕೆಲ ವಿದ್ಯಾರ್ಥಿಗಳಿಗೆ ತಾಂತ್ರಿಕ ಕಾರಣಗಳಿಂದ ವಿದ್ಯಾರ್ಥಿವೇತನ/ಶುಲ್ಕಮರುಪಾವತಿ ಮಾಡಲು ಸಾಧ್ಯವಾಗುತ್ತಿಲ್ಲ.

ವಿದ್ಯಾರ್ಥಿಗಳು ತಮ್ಮ ಬ್ಯಾಂಕ್ ಖಾತೆಗೆ ಆಧಾರ್ ಸಂಖ್ಯೆಯನ್ನು ಸೀಡ್ ಮಾಡಿಕೊಳ್ಳದೇ ಇರುವುದು. ವಿದ್ಯಾರ್ಥಿಗಳ ಶೈಕ್ಷಣಿಕ ದತ್ತಾಂಶದಲ್ಲಿ ಹಾಗೂ ರಾಜ್ಯ ವಿದ್ಯಾರ್ಥಿ ವೇತನ ತಂತ್ರಾಂಶದಲ್ಲಿ ನಮೂದಿಸಿರುವ ಹೆಸರಿಗೂ ವ್ಯತ್ಯಾಸವಿರುವುದು.

ಕೌನ್ಸೆಲಿಂಗ್ ಕೋರ್ಸ್ ಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಕೌನ್ಸೆಲಿಂಗ್

ದತ್ತಾಂಶ ನಮೂದಿಸದೇ ಇರುವುದು. ವಿದ್ಯಾರ್ಥಿಗಳ ಹಿಂದಿನ ಶೈಕ್ಷಣಿಕ ವರ್ಷದ ದತ್ತಾಂಶವನ್ನು ವಿಶ್ವವಿದ್ಯಾಲಯಗಳು ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದೊಂದಿಗೆ ಹಂಚಿಕೊಳ್ಳದೇ ಇರುವುದು.

ವಿದ್ಯಾರ್ಥಿಗಳು ಮೇಲ್ಕಂಡ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಿ, ಸೂಕ್ತ ಮಾಹಿತಿಯನ್ನು ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದ ವಿದ್ಯಾರ್ಥಿಗಳ ಲಾಗಿನ್, ಬಳ್ಳಾರಿ, ಸಂಡೂರು, ಸಿರುಗುಪ್ಪ ತಾಲ್ಲೂಕುಗಳ ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು ಹಾಗೂ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಲಾಗಿನ್ ನಲ್ಲಿ ಅಪ್‌ಡೇಟ್ ಮಾಡಲು ಜ.30 ರ ವರೆಗೆ ಅವಕಾಶ ನೀಡಲಾಗಿದೆ.

ವಿದ್ಯಾರ್ಥಿಗಳು ತಮ್ಮ ಮಾಹಿತಿಯನ್ನು ಅಪ್‌ಡೇಟ್ ಮಾಡದೇ ಇದ್ದಲ್ಲಿ ಅಂತಹ ವಿದ್ಯಾರ್ಥಿಗಳ ಅರ್ಜಿಗಳನ್ನು ತಿರಸ್ಕರಿಸಲಾಗುವುದು ಎಂದು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಜಲಾಲಪ್ಪ ಅವರು ತಿಳಿಸಿದ್ದಾರೆ.

# ಸುಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಮಧಸೂಧನಸಾಯಿ ಭೇಟಿ ಮೆಚ್ಚುಗೆ

• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**



ನಗರದ ಬಿವಿವಿ ಸಂಘದ ಎಚ್.ಎಸ್.ಕೆ. ಸುಪರ್ ಸ್ಪೆಶಾಲಿಟಿ ಆಸ್ಪತ್ರೆಗೆ ಭೇಟಿ ನೀಡಿದ ಮುದ್ದೇನಹಳ್ಳಿಯ ಸತ್ಯಸಾಯಿ ವಿಶ್ವ ವಿದ್ಯಾಲಯದ ಸಂಸ್ಥಾಪಕರಾದ ಸದ್ಗುರು ಮಧುಸೂಧನಸಾಯಿ, ಉತ್ತರ ಕರ್ನಾಟಕ ಭಾಗದಲ್ಲಿ ಅತ್ಯುತ್ತಮ ವೈದ್ಯಕೀಯ ಸೇವಾ ಸೌಲಭ್ಯ ಒದಗಿಸಲು ಸುಪರ್ ಸ್ಪೆಷಾಲಿಟಿ ಆಸ್ಪತ್ರೆ ಸ್ಥಾಪನೆ ಮಾಡಿರುವುದು ಒಂದು ಮಾದರಿ ನಡೆಯಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಮಂಗಳವಾರ ಆಸ್ಪತ್ರೆಗೆ ಭೇಟಿ ನೀಡಿದ ಅವರು, ಅನೇಕ ವೈದ್ಯಕೀಯ ಸಂಸ್ಥೆಗಳು ಮತ್ತು ಆಸ್ಪತ್ರೆಗಳನ್ನು ಸ್ಥಾಪಿಸಿರುವ ಬಿ.ವಿ.ವಿ ಸಂಘದ ಆರೋಗ್ಯಕ್ಷೇತ್ರದಲ್ಲಿನ ಸೇವೆ ಶ್ಲಾಘನೀಯ. ರಾಜ್ಯದ ಅತ್ಯುತ್ತಮ ಸುಪರ್ ಸ್ಪೆಷಾಲಿಟಿ ಆಸ್ಪತ್ರೆ ಇದಾಗಿದೆ ಎಂದು ಅವರು ಹೇಳಿದರು. ಬೆಂಗಳೂರಿನಂತಹ ದೊಡ್ಡ ಆಸ್ಪತ್ರೆಗಳಲ್ಲಿ ಲಭ್ಯವಿರುವ ಅಲ್ಟ್ರಾ ಹೈಬ್ರಿಡ್ ಕ್ಯಾಥಲ್ಯಾಬ್ ಸೌಲಭ್ಯ ಈ ಆಸ್ಪತ್ರೆಯಲ್ಲಿ ಲಭ್ಯವಿದೆ. ಸುಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಸ್ಥಾಪಿಸಿ ಡಾ.ವೀರಣ್ಣ ಚರಂತಿಮಠ ಅವರು ಜಿಲ್ಲೆಯ ಸಾರ್ವಜನಿಕರಿಗೆ ಅತ್ಯುತ್ತಮ ವೈದ್ಯಕೀಯ ಸೌಲಭ್ಯ ದೊರೆಯುವಂತೆ ಮಾಡಿರುವರು. ಸಾರ್ವಜನಿಕರ ಆರೋಗ್ಯ ಕುರಿತು ಅವರಿಗಿರುವ ಕಾಳಜಿಗೆ ಸುಪರ್ ಸ್ಪೆಷಾಲಿಟಿ ಆಸ್ಪತ್ರೆಯ ಸ್ಥಾಪನೆ ಒಂದು ದೃಷ್ಟಾಂತವಾಗಿದೆ. ಸಾರ್ವಜನಿಕರು ಈ ಸೌಲಭ್ಯದ ಸದುಪಯೋಗ ಪಡೆದುಕೊಳ್ಳಬೇಕು ಎಂದರು. ಮಾಜಿ ಸಚಿವ ಗೋವಿಂದ ಕಾರಜೋಳ, ಜಿಲ್ಲೆಯ ಜನರಿಗೆ ಎಚ್.ಎಸ್.ಕೆ ಸುಪರ್ ಸ್ಪೆಷಾಲಿಟಿ ಆಸ್ಪತ್ರೆ ಒಂದು ವರದಾನವಾಗಿದೆ. ಕೈಗೆಟುಕುವ ದರದಲ್ಲಿ ಸಾರ್ವಜನಿಕರಿಗೆ ವೈದ್ಯಕೀಯ ಚಿಕಿತ್ಸಾ ಸೌಲಭ್ಯ ದೊರೆಯುತ್ತಿದೆ. ಡಾ.ವೀರಣ್ಣ ಚರಂತಿಮಠ ಅವರ ಸೇವಾಮನೋಭಾವದಿಂದ ಶೈಕ್ಷಣಿಕ ಮತ್ತು ಆರೋಗ್ಯ ಕ್ಷೇತ್ರಗಳಲ್ಲಿ ಹೆಚ್ಚಿನ ಪ್ರಗತಿಯಾಗಿದೆ ಎಂದರು.

ಈ ಸಂದರ್ಭ ಬಿ.ವಿ.ವಿ ಸಂಘದ ಕಾರ್ಯಾಧ್ಯಕ್ಷ ಡಾ.ವೀರಣ್ಣ ಸಿ.ಚರಂತಿಮಠ, ಗೌರವ ಕಾರ್ಯದರ್ಶಿ ಮಹೇಶ ಎನ್.ಅಥಣಿ, ವೈದ್ಯಕೀಯ ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಅಶೋಕ ಎಮ್.ಸಜ್ಜನ (ಬೇವೂರ), ಮೆಡಿಕಲ್ ಕಾಲೇಜ್ ಪ್ರಾಚಾರ್ಯೆ ಡಾ.ಭುವನೇಶ್ವರಿ ಯಳಮಲಿ, ಎಚ್.ಎಸ್.ಕೆ ಸುಪರ್ ಸ್ಪೆಷಾಲಿಟಿ ಆಸ್ಪತ್ರೆಯ ಸಿ.ಇ.ಓ ಮತ್ತು ಮಧುಮೇಹ ತಜ್ಞ ಡಾ.ನವೀನ ವಿ.ಚರಂತಿಮಠ, ವೈದ್ಯಕೀಯ ಅಧೀಕ್ಷಕ ಡಾ.ಶ್ರೀರಾಮ ಕೋರಾ, ಉಪಪ್ರಾಚಾರ್ಯ ಡಾ.ಸಿ.ಎಸ್.ಹಿರೇಮಠ ಮತ್ತು ವಿವಿಧ ವಿಭಾಗಗಳ ವೈದ್ಯರು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

# ತೃತೀಯ ಮಂತ್ರಾಲಯದಲ್ಲಿ ಮಧ್ವನವಮಿ ಮಹಾರಥೋತ್ಸವ

• **ಮಲ್ಲಮ್ಮ ನುಡಿ ವಾರ್ತೆ ಮುದಗಲ್ಲ:**



ಕಿಲ್ಲಾದಲ್ಲಿರುವ ತೃತೀಯ ಮಂತ್ರಾಲಯವೆಂದು ಕರೆಯಲ್ಪಡುವ ಶ್ರೀ ಗುರು ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಮಂಗಳವಾರ ಮಧ್ವನವಮಿಯನ್ನು ಸಡಗರ ಸಂಭ್ರಮದಿಂದ ಆಚರಿಸಲಾಯಿತು.

ಮಧ್ವನವಮಿ ನಿಮಿತ್ಯ ಶ್ರೀ ಮಠದಲ್ಲಿರುವ ರಾಯರ ಬೃಂದಾವನಕ್ಕೆ ಬಗೆಬಗೆಯ ಹೂಗಳಿಂದ ವಿಶೇಷ ಅಲಂಕಾರ ಸೇವೆ ಮಾಡಲಾಗಿತ್ತು. ಬೆಳಗಿನ ಜಾವದಿಂದಲೂ ರಾಯರ ಬೃಂದಾವನಕ್ಕೆ ಮತ್ತು ಮಧ್ವಾಚಾರ್ಯರ ಉತ್ಸವ ಮೂರ್ತಿಗೆ ಪೂಜೆ, ಹೋಮ, ಹವನಗಳನ್ನು ಶ್ರೀ ಮಠದ ಪ್ರಧಾನ ಅರ್ಚಕ ಮಧ್ವಾಚಾರ್ಯ ಹಾಗೂ ಸೇತುರಾಮಾಚಾರ್ಯರ ನೇತ್ರತ್ವದಲ್ಲಿ ಶ್ರಧ್ಧಾ ಭಕ್ತಿಯಿಂದ ಜರುಗಿತು. ನಂತರ ಧಾರ್ಮಿಕ ಪೂಜಾ ಕಾರ್ಯಕ್ರಮಗಳು ಹಾಗೂ ಅನೇಕ ವಿಧಿ ವಿಧಾನಗಳು ಶ್ರೀ ಮಠದ ಸಮಿತಿಯವರು ಆಯೋಜಿಸಿದ್ದರು.

ಶ್ರೀ ಮಠದ ಆವರಣದಲ್ಲಿ ಭಕ್ತರ ಸಮೂಹದ ಮದ್ಯೆ ಭಜನೆಯೊಂದಿಗೆ ಸಡಗರದಿಂದ ಮಹಾರಥೋತ್ಸವ ಜರುಗಿತು. ರಥೋತ್ಸವ ಕಾರ್ಯಕ್ರಮದಲ್ಲಿ ಡಾ.ಗುರುರಾಜ ದೇಶಪಾಂಡೆ, ಧೀರೇಂದ್ರಾಚಾರ್ಯ, ನಿವೃತ್ತ ಶಿಕ್ಷಕ ವಿ.ಎಸ್. ಶೆಡ್ಲಿಗೇರಿ, ಹರ್ಷ ಕುಲಕರ್ಣಿ, ಹಿರಿಯ ಪತ್ರಕರ್ತ ರಾಘವೇಂದ್ರ ಗುಮಾಸ್ತೆ, ರಾಘವೇಂದ್ರ ದೇಶಪಾಂಡೆ, ಶ್ರೀನಿವಾಸಾಚಾರ್ಯ ಹಳ್ಳೂರ, ಹೇಮಂತ, ವೆಂಕಟೇಶ ಕುಲಕರ್ಣಿ, ಶ್ರೀಧರ ಗುಡಿ, ಗುರುರಾಜ ದೇಶಪಾಂಡೆ, ಅನಂತರಾವ್ ದೇಶಪಾಂಡೆ, ವಾಸು ಸುರಪೂರ, ಜವರೀ ಶೇಠ, ಕಿಲ್ಲಾ, ಹಾಗೂ ಮಹಿಳೆಯರು ಇದ್ದರು.

# ಮಕ್ಕಳಿಗೆ ಶಿಕ್ಷಣದ ಜತೆಗೆ ಸಂಸ್ಕಾರ ಬಹಳ ಮುಖ್ಯ

• **ಮಲ್ಲಮ್ಮ ನುಡಿ ವಾರ್ತೆ ಮುದಗಲ್ಲ:**



ಮಕ್ಕಳು ಸಮಾಜದಲ್ಲಿ ಉತ್ತಮ ನಾಗರೀಕನಾಗಿ ಬದುಕಲು ಶಿಕ್ಷಣದ ಜತೆಗೆ ಸಂಸ್ಕಾರವು ಬಹಳ ಮುಖ್ಯವಾಗಿದೆ ಎಂದು ನಂದವಾಡಗಿ-ಆಳಂದ ಪೂಜ್ಯರಾದ ಡಾ. ಅಭಿನವ ಚೆನ್ನಬಸವ ಶಿವಾಚಾರ್ಯ ಸ್ವಾಮೀಜಿ ಶನಿವಾರ ಹೇಳಿದರು.

ಪಟ್ಟಣದ ವಿರೇಂದ್ರ ಚಂದ್ರಶೇಖರ ಪಾಟೀಲ್ ಆಂಗ್ಲ ಮಾಧ್ಯಮ ಶಾಲೆಯ 15ನೇ ವಾರ್ಷಿಕೋತ್ಸವ ಸಮಾರಂಭ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಮಕ್ಕಳಿಗೆ ಮೊದಲ ಪಾಠ ಶಾಲೆ ಮನೆ, ಗುರು ತಾಯಿಯಾಗಿರುತ್ತಾಳೆ. ಆರೋಗ್ಯಕರವಾದ ಶಿಕ್ಷಣಕ್ಕಿಂತ ಅಂಕಗಳಿಗೆ ಹೆಚ್ಚಿನ ಮಹತ್ವ ಪಾಲಕರು ನೀಡಬಾರದು. ಸ್ವಾಸ್ಥ ಸಮಾಜ ನಿರ್ಮಿಸುವಲ್ಲಿ ನಾವೆಲ್ಲ ವಿಫಲರಾಗುತ್ತಿದ್ದೇವೆ. ಇತ್ತೀಚಿನ ದಿನಗಳಲ್ಲಿ ಅನಾಥಾಶ್ರಮ, ವೃದ್ದಾಶ್ರಮ, ಅಪರಾಧಗಳ ಸಂಖ್ಯೆ ಹೆಚ್ಚುತ್ತಿರುವುದು ಕಳವಳಕಾರಿ ಸಂಗತಿಯಾಗಿದೆ. ಮಕ್ಕಳು ಉತ್ತಮ ಶಿಕ್ಷಣ ಪಡೆದು ದೇಶದ, ಸಮಾಜದ ಆಸ್ತಿಯಾಗಲಿ. ಉನ್ನತ ಹುದ್ದೆಗಳಿಗೆ ಹೋಗುವ ಮೂಲಕ ಶಿಕ್ಷಣ ಸಂಸ್ಥೆಗಳ ಕೀರ್ತಿ ಹೆಚ್ಚಿಸಬೇಕು. ಶಿಸ್ತು-ಬದ್ಧ ಶಿಕ್ಷಣ ನೀಡುತ್ತಿರುವ ಸಂಸ್ಥೆ ಕಾರ್ಯ ಶ್ಲಾಘನೀಯವಾಗಿದೆ ಎಂದು ಆಶೀರ್ವಚನಾ ಮಾಡಿದರು.

ಕಾರ್ಯಕ್ರಮದಲ್ಲಿ ಲಿಂಗಸುಗೂರು ಸ್ವಾಮೀ ವಿವೇಕಾನಂದ ಶಾಲೆ ಅಧ್ಯಕ್ಷ ಶಾಂತನಗೌಡ ದಿದ್ದಗಿ ಉಪನ್ಯಾಸ ನೀಡಿದರು. ಹಟ್ಟಿ ವಿನಾಯಕ ವಿದ್ಯಾ ಸಂಸ್ಥೆಯ ಅಧ್ಯಕ್ಷ ನರಸಪ್ಪ ಯಾದವ ಮಾತನಾಡಿದರು. ಶಾಲೆಯ ವಿವಿಧ ತರಗತಿ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. 1ರಿಂದ 10ನೇ ತರಗತಿಯಲ್ಲಿ ಹೆಚ್ಚು ಅಂಕ ಪಡೆದ ಮಕ್ಕಳಿಗೆ ಸನ್ಮಾನ ಮಾಡಿದರು. ಎಸ್‌ಎಸ್‌ಎಲ್‌ಸಿಯಲ್ಲಿ ಶಾಲಾ ದಾಖಲಾತಿ ಮೀರಿ ಹೆಚ್ಚು ಅಂಕ ಪಡೆದರೆ 1ಲಕ್ಷ ರೂ. ಬಹುಮಾನ ನೀಡುವುದಾಗಿ ಸಂಸ್ಥೆ ಘೋಷಣೆ ಮಾಡಿ ಮಕ್ಕಳಲ್ಲಿ ಸ್ಪೂರ್ತಿ ತುಂಬಿದರು.

ಸಂಸ್ಥೆಯ ಗೌರವಾಧ್ಯಕ್ಷ ಚಂದ್ರಶೇಖರ ಪಾಟೀಲ್ ಯರದಿಹಾಳ, ಅಧ್ಯಕ್ಷ ಉದಯಕುಮಾರ ಕಮ್ಮಾರ, ಶಾಂತಿನಿಕೇತನ ಪಬ್ಲಿಕ್ ಶಾಲೆಯ ಆಡಳಿತಾಧಿಕಾರಿ ಮಹಿಬೂಬಸಾಬ ಕಂದಗಲ್, ಮುಖ್ಯಶಿಕ್ಷಕ ಮಲ್ಲಪ್ಪ ಮಟ್ಟೂರು ಹಾಗೂ ಸಂಸ್ಥೆಯ ಆಡಳಿತ ಮಂಡಳಿ ಪದಾಧಿಕಾರಿಗಳು, ಶಾಲಾ ಶಿಕ್ಷಕರು, ಪಾಲಕರು, ಮಕ್ಕಳು ಇದ್ದರು.

# ಕಲಾಭವನದಲ್ಲಿ ನಾಟಕ ಪ್ರದರ್ಶನ ಇಂದು

• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ಕನ್ನಡದ ಷೇಕ್ಸಪೀಯರ ಎಂದೇ ಪ್ರಸಿದ್ಧರಾದ ಕಂದಗಲ್ಲ ಶ್ರೀ ಹನುಮಂತರಾಯರು ಬರೆದ ಕಂಪನಿ ಶೈಲಿಯ 7 ನಾಟಕಗಳನ್ನು ಆಧುನಿಕ ಶೈಲಿಯಲ್ಲಿ ಸಿದ್ಧಪಡಿಸಿದ ಕಂದಗಲ್ಲರಿಗೆ ನಮಸ್ಕಾರ ಅರ್ಥಾತ್ ಕಂದಗಲ್ಲ ಭಾರತ 3:30 ತಾಸಿನ ನಾಟಕವು ಇದೇ ಜ.29 ರಂದು ಸಂಜೆ 6 ಗಂಟೆಗೆ ಬಾಗಲಕೋಟೆ ಜಿಲ್ಲೆಯ ನವನಗರದಲ್ಲಿರುವ ಕಲಾಭವನಸ ರಂಗಮಂದಿರದಲ್ಲಿ ಪ್ರದರ್ಶನಗೊಳ್ಳಲಿದೆ.

ಈಗಾಗಲೇ ರಂಗಾಯಣ ಧಾರವಾಡದ ಕೇಂದ್ರಸ್ಥಾನ ಹಾಗೂ ಮೈಸೂರು, ಬೆಂಗಳೂರು, ಶಿವಮೊಗ್ಗ, ಶೇಷಗಿರಿ ಹಾಗೂ ಬದಾಮಿಯ ಬನಶಂಕರಿ ಜಾತ್ರೆಯಲ್ಲಿ ಪ್ರದರ್ಶನಗೊಂಡು ರಂಗಾಸಕ್ತರನ್ನು ಸೆಳೆಯುವಲ್ಲಿ ಯಶಸ್ವಿಯಾಗಿದೆ. ವಿವಿಧ ಪತ್ರಿಕೆಗಳಲ್ಲಿ ಬಂದಿರುವ ವಿಮರ್ಶೆಯು ರಂಗಾಸಕ್ತರ ಗಮನ ಸೆಳೆದಿದೆ. ಮಹಾಭಾರತದ ಸನ್ನಿವೇಶಗಳ ನಾಟಕಗಳನ್ನು ಗ್ರಾಮೀಣ ಭಾಗದ ಜನರಿಗೂ ಮೆಚ್ಚುಗೆಯಾಗುವಂತೆ ರಚಿಸಿದವರು ಕಂದಗಲ್ಲ ಶ್ರೀ ಹನುಮಂತರಾಯರು ಕನ್ನಡದ ಷೇಕ್ಸಪೀಯರ ಎಂದು ಪ್ರಸಿದ್ಧರು. ಅವರು ಬರೆದ ಕಂಪನಿ ಶೈಲಿಯ 7 ನಾಟಕಗಳನ್ನು ಆಧುನಿಕ ಶೈಲಿಯಲ್ಲಿ ಜನರ ಮುಂದಿಡುವ ಕನಸು ಧಾರವಾಡ ರಂಗಾಯಣದ ನಿರ್ದೇಶಕರಾಗಿದ್ದ ದಿವಂಗತ ರಾಜು ತಾಳಿಕೋಟಿ ಅವರದ್ದಾಗಿತ್ತು. ನಾಟಕಕ್ಕೆ ಅವರು ಚಾಲನೆಯನ್ನು ನೀಡಿ ಅಕಾಲಿಕವಾಗಿ ನಮ್ಮನ್ನಗಲಿದರು. ಈಗ ಆ ಕನಸು ಕಂದಗಲ್ಲರಿಗೆ ನಮಸ್ಕಾರ ಅರ್ಥಾತ್ ಕಂದಗಲ್ಲ ಭಾರತ ಮಹಾನಾಟಕವಾಗಿ ಪ್ರಕಾಶ ಗರುಡ ಅವರ ನಿರ್ದೇಶನದಲ್ಲಿ ರಂಗದ ಮೇಲೆ ಮೂಡಿ ಬಂದಿದೆ. ಆಸಕ್ತರು ಪ್ರದರ್ಶನದ ಲಾಭ ಪಡೆದು ಯಶಸ್ವಿಗೊಳಿಸಲು ಪ್ರಕಟಣೆಯಲ್ಲಿ ಕೋರಿದ್ದಾರೆ.

# ಅಲ್ಪಸಂಖ್ಯಾತ ವಸತಿ ಶಾಲೆ : ಪ್ರವೇಶಕ್ಕೆ ಅರ್ಜಿ

• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಡಿಯಲ್ಲಿ ಪ್ರಕಸ್ತ ಸಾಲಿಗೆ ಕಾರ್ಯನಿರ್ವಹಿಸುತ್ತಿರುವ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಮುಸ್ಲಿಂ ವಸತಿ (ಆಂಗ್ಲ ಮಾಧ್ಯಮ) ಶಾಲೆ ಹಾಗೂ ಡಾ.ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆಗಳ 6ನೇ ತರಗತಿ ಪ್ರವೇಶಕ್ಕೆ ಸೇವಾ ಸಿಂಧು ಪೋರ್ಟಲ್‌ನಲ್ಲಿ ನೇರವಾಗಿ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸುವ ಕೊನೆಯ ದಿನ ಫೆಬ್ರವರಿ 10 ಆಗಿದೆ.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಅಲ್ಪಸಂಖ್ಯಾತರ ಮಾಹಿತಿ ಕೇಂದ್ರ, ಜಿಲ್ಲಾಡಳಿತ ಭವನದ ಆವರಣ, ನವನಗರ, ಬಾಗಲಕೋಟೆ, ದೂಸಂ.08354-200044, ವಿವಿಧ ಶಾಲೆಯ ಪ್ರಾಂಶುಪಾಲರು ನವನಗರ (7019248954, 8951669687), ಹುನಗುಂದ (8722722001), ಬೀಳಗಿ (9900720896), ಜಮಖಂಡಿ (8105114947), ತೇರದಾಳ (7760071723), ಮುಧೋಳ (9164468284), ಬಾದಾಮಿ (9535803345), ಸಾವಳಗಿ (9535336143) ಇವರನ್ನು ಸಂಪರ್ಕಿಸುವಂತೆ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜಗದ್ಗುರು ಪತ್ತಿನ ಸಹಕಾರ ಸೌಹಾರ್ದ ಬ್ಯಾಂಕ್ ಅಲ್ಲ ಅದು ಬೇರೆಯದೇ ರೀತಿಯ ಒಂದು ಗುಂಪು

• ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು

ಶ್ರೀ ಜಗದ್ಗುರು ಪತ್ತಿನ ಸಹಕಾರ ಬ್ಯಾಂಕ್ ಹೆಸರಿನಲ್ಲಿ ಇರುವ ಸೌಹಾರ್ದ ಬ್ಯಾಂಕ್ ಅಲ್ಲ. ಅದು ಇರುವುದು ಜನರು ಹಣವನ್ನು ಲೂಟಿ ಮಾಡುವುದಕ್ಕೆ. ಜಾತಿ ತಾರತಮ್ಯ. ಜಾತಿನಿಂದನೆ. ಸಂವಿಧಾನದ ವಿರೋಧಿ ಚಟುವಟಿಕೆ ನಡೆಸುವುದಕ್ಕೆ. ಮತ್ತು ಕಾನೂನುಗಳ ಬಾಹಿರವಾಗಿ ಕೆಲಸ ಮಾಡುವ ಅದು ಒಂದು ಅಡ್ಡ. ಎಂದು ಒಕ್ಕೂಟದ ಸಂಚಾಲಕ ಎಂ. ಗಂಗಾಧರ ಆಗ್ರಹಿಸಿದರು.

ನಗರದ ದಲಿತ ಮತ್ತು ಪ್ರಗತಿಪರ ಸಂಘಟನೆಗಳು ಒಕ್ಕೂಟ ತಾಲೂಕು ಸಮಿತಿ ವತಿಯಿಂದ ಜಗದ್ಗುರು ಪತ್ತಿನ ಸಹಕಾರ ಸಂಘ ವಿರುದ್ಧ ಘೋಷಣೆ ಕೂಗುತ್ತ ತಾಲೂಕು ತಹಶೀಲ್ದಾರ್ ಕಛೇರಿ ಮುಂಬಾಗದಲ್ಲಿ ಪ್ರತಿಭಟನೆ ನಡೆಸಿದರು.

ನಂತರ ಪ್ರತಿಭಟನೆ ಕುರಿತು ಮಾತನಾಡಿದ ಅವರು 77 ನೇ ಗಣರಾಜ್ಯೋತ್ಸವ ದಿನ ಸಿಂಧನೂರು ನಗರದ ಬಸವ ಸರ್ಕಲ್ ಬಳಿ ಬರುವ ಜಗದ್ಗುರು ಪಂಚಾಚಾರ್ಯ ಪತ್ತಿನ ಸಹಕಾರ ಸಂಘ ಕಛೇರಿಯಲ್ಲಿ ಡಾ. ಅಂಬೇಡ್ಕರ್ರವರು ಭಾವಚಿತ್ರವನ್ನು ಉದ್ದೇಶಪೂರ್ವಕವಾಗಿ ಮನುವಾದಿ ಮನಸ್ಥಿತಿಯ ಮನುಜರು ಇಡದೇ ಪೋಲಿಸ್ ಅಧಿಕಾರಿಗಳು ಎದುರಲ್ಲೇ ನಾವು ಅಂಬೇಡ್ಕರ್ ಅವರ ಪೋಟೋ ಇಡುವುದಿಲ್ಲ ಎಂದು ಹೇಳುತ್ತಿರುವುದು ಇದು ಭಾರತೀಯ ಸಂವಿಧಾನದ ವಿರುದ್ಧವಾಗಿದೆ. ಇದು ಒಂದು ಲೂಟಿ ಮಾಡುವುದಕ್ಕೆ ಹೊರಟಿರುವ ಸಹಕಾರಿ ಬ್ಯಾಂಕ್ ಶಾಶ್ವತವಾಗಿ ಮುಚ್ಚಬೇಕು ಎಂದು ಹೇಳಿದರು.



ಇದು ಸಹಕಾರಿ ಸೌಹಾರ್ದ ಬ್ಯಾಂಕ್ ಅಲ್ಲ. ಇದಕ್ಕೆ ಕಾನೂನು ಇಲ್ಲ ಎಂದರೆ. ಇದು ಸೌಹಾರ್ದ ಬ್ಯಾಂಕ್ ಆಗುವುದಕ್ಕೆ ಸಾಧ್ಯವಿಲ್ಲ. ಸಹಕಾರಿ ಇಲಾಖೆ ಇದೆ ಅದು ಒಬ್ಬರು ಸಚಿವರು ಬರುತ್ತಾರೆ. ಸೌಹಾರ್ದ ಬ್ಯಾಂಕ್ ಅದಕ್ಕೆ ಕಾನೂನು ಇದೆ. ಬೈಲಾ ಇವೆ. ಮೀಸಲಾತಿ ಪ್ರಕಾರ ಸಾರ್ವಜನಿಕರು ಹೇಗೆ ಸದ್ಬಳಕೆ ಮಾಡಿಕೊಳ್ಳಬೇಕು. ಜನರನ್ನು ಯಾವ ರೀತಿ ಡೆವಲಪ್ಮೆಂಟ್ ಮಾಡ್ಬೇಕು ಎಂಬುದು ಕಾಯ್ದೆಗಳಿವೆ. ಆದರೆ ಪಂಚಾಚಾರ್ಯ ಪತ್ತಿನ ಒಂದು ಹೆಸರುನ ಇರುವ ಲೂಟಿಕೋರರ ಒಂದು ಗುಂಪು. ಇಲ್ಲಿ ಒಂದೇ ಜಾತಿಯ ಮೇಲ್ವರ್ಗದ ಅಷ್ಟೇ ಇರುವ ಬ್ಯಾಂಕ್ ಸೌಹಾರ್ದ ಬ್ಯಾಂಕ್ ಹೇಗೆ ಆಗುವುದಕ್ಕೆ ಸಾಧ್ಯ ...? ನಾವು ಇದುವರೆಗೆ ಅಂಬೇಡ್ಕರ್ ಪೋಟೋ ಇಟ್ಟಿಲ್ಲ. ಇಡುವುದಿಲ್ಲ ನಮ್ಮಲ್ಲಿ ಚರ್ಚೆ ಆಗಿಲ್ಲ. ಎಂದು ಪೋಲಿಸ್ ಅಧಿಕಾರಿಗಳು ಎದುರಲ್ಲೇ ಹೇಳುತ್ತಾರೆ ಎಂದರೆ.. ಇವರು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇದ್ಯಾರು ಇಲ್ಲವೋ. ನಾವು ಮಾಡಿದ್ದೆ ಕಾನೂನು ಎಂದು ಹೇಳುವ ಇವರು ಪ್ರಜಾಪ್ರಭುತ್ವ ಸಂವಿಧಾನವನ್ನು ಬುಡಮೇಲು ಲೂಟಿಕೋರರ ಗುಂಪು ಇದು ಎಂದು ಆಡಳಿತ ಮಂಡಳಿ ವಿರುದ್ಧ ಒಕ್ಕೂಟದ ಸಂಚಾಲಕ ಎಂ.ಗಂಗಾಧರ ಕಿಡಿಕಾರಿದರು.

ಈ ಸಂದರ್ಭದಲ್ಲಿ ಮಾತನಾಡಿದ ಗುರುರಾಜ ಮುಕುಂದ ಅವರು ಪತ್ತಿನ ಸೌಹಾರ್ದ ಸಹಕಾರಿ ನಿಯಮಿತನಲ್ಲಿ ಯಾರೂ ಇಡಬಾರದು ಎಂದು ತೀರ್ಮಾನ ಮಾಡಿದ್ದೇವೆ." ಎಂದು ಪೊಲೀಸರ ಮುಂದೆಯೇ ಘೋಷಿಸಿದ್ದಾರೆ. ಇದು: ಕೇವಲ ಅಭಿಪ್ರಾಯವಲ್ಲ ಕೇವಲ ನಿರ್ಲಕ್ಷ್ಯವಲ್ಲ ಇದು ಕಾನೂನು, ಸಂವಿಧಾನ ಮತ್ತು ಗಣ–ರಾಜ್ಯಕ್ಕೆ ಮಾಡಿದ ಬಹಿರಂಗ ಅವಮಾನ ಎಂದು ಹೇಳಿದರು

ಸಿಂಧನೂರು ನಗರದಲ್ಲಿ ಪ್ರತಿಯೊಂದು ಸಹಕಾರ ಬ್ಯಾಂಕ್ ಗಳು ಕಾನೂನು ಪ್ರಕಾರ ತನಿಖೆ ನಡೆಸಬೇಕು. ಸಂವಿಧಾನ ಮತ್ತು ಗಣರಾಜ್ಯೋತ್ಸವಕ್ಕೆ ಮಾಡಿದ ಅಪರಾಧ ಡಾ. ಬಿ.ಆರ್. ಅಂಬೇಡ್ಕರ್ ಎಂದರೆ: ಭಾರತೀಯ ಸಂವಿಧಾನ ಸಮಾನತೆ (Article 14) ಅಸ್ಪೃಶ್ಯತೆ ನಿರ್ಮೂಲನೆ (Article 17) ಸಾಮಾಜಿಕ ನ್ಯಾಯ ಗಣರಾಜ್ಯೋತ್ಸವ ದಿನದಂದು ಅಂಬೇಡ್ಕರ್ ಭಾವಚಿತ್ರವನ್ನು ನಿರಾಕರಿಸುವುದು ಎಂದ–ರೆ: ಸಂವಿಧಾನವನ್ನು ನಿರಾಕರಿಸಿದಂತೆ. ದಲಿತ ಸಮುದಾಯದ ಅಸ್ತಿತ್ವವನ್ನೇ ತಿರಸ್ಕರಿಸಿದಂತೆ ಆಗುತ್ತದೆ ಈಗಾಗಲೇ ಆಡಳಿತ ಮಂಡಳಿ ವಿರುದ್ಧ ಎಫ್ಐಆರ್ ದಾಖಲು ಆಗಿದ್ದು. ಕೂಡಲೇ ಅವರನ್ನು ಬಂಧಿಸಿ ಕಾನೂನು ಕ್ರಮ ಜರುಗಿಸಬೇಕು. ಮತ್ತು ಸಹಕಾರಿ ಬ್ಯಾಂಕ್ ಪರವಾನಗಿ ರದ್ದು ಗೊಳಿಸಬೇಕು ಎಂದು ಛಲವಾದಿ ಮಹಾಸಭಾದ ಅಧ್ಯಕ್ಷರಾದ ಡಾ.ರಾಮಣ್ಣ ಅವರು ಮಾತನಾಡಿದರು.

ನಂತರ ತಾಲೂಕು ತಹಶೀಲ್ದಾರ್ ಗ್ರೇಡ್ 2 ಅವರಿಗೆ ದಲಿತ ಮತ್ತು ಪ್ರಗತಿಪರ ಸಂಘಟನೆಗಳು ಒಕ್ಕೂಟ ಮನವಿ ಪತ್ರ ಸಲ್ಲಿಸಿ ಒತ್ತಾಯಿಸಿದರು. ಈ ಸಂದರ್ಭದಲ್ಲಿ. ನರಸಪ್ಪ ಕಟ್ಟಿಮನೆ. ಹನುಮಂತಪ್ಪ ಗೊಮರ್ಶಿ. ಬಿ ಎನ್ ಯರದಿಹಾಳ. ತಾಲೂಕು ಮಾದಿಗ ಸಮುದಾಯ ಅಧ್ಯಕ್ಷ ವೆಂಕಟೇಶ್ ಗಿರಿಜಾಲಿ. ಹನುಮಂತಪ್ಪ. ಶಿವರಾಜ ಉಪ್ಪಲ ದೊಡ್ಡಿ ಕರಾಟೆ ಮಾಸ್ಟರ್ ಹುಸೇನಪ್ಪ . ಹನುಮಂತ ಹಂಪ್ನಾಳ . ವೀರೇಶ್ ಹಂಚಿನಾಳ. ನಿರುಪಾದಿ ಸಾಸಲಮರಿ. ಹನುಮೇಶ ಮೈತ್ರಿ. ಹೊನ್ನೂರು ಕೊಟ್ರೇಶ್ ಸುಕಾಲಪೇಟೆ.ದಲತ ಪ್ರಗತಿಪರ ಸಂಘಟನೆಗಳು ಒಕ್ಕೂಟ ಎಲ್ಲಾ ಸದಸ್ಯರು ಸೇರಿದಂತೆ ಇತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.



**ಮಾನ್ಯ ಪೌರಾಡಳಿತ ಹಾಗೂ ಹಜ್ ಸಚಿವರ ಅಧ್ಯಕ್ಷತೆಯಲ್ಲಿ ಇಂದು ವಿಕಾಸಸೌಧದ ಕೊಠಡಿ ಸಂಖ್ಯೆ 38–39ರಲ್ಲಿ ಕರ್ನಾಟಕ ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷರು ಮತ್ತು ಪದಾಧಿಕಾರಿಗಳ ಜೊತೆ ಸಭೆಯನ್ನ ನಡೆಸಿದರು. ಸದರಿ ಸಭೆಯಲ್ಲಿ ಕರ್ನಾಟಕ ರಾಜ್ಯ ಗುತ್ತಿಗೆದಾರರ ಸಂಘದ ಪದಾಧಿಕಾರಿಗಳಿಂದ ಅಹವಾಲುಗಳನ್ನು ಸ್ವೀಕರಿಸಿ ನಮ್ಮ ಸರ್ಕಾರವು ಯಾವಾಗಲೂ ನಿಮ್ಮ ಜೊತೆಯಲ್ಲಿ ಇರುತ್ತದೆ, ಸಂಘದ ವತಿಯಿಂದ ನೀಡಿರುವ ಅಹವಾಲುಗಳು ಮತ್ತು ಜ್ವಲಂತವಾಗಿರುವ ಸಮಸ್ಯೆಗಳನ್ನು ತ್ವರಿತಗತಿಯಲ್ಲಿ ಪರಿಹರಿಸುವುದಾಗಿ ಗುತ್ತಿಗೆದಾರರಿಗೆ ಭರವಸೆ ನೀಡಿದರು.**

## 17ನೇ ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವಕ್ಕೆ ವೇದಿಕೆ ಸಜ್ಜು

**ಬೆಂಗಳೂರು:** ಬೆಂಗಳೂರಿನ ಸಿನಿಮಾ ಪ್ರೇಮಿಗಳು ಕುತೂಹಲ ಮತ್ತು ನಿರೀಕ್ಷೆಯಿಂದ ಕಾಯುತ್ತಿರುವ ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದ 17ನೇ ಅವತರಣಿಕೆಗೆ ವೇದಿಕೆ ಸಜ್ಜಾಗಿದ್ದು, ಗುರುವಾರ (ಜನವರಿ 29) ಸಂಜೆ 5ಕ್ಕೆ ವಿಧಾನಸೌಧದ ಮುಂಭಾಗ ರಾಜ್ಯದ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಸಿದ್ದರಾಮಯ್ಯ ಚಿತ್ರೋತ್ಸವಕ್ಕೆ ಚಾಲನೆ ನೀಡಲಿದ್ದಾರೆ.

ಈ ಕಾರ್ಯಕ್ರಮದಲ್ಲಿ ಉಪಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ.ಶಿವಕುಮಾರ್, ವಿಧಾನ ಪರಿಷತ್‌ನ ಸಭಾಪತಿಗಳಾದ ಶ್ರೀ ಬಸವರಾಜ ಹೊರಟ್ಟಿ, ವಿಧಾನ ಸಭೆಯ ಸಭಾಧ್ಯಕ್ಷರಾದ ಶ್ರೀ ಯು.ಟಿ. ಖಾದರ್ ಉಪಸ್ಥಿತರಿರಲಿದ್ದಾರೆ. ಚಿತ್ರೋತ್ಸವದ ರಾಯಭಾರಿ ಬಹುಭಾಷಾ ನಟ ಪ್ರಕಾಶ್ ರಾಜ್ ಮತ್ತು ನಟಿ ರುಕ್ಮಿಣಿ ವಸಂತ್ ವಿಶೇಷ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಕರ್ನಾಟಕ ಚಲನಚಿತ್ರ ಅಕಾಡೆಮಿಯ ಅಧ್ಯಕ್ಷ ಸಾಧು ಕೋಕಿಲ ಉಪಸ್ಥಿತರಿರಲಿದ್ದಾರೆ.

ಸಂಜೆ 5.30ಕ್ಕೆ ಡಾ. ಜ್ಯೋತ್ಸ್ನಾ ಶ್ರೀಕಾಂ ಅವರ ನೇತೃತ್ವದಲ್ಲಿ 35 ಕಲಾವಿದರಿಂದ 'ವಿಶ್ವಸಂಗೀತ ಸಂಭ್ರಮ' ಕಾರ್ಯಕ್ರಮ ನಡೆಯಲಿದ್ದು, ಸಂಜೆ ಆರು ಗಂಟೆಗೆ ಸಭಾ ಕಾರ್ಯಕ್ರಮ ಪ್ರಾರಂಭವಾಗಲಿದೆ. ರಾತ್ರಿ 8ಕ್ಕೆ ಚಿತ್ರೋತ್ಸವದ ಉದ್ಘಾಟನಾ ವೇದಿಕೆಯಲ್ಲಿ ನೆದರ್ ಲ್ಯಾಂಡ್ ದೇಶದ 'ಪೋರ್ಟ್ ಬ್ಯಾಗೇ' ಚಿತ್ರವು ಉದ್ಘಾಟನಾ ಚಿತ್ರವಾಗಿ ಪ್ರದರ್ಶನವಾಗಲಿದೆ.

ಜನವರಿ 30ರಿಂದ ಫೆಬ್ರವರಿ 06ರವರೆಗೂ, ಈ ಚಿತ್ರೋತ್ಸವದಲ್ಲಿ 65 ದೇಶಗಳ ಸುಮಾರು 225 ಅತ್ಯುತ್ತಮ ಚಲನಚಿತ್ರಗಳು ಪ್ರದರ್ಶನಗೊಳ್ಳಲಿದ್ದು ಆಯಾ ದೇಶದ ಸ್ಥಿತಿ–ಗತಿ, ಜನ ಜೀವನ ಮತ್ತು ಸಂಸ್ಕೃತಿಯನ್ನು ಬಿಂಬಿಸಲಿವೆ. ವಿಶ್ವದ ಪ್ರತಿಷ್ಠಿತ ಚಲನಚಿತ್ರೋತ್ಸವಗಳಲ್ಲಿ ಪಾಲ್ಗೊಂಡಿದ್ದ ಅತ್ಯುತ್ತಮ ಚಲನಚಿತ್ರಗಳು ಈ ಚಿತ್ರೋತ್ಸವದಲ್ಲಿ 'ಬೆಂಗಳೂರಿನಲ್ಲಿ ಜಗತ್ತು' ಎನ್ನುವ ಶೀರ್ಷಿಕೆಯಡಿ ಈ ಚಿತ್ರೋತ್ಸವದಲ್ಲಿ ಪ್ರದರ್ಶನಗೊಳ್ಳಲಿವೆ. ಈ ಚಿತ್ರೋತ್ಸವವನ್ನು ಪ್ರತೀ ವರ್ಷವೂ ಅರ್ಥಪೂರ್ಣವಾದ ಧ್ಯೇಯವಾಕ್ಯದ ಮೂಲಕ ನಡೆಸಲಾಗುತ್ತಿದ್ದು, ಈ ಬಾರಿ ರಾಷ್ಟ್ರಕವಿ ಡಾ.ಜಿ.ಎಸ್. ಶಿವರುದ್ರಪ್ಪನವರ ಪ್ರಸಿದ್ಧ ಗೀತೆಯಾಗಿರುವ 'ಸ್ತ್ರೀ ಎಂದರೆ ಅಷ್ಟೇ ಸಾಕೆ' ಎಂಬ ಸಾಲಿನೊಂದಿಗೆ ಸ್ತ್ರೀ ಸಂವೇದನೆ, ಸಮಾನತೆಯ ದನಿ ಎಂಬ ಟ್ಯಾಗ್ ಲೈನ್ ಹೊಂದಿರುವ ಧ್ಯೇಯವಾಕ್ಯದೊಂದಿಗೆ ಆಚರಿಸಲಾಗುತ್ತಿದೆ.

ಇದಲ್ಲದೆ ಈ ಚಿತ್ರೋತ್ಸವದಲ್ಲಿ ಏಷಿಯನ್ ಸಿನಿಮಾ ಸ್ಪರ್ಧಾ ವಿಭಾಗ, ಚಿತ್ರ ಭಾರತಿ (ಭಾರತೀಯ ಸಿನಿಮಾ ಸ್ಪರ್ಧಾ ವಿಭಾಗ), ಕನ್ನಡ ಸಿನಿಮಾ ಸ್ಪರ್ಧಾ ವಿಭಾಗ, ಸಮಕಾಲೀನ ವಿಶ್ವ ಸಿನಿಮಾ, ಕನ್ನಡ ಜನಪ್ರಿಯ ಸಿನಿಮಾ, ಫಿಪ್ರೆಸ್ಕಿ – ವಿಮರ್ಶಕರ ವಾರ, ಜೀವನ ಕಥನ ಆಧಾರಿತ ಚಿತ್ರಗಳು, ದೇಶ ಕೇಂದ್ರಿತ ವಿಶೇಷ: ಪೋಲೆಂಡ್, ಭಾರತೀಯ ಉಪಭಾಷಾ ಚಲನಚಿತ್ರಗಳು, ಪುನರಾವಲೋಕನ ಮುಂತಾದ ವಿಭಾಗಗಳಡಿ ಹಲವು ಚಿತ್ರಗಳನ್ನು ಪ್ರದರ್ಶಿಸಲಾಗುತ್ತದೆ. ಕನ್ನಡದ ಮೇರು ನಟ ಪದ್ಮಭೂಷಣ ಡಾ. ರಾಜಕುಮಾರ್ ಅಭಿನಯದ ಐದು ಮಹತ್ವದ ಕನ್ನಡ ಚಲನಚಿತ್ರಗಳ ಪ್ರದರ್ಶನ, ಪೋಲೆಂಡಿನ ಪ್ರಖ್ಯಾತ ನಿರ್ದೇಶಕ ಆಂದ್ರೆ ವಾಜ್ದಾ ಅವರ ನಿರ್ದೇಶನದ ಏಳು ಪೋಲಿಷ್ ಚಲನಚಿತ್ರಗಳ ಪ್ರದರ್ಶನ, ಖ್ಯಾತ ಅಭಿನೇತ್ರಿ ಸ್ಮಿತಾ ಪಾಟೀಲ್ ಅವರ ಹೆಸರಾಂತ ಚಲನಚಿತ್ರಗಳ ಪ್ರದರ್ಶನ, ಥಾಯ್ಲೆಂಡಿನ ಖ್ಯಾತ ನಿರ್ದೇಶಕ ಅಚಿತಪಾಂಗ್ ವೀರಸೆಥಕುಲ್ ಅವರ ನಾಲ್ಕು ಪ್ರಮುಖ ಚಲನಚಿತ್ರಗಳ ಪ್ರದರ್ಶನ, ಪ್ರತಿಷ್ಠಿತ ಚಲನಚಿತ್ರೋತ್ಸವಗಳಲ್ಲಿ ಜನಮನ್ನಣೆ ಪಡೆದ ಸಮಕಾಲೀನ ಭಾರತೀಯ ಚಲನಚಿತ್ರಗಳ ಪ್ರದರ್ಶನ, ಸಂರಕ್ಷಿಸಲ್ಪಟ್ಟ ಮಹತ್ವದ ಭಾರತೀಯ ಚಲನಚಿತ್ರಗಳ ಪ್ರದರ್ಶನ ಕೂಡಾ ನಡೆಯಲಿದೆ.

# ಪಂಗನಾಮ ನಾಟಕ: ಜಿ ಆಂಜನಪ್ಪ ಡಾಕ್ಟರ್ ಪಾತ್ರದಲ್ಲಿ ಅಭಿನಯ

• ಮಲ್ಲಮ್ಮ ನುಡಿ ವಾರ್ತೆ ಪೀಣ್ಯ ದಾಸರಹಳ್ಳಿ

ಅಹಿಂದ ಹಕ್ಕುಗಳ ಹೋರಾಟ ವೇದಿಕೆ ವತಿಯಿಂದ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ 77ನೇ ಗಣರಾಜ್ಯೋತ್ಸವವನ್ನು ಪೀಣ್ಯ 2ನೇ ಹಂತದ ಅಂಬೇಡ್ಕರ್ ಸರ್ಕಲ್ ನಲ್ಲಿ ಅಹಿಂದ ಹಕ್ಕುಗಳ ಹೋರಾಟ ವೇದಿಕೆ ಸಂಸ್ಥಾಪಕ ರಾಜ್ಯಧ್ಯಕ್ಷ ಹಾಗೂ ಅಗ್ನಿ ಅಸ್ತ್ರ ಪತ್ರಿಕೆ ಸಂಪಾದ ಜಿ. ಆಂಜನಪ್ಪ ಅವರ ನೇತೃತ್ವದಲ್ಲಿ ಅದ್ದೂರಿಯಾಗಿ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮಕ್ಕೆ ಜೆಡಿಎಸ್ ರಾಜ್ಯ ಉಪಾಧ್ಯಕ್ಷ ಅಂದಾನಪ್ಪ,ನಗರಸಭಾ ಸದಸ್ಯರಾದ ಎಂ.ಶಿವಣ್ಣ, ಬಿಬಿಎಂಪಿ ಮಾಜಿ ಸದಸ್ಯರುಗಳಾದ ಭಾಗ್ಯಮ್ಮ ಕೃಷ್ಣಯ್ಯ,ಲಗ್ಗೆರೆ ನಾರಾಯಣಸ್ವಾಮಿ,ವೇಲು ನಾಯಕ್, ರಾಜಗೋಪಾಲ ನಗರ ವಾರ್ಡ್ ಕಾಂಗ್ರೆಸ್ ಬಿ. ಜಗದೀಶ್ ಕುಮಾರ್, ಶೇಂಗಾ ನಾಡು ಹಿತ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ತಿಮ್ಮರಾಜ ಗೌಡ್ರು, ಬಿಜೆಪಿ ಮುಖಂಡರಾದ ದಿನೇಶ್, ಸಮಾಜ ಸೇವಕರಾದ ಮಂಜುಳ ಮಲ್ಲೇಶ್, ಕರ್ನಾಟಕ ಬಹುಜನ ಚಳುವಳಿ ರಾಜ್ಯಾಧ್ಯಕ್ಷ ಕನಕೇನಹಳ್ಳಿ ಕೃಷ್ಣಪ್ಪ, ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳ ದೌರ್ಜನ್ಯ ನಿಯಂತ್ರಣ ಸಮಿತಿ ಸದಸ್ಯರಾದ ಮುನಿರಾಜು ಮುಂತಾದವರು



ಆಗಮಿಸಿ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡಲಾಯಿತು. ಇದೆ ವೇಳೆ ಕೆಪಿಸಿಸಿ ಕಾರ್ಮಿಕ ಘಟಕದ ರಾಜ್ಯ ಜಂಟಿ ಕಾರ್ಯದರ್ಶಿ ಎಂ.ಕೆ.ನಿಸಾರ್ ಖಾನ್ ಅವರಿಂದ ಪೌರಕಾರ್ಮಿಕ ಹಾಗೂ ಮಹಿಳೆಯರಿಗೆ ಸೀರೆ ವಿತರಣೆ ಮಾಡಲಾಯಿತು. ದಾಸರಹಳ್ಳಿ ಕ್ಷೇತ್ರದ ಜೆಡಿಎಸ್ ಪ್ರಧಾನ ಕಾರ್ಯದರ್ಶಿ ಜಿ. ಹನುಮಂತರಾಜು ಅವರಿಂದ ಶಾಲಾ ಮಕ್ಕಳಿಗೆ ನೋಟ್ ಪುಸ್ತಕ ಹಾಗೂ ಬ್ಯಾಗ್ ವಿತರಣೆ ಮಾಡಲಾಯಿತು. ಅಹಿಂದ ಕಲಾವಿದರಿಂದ ಹಾಸ್ಯ ಪಂಗನಾಮ ಸಾಮಾಜಿಕ ನಾಟಕ ಆಯೋಜಿಸಲಾಗಿತ್ತು. ಡಾಕ್ಟರ್ ಪಾತ್ರದಲ್ಲಿ ಜಿ. ಆಂಜನಪ್ಪ ಅಮೋಘವಾಗಿ ಅಭಿನಯ ನೀಡಿ ಬಂದ ಪ್ರೇಕ್ಷಕರಿಗೆ ಮೆಚ್ಚುಗೆಗೆ ಪಾತ್ರರಾದರು. ಗೌಡನ ಪಾತ್ರದಲ್ಲಿ ಎಚ್.ಸುನಿಲ್ ಕುಮಾರ್, ಪೊಲೀಸ್ ಪಾತ್ರದಲ್ಲಿ ನೀಲರಾಜು, ಹೀರೋಯಿನ್ ಪಾತ್ರದಲ್ಲಿ ನೀಲಾವತಿ, ನಿರ್ದೇಶಕರ ಪಾತ್ರದಲ್ಲಿ ಐಟಿ ರಾಮಮೂರ್ತಿ ಇನ್ನು ಮುಂತಾದ ಪಾತ್ರಧಾರಿಗಳು ಅಮೋಘವಾಗಿ ಅಭಿನಯಿಸಿದರು. ಚನ್ನಪಟ್ಟಣದ ಎಂ ಬಿ. ಮಾದೇವ್ ತಂಡದವರಿಂದ ಸಮೂಹ ಗೀತ ಗಾಯನ, ದೇಶಭಕ್ತಿ ಗೀತೆಗಳು ಹಾಗೂ ಜಗದೀಶ್ ತಂಡದವರಿಂದ ಡೊಳ್ಳು ಕುಣಿತ, ಲೋಕೇಶ್ ಮತ್ತು ತಂಡದವರಿಂದ ಗಾರಡಿ ಗೊಂಬೆ ಪ್ರದರ್ಶನ, ತನುಷ ಅವರಿಂದ ಭರತನಾಟ್ಯ ಹಾಗೂ ಸಂಜೆ ವೇದಿಕೆ ಕಾರ್ಯಕ್ರಮದಲ್ಲಿ ಮುಂತಾದ ಹಲವಾರು ವಿವಿಧ ಕಲಾತಂಡಗಳು ವೇದಿಕೆಯಲ್ಲಿ ಅಭಿನಯಿಸಿದರು. ವೇದಿಕೆ ಕಾರ್ಯಕ್ರಮದಲ್ಲಿ ಗಣ್ಯರನ್ನು ಸನ್ಮಾನಿಸಿ ಗೌರವಿಸಲಾಯಿತು. ಹಾಗೂ ಬೆಳಗ್ಗೆಯಿಂದ ಸಂಜೆ ಅವರಿಗೆ ಅನ್ನದಾನ ಏರ್ಪಡಿಸಲಾಗಿತ್ತು.

ಈ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷ ಕೆಂಪರಾಜು, ವಿಜಯ್ ಕುಮಾರ್, ನಿಂಬೆಹಣ್ಣು ರಾಜಣ್ಣ, ಮೈಕ್ ಸೆಟ್ ಬಾಬಣ್ಣ,ರೇಣುಕಮ್ಮ,ಶಿವಾನಿ,ಮಹದೇವಮ್ಮ, ಸುವರ್ಣ,ರಾಮಕೃಷ್ಣ, ಗಂಗಾ ನರಸಯ್ಯ,ನೀಲ ರಾಜು, ಮುಂತಾದವರು ಉಪಸ್ಥಿತರಿದ್ದರು.

# ಕಂದಕೂರಿಗೆ ಸಾಗರೋಪಾದಿಯಲ್ಲಿ ಹರಿದು ಬಂದ ಜನ





• ಡಿ.ಕೆ. ದೇವಿಂದ್ರ, ಯಾದಗಿರಿ

ಹಿರಿಯ ರಾಜಕೀಯ ಧುರೀಣ ಮತ್ತು ಮಾಜಿ ಶಾಸಕ ಲಿಂ.ನಾಗನಗೌಡ ಕಂದಕೂರ ಅವರ ದ್ವಿತೀಯ ಪುಣ್ಯಸ್ಮರಣೆ ಕಾರ್ಯಕ್ರಮ ಗುರಮಠಕಲ್ ತಾಲೂಕಿನ ಕಂದಕೂರ ಗ್ರಾಮದ ಅವರ ತೋಟದಲ್ಲಿ ಬುಧವಾರ ಜರುಗಿತು. ತೋಟದಲ್ಲಿನ ಕಂದಕೂರ ಅವರ ಸ್ಮಾರಕವನದನು ಪುಷ್ಪಗಳಿಂದ ಅಲಂಕರಿಸಲಾಗಿತ್ತು. ಬೆಳಗ್ಗೆ ಕಂದಕೂರ ಪರಿವಾರ ಸಮಾದಿಗೆ ಶಾಸ್ತ್ರೋಕ್ತವಾಗಿ ಪೂಜೆ ಸಲ್ಲಿಸಿದರು. ಮಧ್ಯಾಹ್ನ ಹೊತ್ತು ಏರುತ್ತಲೇ ಕಂದಕೂರ ಗ್ರಾಮಕ್ಕೆ ಯಾದಗಿರಿ ಸೇರಿದಂತೆ ನೆರೆಯ ಕಲಬುರಗಿ, ರಾಯಚೂರು, ಬೀದರ್ ಜಿಲ್ಲೆಗಳಿಂದ ನಾಗನಗೌಡ ಕಂದಕೂರ ಅವರ ಒಡನಾಡಿಗಳು ಮತ್ತು ಗುರಮಠಕಲ್ ಕ್ಷೇತ್ರದಿಂದ ಸಾವಿರಾರು ಜನರು ಸಾಗರೋಪಾದಿಯಲ್ಲಿ ಆಗಮಿಸಿ, ಕಂದಕೂರ ಅವರ ಸಮಾದಿಗೆ ಪುಷ್ಪ ನಮನ ಸಲ್ಲಿಸಿದರು. ಜನರನ್ನು ನಿಯಂತ್ರಿಸಲು ಸ್ವಯಂಸೇವಕರು ಕೆಲಕಾಲ ಪರದಾಡುವಂತಾಯಿತು. ಅಪಾರ ಪ್ರಮಾಣದಲ್ಲಿ ತಾಯಂದಿರು ಸಹ ಆಗಮಿಸಿದ್ದರು. ಜಿಲ್ಲೆಯ ವಿವಿಧ ಮಠಾಧೀಶರು ಕಂದಕೂರ ಸಮಾದಿಗೆ ವಿಶೇಷ ಪೂಜೆ ಸಲ್ಲಿಸಿದರು. ನಾಗನಗೌಡರು ತಮ್ಮ ಜೀವಿತಾವಧಿಯಲ್ಲಿ ಜನರನ್ನು ಎಷ್ಟರ ಮಟ್ಟಿಗೆ ಪ್ರೀತಿಸಿದ್ದರು ಎಂಬುದಕ್ಕೆ ಪುಣ್ಯಸ್ಮರಣೆಗೆ ಸ್ವಯಂ ಪ್ರೇರಣೆಯಿಂದ ಬಂದ ಜನತೆ ಸಾಕ್ಷೀಕರಿಸಿತ್ತು. ಅಧಿಕಾರ ಇರಲಿ, ಇಲ್ಲದಿರಲಿ ತನ್ನ ಬಳಿ ಬಂದ ಜನರನ್ನು ಅತ್ಯಂತ ಆದರದಿಂದ ಕಂಡು ಕಪ್ ಚಹಾ ಕುಡಿಸಿಯೇ ಕಳಿಸುತ್ತಿದ್ದ ನಾಗನಗೌಡರು ಇಂದಿಗೂ ಗುರಮಠಕಲ್ ಕ್ಷೇತ್ರದ ಜನರ ಮನಸ್ಸಲ್ಲಿ ಚಿರಸ್ಥಾಯಿಯಾಗಿ ನೆಲೆಯೂರಿದ್ದಾರೆ ಎಂದು ಅವರ ಅಭಿಮಾನಿಗಳು ಸ್ಮರಿಸಿಕೊಂಡರು. ಪ್ರಮುಖರಾದ ಸಿದ್ರಾಮಪ್ಪಗೌಡ ಯಕ್ಷಂತಿ, ಗೌಡಪ್ಪಗೌಡ ಮದರ್ಕಲ್, ಶ್ರೀನಿವಾಸರೆಡ್ಡಿ ಕಂದಕೂರ್, ಡಾ.ಅಶೋಕರೆಡ್ಡಿ ವಡವಟ್, ರಾಜೇಂದ್ರರೆಡ್ಡಿ ಹಂಚಿನಾಳ, ಮಲ್ಲಿಕಾರ್ಜುರೆಡ್ಡಿ, ಕಂದಕೂರ್, ಶಾಸಕ ಶರಣಗೌಡ ಕಂದಕೂರ್, ಮಹೇಂದ್ರರೆಡ್ಡಿ ಕಂದಕೂರ್, ವೆಂಕಟರೆಡ್ಡಿ ಯಕ್ಷಂತಿ, ಸುಜೀವ್ ಪಾಟೀಲ್ ಮಾನ್ವಿ ರಾಕೇಶರೆಡ್ಡಿ ಯಕ್ಷಂತಿ, ಲಿಂಗಣ್ಣಗೌಡ ಕೊಡಮ್ನಳ್ಳಿ

ಡಾ.ಅಶೋಕರಡ್ಡಿ ಅಮೀನಗಡ ಹಾಗೂ ಕಂದಕೂರ ಪರಿವಾರ, ಅಭಿಮಾನಿಗಳು ಮತ್ತು ಕಾರ್ಯಕರ್ತರು ಇದ್ದರು.

# ವಿಚಾರ ಸಂಕಿರಣ, ರಾಜ್ಯ ಪ್ರಶಸ್ತಿ ಪ್ರದಾನ 28ರಂದು

• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಧ್ವನಿ (ರಿ), ಬೆಂಗಳೂರು ಹಾಗೂ ಭಟ್ಕಳ ತಾಲ್ಲೂಕು ಘಟಕ, ಉತ್ತರ ಕನ್ನಡ ಜಿಲ್ಲೆ ಇವರ ಸಹಯೋಗದಲ್ಲಿ ಇದೇ ಜ. 28ರಂದು ಭಟ್ಕಳ ನಗರದ ನಾಗಯ–ಕ್ಷೆ ಧರ್ಮಾರ್ಥ ಸಭಾಭವನದಲ್ಲಿ ರಾಜ್ಯಮಟ್ಟದ ಪತ್ರಕರ್ತರ ವಿಚಾರ ಸಂಕಿರಣ ಹಾಗೂ ರಾಜ್ಯ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಆಯೋಜಿಸಲಾಗಿದೆ ಎಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಧ್ವನಿ ಸಂಘಟನೆಯ ಕೊಪ್ಪಳ ಜಿಲ್ಲಾ ಘಟಕದ ಅಧ್ಯಕ್ಷ ಸುನಿಲ್ ಕುಮಾರ್ ಮಠದ ಅವರು ತಿಳಿಸಿದ್ದಾರೆ.

ಭಾನುವಾರ ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ಕಾರ್ಯಕ್ರಮಕ್ಕೆ ಪರಮಪೂಜ್ಯ ಮಾರುತಿ ಗುರುಜಿ ಅವರು ದಿವ್ಯ ಸಾನಿಧ್ಯ ವಹಿಸಲಿದ್ದು, ಶ್ರೀ ವಿಶ್ವ ವೀರಾಂಜನೇಯ ಮಹಾಸಂಸ್ಥಾನಂ, ಹೇಮಪುರ ಮಹಾಪೀಠಮ್, ಶ್ರೀಕ್ಷೇತ್ರ ಬಂಗಾರಮಕ್ಕಿ, ಹೊನ್ನಾವರದ ಧರ್ಮಾಧಿಕಾರಿ ಅವರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಕಾರ್ಯಕ್ರಮವನ್ನು ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗಡೆ ಹಾಗೂ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಹಾಗೂ ಉತ್ತರ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ಎಸ್. ವೈದ್ಯ ಅವರು ಉದ್ಘಾಟಿಸವರು.

ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಯನ್ನು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಧ್ವನಿ (ರಿ) ಸಂಸ್ಥಾಪಕ ರಾಜ್ಯಾಧ್ಯಕ್ಷ ಬಂಗ್ಲೆ ಮಲ್ಲಿಕಾರ್ಜುನ ಅವರು ಮಾತನಾಡುವರು. ಭಟ್ಕಳ ತಾಲ್ಲೂಕು ಅಧ್ಯಕ್ಷ ಶಂಕರ ನಾಯ್ಕ ಅವರು ಅಧ್ಯಕ್ಷತೆ ವಹಿಸಲಿದ್ದಾರೆ.

ವಿಶೇಷ ಆಹ್ವಾನಿತರಾಗಿ ಗ್ಯಾರಂಟಿ ನ್ಯೂಸ್ ಚಾನಲ್‌ನ ಮುಖ್ಯಸ್ಥೆ ರಾಧಾ ಹಿರೇಗೌಡರ್ ಹಾಗೂ ಟಿ.ಎಸ್.ಆರ್. ಪ್ರಶಸ್ತಿ ಪುರಸ್ಕೃತ ಗಂಗಾಧರ ಮೊದಲಿಯಾರ್ ಅವರು ಭಾಗವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಮಾಜಿ ಸಚಿವ ಶಿವಾನಂದ ನಾಯ್ಕ, ತಂಜಿಂ ಸಂಸ್ಥೆಯ ಅಧ್ಯಕ್ಷ ಇನಾಯತುಲ್ಲಾ ಶಾಬಂದ್ರಿ, ಉಚ್ಚ ನ್ಯಾಯಾಲಯ ವಕೀಲ ನಾಗೇಂದ್ರ ನಾಯ್ಕ, ಸುಪ್ರೀಂ ಕೋರ್ಟ್ ವಕೀಲ ಮಂಜುನಾಥ ಮಾಡ್ಯಾಳ್, ಹಿರಿಯ ಪತ್ರಕರ್ತ ಜಗಳೂರು ಲಕ್ಷ್ಮಣ ರಾವ್, ಭಟ್ಕಳ ತಹಶೀಲ್ದಾರ ನಾಗೇಂದ್ರ ಕೋಳ ಶೆಟ್ಟಿ, ಡೆಪ್ಯೂಟಿ ಸೂಪರಿಂಟೆಂಡೆಂಟ್ ಆಫ್ ಪೊಲೀಸ್ ಮಹೇಶ್ ಎಂ.ಕೆ., ಪುರಸಭೆಯ ಮುಖ್ಯಾಧಿಕಾರಿ ವೆಂಕಟೇಶ್ ನಾವುಡ ಸೇರಿದಂತೆ ಹಲವಾರು ಗಣ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದು ಹೇಳಿದರು.

ಇದಲ್ಲದೆ ವಿವಿಧ ಜಿಲ್ಲೆಗಳ ಅಧ್ಯಕ್ಷರು, ಹಿರಿಯ ಪತ್ರಕರ್ತರು ಹಾಗೂ ಮಾಧ್ಯಮ ಪ್ರತಿನಿಧಿಗಳು ಸಮಾರಂಭದಲ್ಲಿ ಉಪಸ್ಥಿತರಿರಲಿದ್ದಾರೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಕುಕನೂರ ತಾಲ್ಲೂಕು ಘಟಕದ ಅಧ್ಯಕ್ಷ ಚಂದ್ರು ಆರ್. ಭಾನಾಪುರ, ಪ್ರಧಾನ ಕಾರ್ಯದರ್ಶಿ ಬಸವರಾಜ ಕೊನಾರಿ, ಕೊಪ್ಪಳ ಜಿಲ್ಲಾ ಸಹ ಕಾರ್ಯದರ್ಶಿ ವೀರಯ್ಯ ವಿ ಹಿರೇಮಠ, ಉಪಾಧ್ಯಕ್ಷ ಮುರಾರಿ ಭಜಂತ್ರಿ, ಗೌರವಾಧ್ಯಕ್ಷ ಮಹೇಶ್ ಕಲ್ಮಠ, ಭೀಮಾಶಂಕರ ಪಾಣೆಗಾಂವ, ಮುತ್ತು ತೊಂಟದಾರ್ಯ ಮಠ, ವೀರಯ್ಯ ಕುರ್ತಕೋಟಿ, ವಿಶ್ವನಾಥ ಪಟ್ಟಣಶೆಟ್ಟಿ, ಮಲ್ಲಯ್ಯ ಗದಗಿನ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.

PRGI NO. 120927
(RNINO:KARKAN/2011/48371)